# ಪ್ರಯಾಣ

## ಸಂಪೂರ್ಣ ಸಭಾ ಸ್ಥಾಪನೆ

### ಸಭಾ ನಾಯಕತ್ವದ ತಂಡಗಳಿಗಾಗಿ  ಒಂದು ತರಬೇತಿ ಕೈಪಿಡಿ

“ಸಭೆಯನ್ನು ಕಟ್ಟುವುದಕ್ಕಾಗಿ ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ, ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು  ಸೌವಾರ್ತಿಕರನ್ನಾಗಿಯೂ, ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು”. (ಎಫೆಸದವರಿಗೆ 4:11-12).

**ಡ್ವೈಟ್ ಸ್ಮಿತ್**

**ಅಂತರಾಷ್ಟ್ರೀಯ ಸಂಪೂರ್ಣ ಸಭಾ ಸ್ಥಾಪನೆ**

ಸಂಪೂರ್ಣ ಸಭಾ ಸ್ಥಾಪನೆಯು ಜಗತ್ತಿನಾದ್ಯಂತ ದೇಶಗಳು, ಪ್ರದೇಶಗಳು ಮತ್ತು ಪಟ್ಟಣಗಳಲ್ಲಿ ಸಭೆಯ ಕ್ರೋಡೀಕರಣದ ಮೂಲಕ ಈ ಸ್ಥಳಗಳನ್ನು ಪೂರ್ಣವಾಗಿ ಸುವಾರ್ತೀಕರಣಗೊಳಿಸುವುದರೆಡೆಗೆ ಸಭಾ ನಾಯಕರೊಂದಿಗೆ ಸಹಭಾಗಿಗಳಾಗುವುದರ ಮೂಲಕ ದೇವರನ್ನು ಮಹಿಮೆಪಡಿಸುವುದಕ್ಕಾಗಿ ಅಸ್ತಿತ್ವದಲ್ಲಿದೆ.

# ವಿಷಯಾಂಶಗಳು

ಮುನ್ನುಡಿ…………………………………

ಪೀಠಿಕೆ: ಪಾಶ್ಚಾತ್ಯ ಸಭೆ ಮತ್ತು ಅಂತಿಯೋಕ್ಯ ಸಭೆ……….

1. ಗುರಿಯಾಧಾರಿತವಾಗುವುದು……………….
2. ದೇವರಜನರನ್ನು ಸಬಲೀಕರಿಸುವುದು(ಬಲಪಡಿಸುವುದು)……
3. ಪರಿಣಾಮಕಾರಿತ್ವವನ್ನು ಅಳೆಯುವದು…….
4. ಪರಸ್ಪರಾವಲಂಬಿತ ನಾಯಕತ್ವವನ್ನು ಬಿತ್ತುವುದು(ಬೆಳೆಸುವದು)……………..
5. ಪಕ್ಕಕ್ಕೆ (ಪಾರ್ಶ್ವ) ಮುಖಮಾಡುವದು…………
6. ಬೇರೆ ಸಭೆಗಳೊಂದಿಗೆ ಸಂಬಂಧಿಸುವುದು…
7. ದೂರದರ್ಶಿಸುವುದರ ಮೂಲಕ ಜಾಗತಿಕವಾಗಿ ಉದ್ದೇಶಪೂರ್ವಕವಾಗಿರುವುದು……….

ಮುಕ್ತಾಯ: ಪಾಶ್ಚಾತ್ಯ ಸಭೆಗೆ ನವೀಕರಣ ಬೇಕಿದೆ………..

ಅನುಬಂಧ A: ಅಧ್ಯಾಯದಿಂದ ನವೀಕರಣ ಪ್ರಶ್ನೆಗಳು……………..

ಅನುಬಂಧ B: ಅಧ್ಯಾಯದಿಂದ ಮುಖ್ಯ ಪ್ರಶ್ನೆಯಲ್ಲಿ ಏಕಾಂಗಿಯಾಗಿರುವದು………

ಅನುಬಂಧ C: ನಿಮ್ಮ ಸಭೆಗಳಲ್ಲಿ ಸೇವಾ ಸಮುದಾಯಗಳನ್ನು ಕಟ್ಟುವದು (ಸಣ್ಣ ಗುಂಪುಗಳು)……..

ಅನುಬಂಧ D: ಸಂಪೂರ್ಣ ಸಭಾ ಸ್ಥಾಪನೆಯ ಬೋಧನೆಗಾಗಿ ಮೂರು ರೂಪು/ಹೊರರೇಖೆಗಳು…….

# ಮುನ್ನುಡಿ

ಪ್ರಯಾಣ: ಸಂಪೂರ್ಣ ಸಭಾ ಸ್ಥಾಪನೆಯು ಸಭಾ ನಾಯಕತ್ವದ ತಂಡಗಳಿಗಾಗಿ ಇರುವ ಒಂದು ತರಬೇತಿ ಕೈಪಿಡಿಯಾಗಿದೆ. ಅಂತಿಯೋಕ್ಯ ಸಭೆ ಮತ್ತು ಇತರೆ ಹೊಸ ಒಡಂಬಡಿಕೆಯ ಸಭೆಗಳಲ್ಲಿ ಕಾಣುವ ಮಾದರಿಯೆಡೆಗೆ ಇದು ಪಾಶ್ಚಾತ್ಯ ಸಭೆ ಮತ್ತು ಅದರ ನಾಯಕತ್ವದಲ್ಲಿ ನವೀಕೃತ ಅಭ್ಯಾಸ(ಆಚರಣೆ)ಗಳನ್ನು ನಿರೀಕ್ಷಿಸುತ್ತದೆ. ಅದು - ಸ್ವಾರ್ಥರಹಿತ ಶಿಷ್ಯತ್ವ, ಸೇವೆ ಮಾಡುವುದು ಮತ್ತು ಲೋಕಕ್ಕೆಲ್ಲ ಸುವಾರ್ತೆಯನ್ನು ಕೊಂಡೊಯ್ಯಲು ದೇವಜನರನ್ನು ಕಳುಹಿಸುವುದರ ಒಂದು ಮಾದರಿಯಾಗಿದೆ. ಸಭೆಗಳು ಬೆಳೆದು, ಮುಂಬರುವ ವರ್ಷಗಳಿಗಾಗಿ ಶುದ್ಧೀಕರಿಸುವಂತೆ ಪ್ರಯಾಣದಲ್ಲಿನ ಪಾಠಗಳು ಒಂದು ಅಡಿಪಾಯವನ್ನು ಹಾಕುವವು.

ಈ ಪುಸ್ತಕದಲ್ಲಿನ ಪಾಠಗಳು ಸಂಪೂರ್ಣ ಸಭಾ ಸ್ಥಾಪನೆ ಮತ್ತು ವ್ಯಕ್ತಿಗತ ಸಭೆಗಳ ನಡುವಿನ ಒಂದು ತರಬೇತಿ ಸಂಬಂಧದ ಮೂಲಕ ಸಂಪೂರ್ಣ ಸಭಾ ಸ್ಥಾಪನೆಯ ಸಂಯೋಗದೊಂದಿಗೆ ಮಾಡುವುದಕ್ಕಾಗಿ ಸೃಷ್ಟಿಸಲ್ಪಟ್ಟಿವೆ. ಆದಾಗ್ಯೂ ಪಾಠಗಳು ಪ್ರತಿ ಸಭೆಯ ನಾಯಕರುಗಳಿಂದ ನಡೆಸಲ್ಪಡುತ್ತವೆ. ಪ್ರತಿಯೊಂದು ಪಾಠವನ್ನು ತಿಂಗಳಿಗೊಮ್ಮೆ ಅಥವಾ ತಿಂಗಳಿಗೆ ಎರಡು ಬಾರಿ ಬೋಧಿಸಬಹುದಾಗಿದೆ ಮತ್ತು ಪ್ರತಿ ಭೇಟಿಗೆ ಕನಿಷ್ಟ ಪಕ್ಷ ನಾಲ್ಕು ಗಂಟೆಗಳ ಅಗತ್ಯವಿದೆ.

ಪ್ರಯಾಣವನ್ನು ನವೀಕರಣದ ಜೊತೆಯಲ್ಲೇ ಉಪಯೋಗಿಸಬೇಕಿದೆ: ಡ್ವೈಟ್ ಸ್ಮಿತ್ ರವರ ಸಭೆಯ ಜೀವನದಲ್ಲಿನ ದೈವೀಕ ವಿನ್ಯಾಸದ ಮೇಲೆ ಒಂದು ಸಮೀಕ್ಷೆ ಇದು ನವೀಕರಣಕ್ಕೆ ಒಂದು ಜೊತೆಗಾರ ಮತ್ತು ಅದರ ಅನ್ವಯಿಸುವಿಕೆ ಸಹ ಆಗಿದೆ. ಈ ಅಧ್ಯಯನವನ್ನು ತೆಗೆದುಕೊಳ್ಳುವವರು ಮೊದಲು ನವೀಕರಣವನ್ನು ಓದಲೇಬೇಕೆಂಬುದು ಇದರರ್ಥವಾಗಿದೆ.ಅಧ್ಯಯನದ ಅವಧಿಯಲ್ಲಿ ಭಾಗಿಯಾಗುವವರು ಡ್ವೈಟ್ ಸ್ಮಿತ್ ರವರ ತುದಿಯಲ್ಲಿ ಏಕಾಂಗಿಯಾಗಿರುವುದು ಬರಹವನ್ನು ಸಹ ತೆಗೆದುಕೊಂಡು ಓದಬೇಕಿದೆ. ಪ್ರಯಾಣವು ಅಪೊಸ್ತಲರ ಕೃತ್ಯದಲ್ಲಿ ಬರೆಯಲಾದ ಅಂತಿಯೋಕ್ಯ ಸಭೆಯ ಏಳು ಗುಣಲಕ್ಷಣಗಳನ್ನು ಪರಿಶೀಲಿಸುತ್ತದೆ ಮತ್ತು ಚರ್ಚಿಸುತ್ತದೆ. ಇವುಗಳು ಪ್ರಾಯೋಗಿಕವಾಗಿ ಸಹ ಇದ್ದು, ಸಂಪೂರ್ಣ ಸಭಾ ಸ್ಥಾಪನೆಯ ಮುಖ್ಯ ನಿರ್ಣಯಗಳ ತಾಂತ್ರಿಕ ಶ್ರಮೆಯ ದುಡಿತವಾಗಿದೆ.

ಸಂಪೂರ್ಣ ಸಭಾ ಸ್ಥಾಪನೆಯು 1996 ರಲ್ಲಿ ಡ್ವೈಟ್ ಮತ್ತು ಪ್ಯಾಟ್ಟಿ ಸ್ಮಿತ್ ರಿಂದ ತಮ್ಮ ಜನರ ಕ್ರಿಸ್ತ-ಕೇಂದ್ರಿತ ಜೀವಿತದ ಮೂಲಕ ಸುವಾರ್ತೆಯೊಂದಿಗೆ ಅವರ ಕ್ಷೇತ್ರಗಳನ್ನು ಪೂರ್ಣಗೊಳಿಸುವುದಕ್ಕಾಗಿ ಜಗತ್ತಿನಾದ್ಯಂತ ಸಭೆಗಳೊಂದಿಗೆ ಪಾಲುದಾರರಾಗಲು ಸ್ಥಾಪಿಸಲ್ಪಟ್ಟಿತು. ಇದರ ಉದ್ದೇಶವು(ಗುರಿ) ಜಗತ್ತಿನಾದ್ಯಂತ ಸಭೆಯ ಕ್ರೋಢೀಕರಣದ ಮೂಲಕ ಆ ಸ್ಥಳಗಳ ಪೂರ್ಣ ಸುವಾರ್ತೀಕರಣದೆಡೆಗೆ, ದೇಶ, ಪ್ರದೇಶ ಮತ್ತು ಪಟ್ಟಣಗಳಲ್ಲಿನ ಸಭಾ ನಾಯಕರುಗಳೊಂದಿಗೆ

ಪಾಲುದಾರರಾಗುವುದರ ಮೂಲಕ ದೇವರನ್ನು ಮಹಿಮೆಪಡಿಸುವುದಾಗಿದೆ. ಇದರ ಪರಿಣಾಮವಾಗಿ ಕಳೆದ ನಾಲ್ಕು ದಶಕಗಳಲ್ಲಿ, SCP ಯು ಜಗತ್ತಿನಾದ್ಯಂತ ಸಾವಿರಾರು ನಾಯಕರುಗಳೊಂದಿಗೆ ಕೆಲಸ ಮಾಡುವ ಅವಕಾಶವನ್ನು ಪಡೆದುಕೊಂಡಿತ್ತು. 2060 ರಲ್ಲಿ, ಪ್ರಾಥಮಿಕವಾಗಿ ಮುಖ್ಯ ರಾಷ್ಟ್ರಗಳಲ್ಲಿ(ಸಮೀಪದ ರಾಷ್ಟ್ರಗಳ ಒಂದು ಪ್ರಾಮುಖ್ಯ ಸಂಖ್ಯೆಗಳ ನಡುವೆ ಭೌಗೋಳಿಕ ಪ್ರಭಾವವನ್ನು ಹೊಂದಿರುವ ರಾಷ್ಟ್ರಗಳು) ಜಗತ್ತಿನ ಸುತ್ತ ಹತ್ತು ಪ್ರದೇಶಗಳಲ್ಲಿ ಅಂತಿಯೋಕ್ಯ ಸಭೆಗಳ ಒಂದು ಅಭಿವೃದ್ಧಿಶೀಲ ಸಂಪರ್ಕಜಾಲವನ್ನು ಕಾಣಲು ಅಪೇಕ್ಷಿಸುತ್ತದೆ.

ದೇವರು ಪಾಪದಿಂದ ಬಿದ್ದುಹೋದ ಮನುಷ್ಯನನ್ನು ತನ್ನೊಂದಿಗೆ ಸಂಬಂಧದಲ್ಲಿರಲು ಮತ್ತು ಈ ಲೋಕದಲ್ಲಿ ತನ್ನ ಪ್ರತಿನಿಧಿಯಾಗಿರಲು ಆತನನ್ನು ಮರುಸ್ಥಾಪಿಸುವ ಒಂದು ಗುರಿಯಲ್ಲಿ(ಯೋಜನೆ) ಇದ್ದಾನೆ - ಸೃಷ್ಟಿಯಲ್ಲಿ ಆತನು ಇಟ್ಟಿರುವ ವಿನ್ಯಾಸದಂತೆ, ನಾವಿರುವ ಸ್ಥಳಗಳನ್ನೆಲ್ಲ ಯೇಸುಕ್ರಿಸ್ತನ ಸುವಾರ್ತೆಯಿಂದ ಶುದ್ಧೀಕರಿಸುವುದರ ಮೂಲಕ ತನ್ನೆಲ್ಲ ಹಿಂಬಾಲಕರು ಸಹ ತನ್ನೊಂದಿಗೆ ಈ ಗುರಿಯನ್ನು ಹೊಂದಿರಬೇಕೆಂದು ಆತನು ಅಪೇಕ್ಷಿಸುತ್ತಾನೆ. ಸುವಾರ್ತೆಯಿಂದ ಒಂದು ಭೂಗೋಳದ ಶುದ್ಧೀಕರಣವೆಂದರೆ - ಪ್ರತಿಯೊಬ್ಬ ಪುರುಷ,  ಸ್ತ್ರೀ ಮತ್ತು ಮಗು ಸಹ ಎಲ್ಲಿಗೂ ಹೋಗದೆ ಸುವಾರ್ತೆಯನ್ನು ನೋಡಿ, ಕೇಳಿ ಮತ್ತು ಅನುಭವಿಸುವಂತೆ ಜನಭರಿತ ಪ್ರದೇಶಗಳೊಳಗೆ ಯೇಸು ಕ್ರಿಸ್ತನ ಬೆಳೆಯುತ್ತಿರುವ ಹಿಂಬಾಲಕರಿಂದ ಯುಕ್ತಿಯುತವಾಗಿ ಮತ್ತು ಜವಾಬ್ಧಾರಿಯುತವಾಗಿ ಮಹಾ ಆದೇಶವನ್ನು ಕೊಂಡೊಯ್ಯುವುದಾಗಿದೆ.

ಸಂಪೂರ್ಣ ಸಭಾ ಸ್ಥಾಪನೆಯು  ನಾಲ್ಕು ಮುಖ್ಯ ಸಂಕಲ್ಪಗಳನ್ನು ಒಳಗೊಂಡಿದೆ:

1. ದೇವರು ಈ ಲೋಕದಲ್ಲಿ ಏನನ್ನೇ ಮಾಡಹೊರಟಿದರೂ ಸಹ ಆತನದನ್ನು ಎಲ್ಲಾ ಕ್ರೈಸ್ತರ, ಸಭೆಯ ಮೂಲಕ ಮಾಡುವವನಾಗಿದ್ದಾನೆ.

2. ದೇವರು ಈ ಲೋಕದಲ್ಲಿ ಕ್ರೈಸ್ತರ ಮೂಲಕ ಏನನ್ನೇ ಮಾಡಹೊರಟಿದರೂ ಸಹ, ಆತನದನ್ನು ಪ್ರಾಥಮಿಕವಾಗಿ ಒಂದು ವಿಕೇಂದ್ರೀಕೃತ ರಚನೆಯ ಮೂಲಕ ಮಾಡುವವನಾಗಿದ್ದಾನೆ.

3. ದೇವರು ಈ ಲೋಕದಲ್ಲಿ ಏನನ್ನೇ ಮಾಡಹೊರಟಿದರೂ ಸಹ, ಆತನದನ್ನು ವರವು ತಮ್ಮ ಮೊದಲ ಆದ್ಯತೆಯಾಗಿದೆ ಎಂಬುವಲ್ಲಿ ತನ್ನ ಜನರನ್ನು ಸಬಲೀಕರಿಸುವ ನಾಯಕರುಗಳ ಮೂಲಕ ಮಾಡುವವನಾಗಿದ್ದಾನೆ.

4. ದೇವರು ಈ ಲೋಕದಲ್ಲಿ ಯಾವುದೇ ಸ್ಥಳಿಯ ವಲಯದ ಹೊಣೆಗಾರಿಕೆಯ ಹೊರತಾಗಿ ಏನನ್ನೇ ಮಾಡಹೊರಟಿದರೂ ಸಹ, ಆತನದನ್ನು ದೂರದರ್ಶಕ ಅಥವಾ ಜಾಗತಿಕವಾಗಿ ಉದ್ದೇಶಪೂರ್ವಕವಾಗಿ, ಪವಿತ್ರಾತ್ಮ ಮತ್ತು ಸ್ಥಳೀಯ ನಾಯಕರುಗಳ ಸಹಯೋಗದಂತಹ ಸಭೆಗಳ ಸಂಪನ್ಮೂಲಗಳ ಮೂಲಕ ಮಾಡುವವನಾಗಿದ್ದಾನೆ.

ಆ ಸಂಕಲ್ಪಗಳನ್ನು ಪಾಲಿಸುವ ಯಾವುದೇ ಸಭೆಗಳಿಗಿರುವ ಎರಡು ಪ್ರಶ್ನೆಗಳು:

1. ಈ ಸ್ಥಳಕ್ಕಾಗಿ ದೇವರು ಬಯಸುವುದೇನು?

2. ಈ ಸ್ಥಳದಲ್ಲಿ ತಾನು ಬಯಸುವುದನ್ನು ದೇವರು ಮಾಡಿದರೆ ಅದು ಹೇಗೆ ತೋರುತ್ತದೆ?

ಪೌಲ ಮತ್ತು ಆತನ ದಿನಗಳಲ್ಲಿ ಪಾಶ್ಚಾತ್ಯ ಜಗತ್ತಿನುದ್ದಕ್ಕೂ ಆತನೊಂದಿಗೆ ಕೆಲಸ ಮಾಡಿದ ಜನರ ತಂಡಗಳು ಇದೇ ರೀತಿಯ ಯೋಚನೆಯನ್ನು ಅಪ್ಪಿಕೊಂಡವು. ಪೌಲನ ಜೀವನ ಮತ್ತು ಸೇವೆಯು ಪವಿತ್ರಾತ್ಮನ ಉದ್ದೇಶಿತ ದೃಷ್ಟಿಯು ರೋಮನ್ ಸಾಮ್ರಾಜ್ಯದುದ್ದಕ್ಕೂ ಹರಿಯುತ್ತಿರುವದನ್ನು ಪ್ರತಿಬಿಂಬಿಸುವಂತೆ ಮತ್ತು ಪೌಲ ಮತ್ತು ಆತನ ತಂಡವನ್ನು ಸರಿಯಾದ ಸ್ಥಳಗಳಲ್ಲಿ ಸರಿಯಾದ ಕ್ಷಣಗಳಿಗೆ ಮುನ್ನಡೆಸುವಂತೆ ತೋರುತ್ತದೆ ಎಂಬುದಾಗಿ F. F. ಬ್ರೂಸ್ ರವರು ಹೇಳುತ್ತಾರೆ.

ಆಯಕಟ್ಟಿನ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳು, ಪ್ರತಿಯಾಗಿ ಸ್ವಾಭಾವಿಕವಾಗಿ ತಮ್ಮ ಸುತ್ತಲಿನ ಮತ್ತು ನಡುವಿನ ಅನೇಕ ಭೌಗೋಳಿಕ ಪ್ರದೇಶಗಳನ್ನು ಮುಟ್ಟಬೇಕೆಂಬುದು ಗುರಿಯಾಗಿ ತೋರುತ್ತದೆ. ಕೇವಲ ಅದು ಮಾತ್ರವಲ್ಲ, ಈ ಪ್ರಕ್ರಿಯೆಯಲ್ಲಿ ಅಪೊಸ್ತಲನು ಎಂದಿಗೂ ಏಕಾಂಗಿಯಾಗಿರಲಿಲ್ಲ; ಈ ಯೋಜನೆಯಲ್ಲಿ ಆತನ ಜತೆ ಕೆಲಸ ಮಾಡಲು ಹೆಚ್ಚು ಕಡಿಮೆ ಇಪ್ಪತ್ತೈದು ಜನರು ಆತನಿಗಿದ್ದರು. ಅಲ್ಪ ಸಮಯದಲ್ಲಿ ಪೌಲೊ ಮತ್ತು ಆತನ ಸಹ ಕೆಲಸಗಾರರು ಮಾಡಿದಂತೆ ನಮ್ಮ ಜಗತ್ತಿನ ಮೇಲೆ ಅದೇ ರೀತಿಯ ಅಭೂತಪೂರ್ವವಾದ ಪರಿಣಾಮವನ್ನು ನಾವು ಕಾಣುವಂತೆ ಇಂದು ದೇವರಾದ ಕರ್ತನು ತಾನೇ ತನ್ನ ಸಭೆಯನ್ನು ನವೀಕರಣಗೊಳಿಸಲಿ.

# ಪೀಠಿಕೆ

# ಪಾಶ್ಚಾತ್ಯ ಸಭೆ ಮತ್ತು ಅಂತಿಯೋಕ್ಯ ಸಭೆ

ಇಂದಿನ ಪಾಶ್ಚಾತ್ಯ ದೇವಶಾಸ್ತ್ರ ಮತ್ತು ಸಭೆಯ ಆಚರಣೆಯ ಹೆಚ್ಚಿನ ಭಾಗ ಹೊಸ ಒಡಂಬಡಿಕೆಯ ಸಭೆಯ ಚಿತ್ರಣದೊಂದಿಗೆ ಸರಿಹೊಂದುವುದಿಲ್ಲ, ತಮ್ಮ ಮನೆಗಳಲ್ಲಿ ಕೆಲಸದ ಕ್ಷೇತ್ರಗಳಲ್ಲಿ ಮತ್ತು ಸಮುದಾಯಗಳಲ್ಲಿ ಸುವಾರ್ತೆಯ ಪ್ರಕಾರ ಜೀವಿಸುವುದಕ್ಕೆ ಜನರನ್ನು ತರಬೇತಿಗೊಳಿಸಿ ನಮ್ಮ ಸುತ್ತಲೂ ಕಳೆದುಹೋಗಿರುವವರಿಗೆ ಸುವಾರ್ತೆಯನ್ನು ಕೊಂಡೊಯ್ಯುವುದರ ಬದಲು ನಮ್ಮ ಸಭೆಗಳಿಗೆ ಜನರನ್ನು ಸೆಳೆದುಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಕ್ರೈಸ್ತತ್ವಕ್ಕೆ ಒಂದು ಬಂದು ನೋಡುವ ಕಲ್ಪನೆಯೊಳಗೆ ನಾವು ಸಿಕ್ಕಿಕೊಂಡಿದ್ದೇವೆ . ನಾಮಧೇಯ ಕ್ರೈಸ್ತತ್ವದ ಹೊರತಾಗಿ ನಮ್ಮ ದಿನಗಳಲ್ಲಿ ಇದು ಜನ್ಮತಳೆಯುತ್ತಿದೆ, ನಮ್ಮ ಸಭೆಗಳಿಗೆ ಎಷ್ಟು ಜನರು ಬರುತ್ತಾರೆ, ಎಷ್ಟಾಗಿ ಅವರು ಕೊಡುತ್ತಾರೆ ಮತ್ತು ನ್ಯಾಯಯುತವಾಗಿ ಅವರು ಸಂತೋಷವಾಗಿದ್ದರೋ ಎಂಬುದಕ್ಕಿಂತ ಮಿಗಿಲಾಗಿ ಯಶಸ್ಸಿನ ಕುರಿತ ಸತ್ಯವೇದದ ಕೆಲವು ಮಾಪನಗಳು ನಮಗೆ ಕೊಡಲ್ಪಟ್ಟಿವೆ. ನಾವು ಹೇಗೆ ಸ್ವಾರ್ಥಪರರಾಗಿದ್ದೇವೆಂಬುದರ ಅರಿವಿಲ್ಲದಂತೆ ನಮ್ಮ ಯೋಚನೆಯೊಳಗೆ ಇದು ಆಳವಾಗಿ ಕೆತ್ತಲ್ಪಟ್ಟಿದೆ. ಸಾಮಾನ್ಯವಾಗಿ ಮತ್ತು ಪ್ರತ್ಯೇಕವಾಗಿ ಕ್ರೈಸ್ತರಲ್ಲಿ ಸಹ ನಮ್ಮ ಸಂಸ್ಕೃತಿಯ ಸ್ವಾರ್ಥಪರತೆಯ ಕುರಿತಾಗಿ ನಾವು ಶೋಕಿಸುತ್ತೇವೆ. ಆದರೆ ಸಭೆಯ ಕುರಿತ ನಮ್ಮ ವಿಚಾರವೂ ಸ್ವಾರ್ಥ ಪರತೆಯಂತೆಯೇ ಇದೆ ಎಂಬುದನ್ನು ಗುರುತಿಸುವದಕ್ಕೆ ನಾವು ವಿಫಲರಾಗಿದ್ದೇವೆ! ಆಕರ್ಷಕ ನುಡಿಗಳು, ಹೊಸ ಸದಸ್ಯರ ಆಗಮನ, ಸಭೆಗೆ ಹಿಂತಿರುಗುವ ವಾರಾಂತ್ಯ, ಸಾಮಾಜಿಕ ಜಾಲತಾಣದ ಜಾಹೀರಾತುಗಳು ಸಹ ಹಲವು ಕೆಟ್ಟ ಮತ್ತು ಸತ್ಯವೇದೇತರದವು ತೀರ್ಮಾನಗಳೊಂದಿಗೆ ಒಂದು ಸಹಜವಾದ ಸಂಕಲ್ಪವನ್ನು ಸೇರಿಸುತ್ತವೆ: ಸ್ಥಳೀಯ ಸಭೆಯು ಜನರು ಹೋಗುವುದಕ್ಕಾಗಿ ಇರುವ ಒಂದು ಸ್ಥಳವಾಗಿದೆ ಹೊರತು ದೇವರೊಂದಿಗೆ ಸಂಬಂಧ ಹೊಂದುವುದಕ್ಕಾಗಿ ಯೇಸುವನ್ನು ಹಿಂಬಾಲಿಸಲು ಕರೆಯಲ್ಪಡುವ ಮತ್ತು ಜೀವನದ ಪ್ರತಿಯೊಂದು ಸಾಧ್ಯತೆಯ ನಡಿಗೆಯಲ್ಲಿ ಆತನಿಂದ ಇಡಲ್ಪಟ್ಟ ಜನರಿಗಾಗಿ ಅಲ್ಲ.

ಇದು ಅನೇಕ ದುಃಖಕರ ತೀರ್ಮಾನಗಳಿಗೆ ಅಥವಾ ಮುಕ್ತಾಯಗಳಿಗೆ ನಡೆಸುತ್ತದೆ. ಮೊದಲನೆಯದಾಗಿ, ಸಭೆಗಳು ಪರಸ್ಪರ ಸ್ಪರ್ಧೆಯಲ್ಲಿವೆ. ಎರಡನೆಯದಾಗಿ, ವಿಶೇಷವಾಗಿ ತಮ್ಮ ಸ್ವಂತ ಮನಸ್ಸುಗಳಲ್ಲಿ ಕೆಲವರು ಬೇರೆಯವುಗಳಿಗಿಂತ ಶ್ರೇಷ್ಠರಾಗಿದ್ದಾರೆ! ಮೂರನೆಯದಾಗಿ, ಸಭೆಯು ದೊಡ್ಡದಾದಷ್ಟು ಕಾರ್ಯಗಳನ್ನು ಸರಿಯಾಗಿ ಮಾಡುತ್ತದೆ. ಇದು ಕ್ರಿಸ್ತನಂತೆ ಕಾಣದಿರುವ ಜನರಿಂದ ತುಂಬಿಕೊಂಡಿರುವುದರ ಹೊರತಾಗಿಯೂ, ವಾಸ್ತವವಾಗಿ ಅವರು ಕ್ರಿಸ್ತನಂತೆ ಕಾಣಲು ಬಯಸುವುದಿಲ್ಲ, ನಾಲ್ಕನೆಯದಾಗಿ, ಸರಿಯಾದ ಕಾರ್ಯಗಳನ್ನು ಮಾಡುವುದಕ್ಕಿಂತ ಸ್ಪಷ್ಟವಾಗಿ ಕಾರ್ಯಗಳನ್ನು ಸರಿಯಾಗಿ ಮಾಡುವದು ಬಹು ಪ್ರಾಮುಖ್ಯವಾಗಿದೆ. ಐದನೆಯದಾಗಿ, ನಮ್ಮ ಸುತ್ತಲಿನ

ಜಗತ್ತಿಗೆ ಸುವಾರ್ತಾ ಸೇವಕರಾಗಿ ನಾವೆಷ್ಟು ಅಸಂಬದ್ಧರಾಗಿದ್ದೇವೆಂಬುದು ಪ್ರಾಮುಖ್ಯವಲ್ಲ; ಜನರು ನಮ್ಮ ಸಭೆಗೆ ಬರುವವರೆಗೆ ನಾವು ಸಂತುಷ್ಟರಾಗಿರುತ್ತೇವೆ.

ಆದರೂ ಲೋಕದಾದ್ಯಂತ, ಅನೇಕ ನಾಯಕರುಗಳು ಪೂರ್ಣವಾಗಿ ನಮ್ಮ ಸ್ವಾರ್ಥಪರತೆಗೆ ತದ್ವಿರುದ್ಧವಾಗಿ ನಿಲ್ಲುತ್ತಾರೆ. ಅವರ ಸಭೆಗಳ ಗಾತ್ರದ ಕುರಿತು ಮಾತನಾಡಲು ಪ್ರಯತ್ನಿಸಿರಿ, ಬದಲಾಗಿ ನೀವು ಅವರ ಪಟ್ಟಣಗಳು ಮತ್ತು ಎಷ್ಟು ಜನರು ದೇವರೊಂದಿಗೆ ಸಂಧಾನವಾಗಿಲ್ಲವೆಂಬುದನ್ನು ತಿಳಿದುಕೊಳ್ಳುವಿರಿ. ಅವರ ಗಾತ್ರದ ಬಗ್ಗೆ ಮಾತನಾಡಲು ಪ್ರಯತ್ನಿಸಿರಿ, ಆಗ ಅವರು ತಮ್ಮ ರಾಷ್ಟ್ರಗಳ ಕಡೆಗೆ ಮತ್ತು ಲೋಕಕ್ಕೆಲ್ಲ ಸುವಾರ್ತೆಯನ್ನು ಕೊಂಡೊಯ್ಯುವ ಗುರಿಯನ್ನು ಪೂರ್ಣಗೊಳಿಸಲು ಸಭೆಗಿರುವ ಅಗತ್ಯತೆಯ ಕಡೆಗೆ ನಿಮ್ಮ ಗಮನಗಳನ್ನು ಸೆಳೆಯುವರು. ಅವರ ಸಭೆಗಳ ಕುರಿತು ಮಾತನಾಡಲು ಪ್ರಯತ್ನಿಸಿ ಆಗ ಅವರು ಅದರ ಬದಲಾಗಿ ಎಷ್ಟು ಹೊಸ ಸಭೆಗಳು ಕಟ್ಟಲ್ಪಟ್ಟಿವೆ ಅಥವಾ ತಮ್ಮ ಪಟ್ಟಣಗಳಲ್ಲಿ ಅಥವಾ ಮತ್ತು ದೇಶಗಳಲ್ಲಿ ಉಳಿದ ಸಭೆಗಳ ಕುರಿತಾಗಿ ಮಾತನಾಡುವರು .

ನಾನು ನನ್ನ ಹೊಸ ಒಡಂಬಡಿಕೆಯನ್ನು ಅದರಲ್ಲೂ ವಿಶೇಷವಾಗಿ ಅಪೋಸ್ತಲರ ಕೃತ್ಯಗಳು ಪುಸ್ತಕವನ್ನು ಓದುವಾಗ, ಈ ನಾಯಕರುಗಳು ಮತ್ತು ಸಭೆಗಳು ಎಷ್ಟಾಗಿ ಮೊದಲನೆಯ ಶತಮಾನದ ಸಭೆಗಳಂತೆಯೇ ಇವೆ ಎಂಬುದರಲ್ಲಿ ನಾನು ಗೊಂದಲಕ್ಕೀಡಾಗಿದ್ದೇನೆ. ತಾವು ಬೇರೆ ಯಾವ ಯಾವುದೇ ಸಭೆಗಳಿಗಿಂತ ಹೆಚ್ಚು ಪ್ರಾಮುಖ್ಯವಲ್ಲದ ಎಂಬುದನ್ನು ಅವರು ತಿಳಿದುಕೊಳ್ಳುತ್ತಾರೆ, ಸುವಾರ್ತೆಯ ಗುರಿಗೆ ಎಲ್ಲಾ ಕ್ರೈಸ್ತರು ಸಂಪೂರ್ಣರಾಗುವುದು ಬೇಕಿದೆ. ಅವುಗಳು ಯೆರೂಸಲೇಮ್, ಅಂತಿಯೋಕ್ಯ, ಎಫೆಸ, ಕೊರಿಂಥ ಅಥವಾ ರೋಮ್ ನಲ್ಲಿರುವಂತಹ ಹೊಸ ಒಡಂಬಡಿಕೆ ಕಾಲದ ಮುಖ್ಯ ಸಭೆಗಳಂತಿವೆ. ಈ ಹೊಸ ಒಡಂಬಡಿಕೆಯ ಸಭೆಗಳ ಗಾತ್ರವಾಗಲೀ ಮತ್ತು ಅವುಗಳ ಪ್ರಸಿದ್ಧ ಬೋಧಕರಾಗಲೀ ಗ್ರಂಥಗಳಲ್ಲಿ ದಾಖಲಾಗಿಲ್ಲ, ತಮ್ಮ ಸುತ್ತಲಿನ ಕಣಿವೆಗಳು ಪ್ರಾಂತ್ಯಗಳು ಮತ್ತು ಪಟ್ಟಣಗಳನ್ನು ಸಂದಿಸುವಲ್ಲಿ ನ ಅವರ ತಂತ್ರಗಳು ಮಾತ್ರ ದಾಖಲಿಸಲ್ಪಟ್ಟಿವೆ. ಈ ಪ್ರಾಂತ್ಯಗಳ ಸಂಪೂರ್ಣ ಸುವಾರ್ತೀಕರಣಕ್ಕಾಗಿ ಬೇಷರತ್ತಾಗಿ ತಮ್ಮೆಲ್ಲ ಸಂಪನ್ಮೂಲಗಳನ್ನು ಕೊಡಲು ತಮ್ಮ ಭೌಗೋಳಿಕ ಪ್ರಾಂತ್ಯಗಳಲ್ಲಿ ತಮ್ಮನ್ನು ಸಮರ್ಪಿಸಿಕೊಡುವಲ್ಲಿ ಇಡೀ ಕ್ರಿಸ್ತನ ಶರೀರಕ್ಕೆ ಈ ಸಭೆಗಳು ದೇವರ ವಿಶೇಷವಾದ ವರಗಳಾಗಿದ್ದವು. ಅಪೊಸ್ತಲರ ಕೃತ್ಯಗಳು 11-12 ರಲ್ಲಿ ಕಂಡುಬರುವ ಅಂತಿಯೋಕ್ಯದಲ್ಲಿನ ಸಭೆಯು, ಕಳುಹಿಸುವ ಅಂತಹ ಸಭೆಯ ಒಂದು ವಿಶಿಷ್ಟವಾದ ಮಾದರಿಯನ್ನು ಪ್ರಸ್ತುತಪಡಿಸುತ್ತದೆ.

ಎಲ್ಲಕ್ಕಿಂತ ಮೊದಲು, ಅಂತಿಯೋಕ್ಯದಲ್ಲಿ ಮೊಟ್ಟಮೊದಲನೆಯದಾಗಿ ಅನ್ಯ ಜನರಿಗೆ ಸುವಾರ್ತೆಯು ಸಾರಲ್ಪಟ್ಟಿತು (11:19-21 ನ್ನು ನೋಡಿ). ಈ ಪಟ್ಟಣದಲ್ಲಿನ ಸಭೆಯ ವಿಶ್ವಾಸಿಗಳು ತಮ್ಮ ಯೆಹೂದಿ ಮೂಲದ ಸುಖೀ ವಲಯದಿಂದ ಹೊರಬಂದು ತಮ್ಮ ಧರ್ಮ ಮತ್ತು ಸಾಂಸ್ಕೃತಿಕ ಹಿನ್ನಲೆಗೆ ಹೊರತಾಗಿರುವವರೊಂದಿಗೆ ಕ್ರಿಸ್ತನ ಕುರಿತು ಹಂಚಿಕೊಳ್ಳತೊಡಗಿದರು. ಇದನ್ನು ಕೇಳಿ ಯೆರೂಸಲೇಮಿನಲ್ಲಿನ ಸಭಾ ನಾಯಕರುಗಳು ಅಲ್ಲಿನ ಹೊಸ ವಿಶ್ವಾಸಿಗಳಿಗೆ ಸಹಾಯಮಾಡಲು ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸುತ್ತಾರೆ. ಇದರ ಪರಿಣಾಮವಾಗಿ

ಬಾರ್ನಬನು ಸೌಲನನ್ನು ಕಂಡು, ಕೆಲಸಕ್ಕೆ ಸಹಾಯಕನಾಗಲು ಆತನನ್ನು ತಿರುಗಿ ಕರೆತರುತ್ತಾನೆ. ಜನರಿಗೆ ಬೋಧಿಸುತ್ತಾ, ಅವರ ಮಧ್ಯೆ ವಾಸಿಸುತ್ತಾ ಅವರು ಪಟ್ಟಣದಲ್ಲಿ ಒಂದು ವರ್ಷವನ್ನು ಕಳೆಯುತ್ತಾರೆ (11:22-26 ನೋಡಿ). ಅವರ ಸೇವೆಯು ವಿಶ್ವಾಸಿಗಳ ಜೀವಿತದಲ್ಲಿ ಸ್ಪಷ್ಟವಾಗಿ ಕಣ್ಣಿಗೆ ಕಾಣುವಂತಹ ಫಲವನ್ನು ಕೊಟ್ಟಿತು. ಯೇಸುವಿನ ಹಿಂಬಾಲಕರಿಗೆ ಹಿಂಬಾಲಕರಿಗೆ ಅಂತಿಯೋಕ್ಯದಲ್ಲಿಯೇ ಕ್ರೈಸ್ತರೆಂದು ಕರೆಯಲಾಯಿತು (11:22-26). ಬೇರೆಯವರು ಗಮನಿಸಿ ಕ್ರಿಸ್ತನಂತಹ ಸ್ವಭಾವದ ಮೂಲಕ ಅವರನ್ನು ಗುರುತಿಸುವಷ್ಟರ ಮಟ್ಟಿಗೆ ಅಂತಿಯೋಕ್ಯದ ವಿಶ್ವಾಸಿಗಳ ಜೀವಿತವು ಬದಲಾಯಿತು.

ಕೇವಲ ಅದು ಮಾತ್ರವಲ್ಲ, ಈ ಪಟ್ಟಣದ ವಿಶ್ವಾಸಿಗಳು ತಮ್ಮ ಸ್ವಂತ ಸ್ಥಳವನ್ನು ಮೀರಿ ಸಂಧಿಸುವಷ್ಟರ ಮಟ್ಟಿಗೆ ಬೆಳೆದರು. ಬರಲಿರುವ ಕ್ಷಾಮದ ಕುರಿತಾದ ಅಗಬನ ಪ್ರವಾದನೆ ಮೂಲಕ ಕಲಿತು, "ಯೂದಾಯ ಸೀಮೆಯಲ್ಲಿ ವಾಸವಾಗಿದ್ದ ಸಹೋದರರಿಗೆ ದ್ರವ್ಯಸಹಾಯ ಮಾಡಬೇಕೆಂದು ನಿಶ್ಚಯಿಸಿಕೊಂಡರು" (11:29). ಯೆರೂಸಲೇಮಿಗೆ ಭೇಟಿಕೊಡಲು ಯೋಚಿಸುತ್ತಿದ್ದ ಬಾರ್ನಬ ಮತ್ತು ಸೌಲರ ಕೈಯಿಂದ ಅವರಿದನ್ನು ಕಳುಹಿಸಿದರು.

ಅಂತಿಯೋಕ್ಯದಲ್ಲಿನ ಅದ್ಭುತವಾದ ನಾಯಕತ್ವವು ನಾವು ಕಲಿಯುವಂಥದ್ದು ಸಹ ಆಗಿದೆ. ಅಂತಿಯೋಕ್ಯ ಸಭೆಯ ನಾಯಕತ್ವವು ಕಾರ್ಯ( ಅವರಲ್ಲಿ ಪ್ರವಾದಿಗಳು ಮತ್ತು ಬೋಧಕರುಗಳಿದ್ದರು) ಮತ್ತು ಜನಾಂಗ, ಸಂಸ್ಕೃತಿ ಮತ್ತು ವರ್ಗದಲ್ಲಿ (ಕರಿಯರು ಮತ್ತು ಬಿಳಿಯರು, ಐಗುಪ್ತ ಮತ್ತು ಕುಪ್ರ ದ್ವೀಪದವರು, ಯೆಹೂದ್ಯರು ಮತ್ತು ಅನ್ಯರು ಮತ್ತು ಹೆರೋದನ ಜೀವಮಾನದ ಒಬ್ಬ ಸ್ನೇಹಿತ ಸಹ) ವೈವಿಧ್ಯಮಯವಾದ ಗುಂಪಿನ ಜನರನ್ನೊಳಗೊಂಡಿತ್ತು. (13:1ನ್ನು ನೋಡಿ). ವೈವಿಧ್ಯಮಯ ಹಿನ್ನಲೆಯ ಜನರು ಒಂದೇ ಮನಸ್ಸು ಮತ್ತು ಉದ್ದೇಶ ಉಳ್ಳವರಾಗಿದ್ದು ಕರ್ತನನ್ನು ಹುಡುಕುತ್ತಿದ್ದರು ಮತ್ತು ಸ್ಥಳೀಯವಾಗಿ ಮತ್ತು ದೂರದಲ್ಲಿ ಆತನ ನಾಮವನ್ನು ಪ್ರಚುರಪಡಿಸಲು ಬಯಸುತ್ತಿದ್ದರು.

ಕರ್ತನನ್ನು ಆರಾಧಿಸಲು ಮತ್ತು ಉಪವಾಸ ಮಾಡಲು ಅವರು ಸೇರಿದಾಗ ಪವಿತ್ರಾತ್ಮನು ದೂರದ ಪ್ರದೇಶಗಳಲ್ಲಿ ಅಪೋಸ್ತಲೀಯ ಸೇವೆಯನ್ನು ಮಾಡುವುದಕ್ಕಾಗಿ  ಮತ್ತು ಸೌಲ ಬಾರ್ನಬನನ್ನು ಕರೆದನು. ನಾಯಕರುಗಳು ಅವರ ಸ್ವಂತಕ್ಕಾಗಿ ಗಟ್ಟಿಯಾಗಿ ಅಂಟಿಕೊಂಡಿರಲಿಲ್ಲ ಬದಲಾಗಿ ಅವರ ಕೈಗಳು ಮತ್ತು ಹೃದಯಗಳು ವಿಶಾಲವಾಗಿ ತೆರೆದುಕೊಂಡಿದ್ದವು ಮತ್ತು ಉಪವಾಸ ಪ್ರಾರ್ಥನೆ ಮತ್ತು ಕರ್ತನ ಆಶೀರ್ವಾದದಿಂದ ಇಬ್ಬರನ್ನು ಅವರು ಕಳುಹಿಸಿಕೊಟ್ಟರು (13:2-3). ನಾವು  ತಿಳಿದಿರುವಂತೆ ಬಾರ್ನಬ ಮತ್ತು ತದನಂತರದಲ್ಲಿ ಪೌಲನು ಎಂದು ಕರೆಯಲ್ಪಡುವ ಸೌಲನ ಸೇವೆಯು ಬಹುದೂರದ ಗುಡ್ಡಗಾಡು ಪ್ರದೇಶಗಳಿಗೆ ಅನೇಕರಿಗೆ ಸುವಾರ್ತೆಯನ್ನು ತಲುಪಿಸಿತು. ಈ ರೋಮಾಂಚಕ ಮತ್ತು ಫಲದಾಯಕ ಸಭೆಯು ದೇವರೊಂದಿಗೆ ಸಂಬಂಧವನ್ನು ಹೊಂದಿಕೊಳ್ಳಲು ಮತ್ತು ಆತನನ್ನು ಈ ಲೋಕದಲ್ಲಿ ಪ್ರತಿನಿಧಿಸುವಂತೆ ಪ್ರತಿಯೊಬ್ಬ ಪುರುಷ ಸ್ತ್ರೀ ಮತ್ತು ಮಗುವಿಗೆ ಸುವಾರ್ತೆಯನ್ನು ತಲುಪಿಸುವುದಕ್ಕೆ ಪ್ರತಿ ಸಭೆ ಸಹ ತನ್ನ ಉದ್ದೇಶವನ್ನು ನೆರವೇರಿಸುವುದಾಗುವಂತೆ ದೇವರು ವಿನ್ಯಾಸಗೊಳಿಸಿರುವ ಒಂದು ಬಗೆಯ ಸಭೆಯ ಚಿತ್ರಣವಾಗಿದೆ.

# ಅಂತಿಯೋಕ್ಯ ಸಭೆಯ ಗುಣಲಕ್ಷಣಗಳು

ಇಪ್ಪತ್ತೊಂದನೆಯ ಶತಮಾನದಲ್ಲಿ ಅಂತಿಯೋಕ್ಯ ಸಭೆಯು ಹೇಗೆ ಕಾಣಬಲ್ಲದೆಂಬುದನ್ನು ಸೂಚಿಸುವ ಬೋಧನೆಗಳು ಅಥವಾ ತತ್ವಗಳು ದೇವರ ವಾಕ್ಯದಲ್ಲಿವೆಯೋ? ಹೌದು!

ಮೊದಲನೆಯದಾಗಿ, ಅಂತಿಯೋಕ್ಯ ಸಭೆಯು ತಾನು ಯಾರು ಮತ್ತು ಯಾಕೆ ಅಸ್ತಿತ್ವದಲ್ಲಿದೆ ಎಂಬುದನ್ನು ಅರಿತುಕೊಂಡಂಥ ಒಂದು ಸಭೆಯಾಗಿದೆ. ನಮ್ಮ ಸುತ್ತಲಿನ ಮತ್ತು ದೂರದ ಜನರನ್ನು ಸಂಧಿಸಬೇಕಾದರೆ ಯೇಸುವಿನ ಹಿಂಬಾಲಕರೆಂದು ಕರೆಯಲ್ಪಡುವ ಹೆಚ್ಚಿನ ಜನರನ್ನು ಸ್ಥಳ ಬದಲಾವಣೆ ಮಾಡಬೇಕೆಂಬುದನ್ನು ಅದು ಅಂತರ್ಗತವಾಗಿ ಅರಿತುಕೊಳ್ಳುತ್ತದೆ. ದೇವರು ಈ ಲೋಕದಲ್ಲಿ ಏನನ್ನೇ ಮಾಡಲು ಹೊರಟರೂ ಸಹ ಆತನದನ್ನು ಕ್ರಿಸ್ತನಿಗೆ ಸೇರಿದ ಜನರ ಮೂಲಕ ಮಾಡುವುದಕ್ಕೆ ಯೋಜಿಸಿದ್ದಾನೆಂಬುದನ್ನು ಸತ್ಯವೇದ ಮತ್ತು ಇತಿಹಾಸವೆರಡೂ ಸಹ ಹೇಳುತ್ತವೆ. ಸಭೆಯು ಮೊದಲ ಮತ್ತು ಅಗ್ರಗಣ್ಯವಾದ ಸ್ಥಳ ಅಥವಾ ಕಾರ್ಯಕ್ರಮವಲ್ಲ, ಬದಲಾಗಿ ಅದು ದೇವರೊಂದಿಗಿನ ಒಂದು ಸಂಬಂಧಕ್ಕಾಗಿ ಯೇಸುವನ್ನು ಹಿಂಬಾಲಿಸಲು ಲೋಕದೊಳಗಿದ್ದೂ ಕರೆಯಲ್ಪಟ್ಟ ಒಂದು ಜನವಾಗಿದೆ. ಈ ಒಂದು ಹೊಸ ದೃಷ್ಟಿಕೋನದ ನಿಮಿತ್ತ ಆತನ ಸಂದೇಶವನ್ನು ಸಾರಿ ಹೇಳಲು ತಮ್ಮೆಲ್ಲಾ ಸಂಬಂಧಗಳಲ್ಲಿ ದೇವ ಜನರು ಕ್ರಿಸ್ತನ ಸ್ವರೂಪಕ್ಕೆ ಮಾರ್ಪಡು ಹೊಂದಿ, ದೇವರಿಂದ ಉಪಯೋಗಿಸಲ್ಪಡುತ್ತಾರೆ.

ಎರಡನೆಯದಾಗಿ ಅಂತಿಯೋಕ್ಯ ಸಭೆಯು ತಾನು ಏನನ್ನು ಮಾಡಬೇಕೆಂದು ದೇವರು ಬಯಸುತ್ತಾನೆಂಬುದನ್ನು ಅರಿತುಕೊಳ್ಳುವ ಒಂದು ಸಭೆಯಾಗಿದೆ. ಸಹಜವಾಗಿ ಇದು ಸುತ್ತಣ ಲೋಕದೊಂದಿಗಿನ ತನ್ನ ಸಂಬಂಧವನ್ನು ಮತ್ತು ಅದಕ್ಕಾಗಿ ಸುಗ್ಗಿಯ ಕರ್ತನ ಮುಂದೆ ತನ್ನ ಹೊಣೆಗಾರಿಕೆಯನ್ನು ಅರಿತುಕೊಳ್ಳುತ್ತದೆ. ನಾನಿದನ್ನು "ವಲಯ ಹೊಣೆಗಾರಿಕೆ" ಎಂದು ಡಬ್ ಮಾಡಿದ್ದೇನೆ. ವಲಯ ಹೊಣೆಗಾರಿಕೆಯು ನಾವು ದೇವಜನರನ್ನು ಸಬಲೀಕರಿಸಲು ಮತ್ತು ದೇವರೊಂದಿಗೆ ಮರುಸಂಧಾನ ಹೊಂದಲು ಆ ವಲಯದಲ್ಲಿನ ಪ್ರತಿಯೊಬ್ಬ ಗಂಡಸು, ಹೆಂಗಸು ಮತ್ತು ಮಗುವು ಸಹ ಯೇಸುವಿನ ಕುರಿತು ಕೇಳಲು, ತಿಳಿದುಕೊಳ್ಳಲು ಮತ್ತು ಆತನನ್ನು ಅಂಗೀಕರಿಸಲು ಅಥವಾ ತಿರಸ್ಕರಿಸಲು ಮತ್ತೊಂದು ಅವಕಾಶವನ್ನು ಹೊಂದುವವರೆಗೆ ನಮ್ಮೆಲ್ಲ ಸಂಪನ್ಮೂಲಗಳನ್ನು ವ್ಯಯಿಸಲು ನಮ್ಮ ಸುತ್ತಲಿರುವ ಒಂದು ನಿರ್ಧಿಷ್ಟವಾದ ಭೌಗೋಳಿಕ ಪ್ರದೇಶವನ್ನು ಕೊಡಬೇಕೆಂದು ದೇವರನ್ನು ಕೇಳಿಕೊಳ್ಳುವುದಾಗಿದೆ. ನಂಬಿಕೆಗೆ ಬಂದವರು ಆನಂತರ ಒಂದು ಸ್ಥಳೀಯ ಸಭೆಗೆ ಸೇರಿಕೊಳ್ಳುತ್ತಾರೆ, ಅಲ್ಲಿ ಅವರು ದೇವರೊಂದಿಗಿನ ತಮ್ಮ ಸಂಬಂಧದಲ್ಲಿ ಬೆಳೆಯಲು ಪ್ರಾರಂಭಿಸುತ್ತಾರೆ ಮತ್ತು ಸಭೆಯ ಉದ್ದೇಶದ ಸೇವೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಸಬಲೀಕರಣಗೊಳ್ಳುತ್ತಾರೆ.

ಮೂರನೆಯದಾಗಿ, ಅಂತಿಯೋಕ್ಯ ಸಭೆಯು ದೇವರು ಇದನ್ನು ಮಾಡುವಾಗ ಈ ದರ್ಶನವು ಹೇಗೆ ಕಾಣಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವ ಸಭೆಯಾಗಿದೆ. ವಲಯವು ಸ್ಪಷ್ಟವಾಗಿ ಸಂಧಿಸಲ್ಪಟ್ಟು ಆದರೆ ಅಲ್ಲಿ ದೈವಿಕ ಗುಣ ಲಕ್ಷಣಗಳು ಸ್ಥಳದಲ್ಲಿ ಇರದೆ ಮತ್ತು ಕ್ರಿಸ್ತನಿಗೆ ಸೇರಿದ ಜನರಲ್ಲಿ ಹೆಚ್ಚುತ್ತಿರುವಾಗ, ಇಲ್ಲಿ ಕಾರ್ಯ ಮಾಡಿದವರು ಯಾರು - ದೇವರೋ ಅಥವಾ ನಾವೋ? ಕಾರ್ಯವು ದೇವರದ್ದಾಗಿದ್ದರೆ, ದೇವಜನರೆಲ್ಲರೂ ಒಂದು, ದೇವರೊಂದಿಗೆ ವೈಯಕ್ತಿಕ ಆತ್ಮೀಯತೆಯಲ್ಲಿ ಬೆಳೆಯುವದು; ಎರಡು, ಎಲ್ಲ ಜನರಿಗೆ ಮತ್ತು ದೇವರು ತಮಗೆ ಅವಕಾಶ ಕೊಡುವ ಸ್ಥಳಗಳಲ್ಲೆಲ್ಲ ತಮ್ಮ ಸಾಕ್ಷಿಯನ್ನು ಹೇಳುವದು, ಮೂರನೆಯದು, ಅವರ ಜೀವಿತಗಳಲ್ಲೆಲ್ಲ ತಮ್ಮ ಆತ್ಮೀಕ ವರಗಳನ್ನು ಉಪಯೋಗಿಸುವುದು; ನಾಲ್ಕನೆಯದು, ಪುನರುತ್ಥಾನವನ್ನು ಬದುಕುವುದು ಮತ್ತು ದೇವರಾತ್ಮನ ಫಲಗಳನ್ನು ತೋರ್ಪಡಿಸುವುದು; ಮತ್ತು ಐದನೆಯದು, ಸುವಾರ್ತೆಯ ಉದ್ದೇಶಪೂರ್ವಕತೆಯಿಂದ ದೇವರ ರಾಜ್ಯಕ್ಕೆ ವ್ಯಯಮಾಡುವ ರೀತಿಯಲ್ಲಿ ಆವರು ತಮ್ಮ ಜೀವಿತ ಮತ್ತು ಸ್ವತ್ತುಗಳನ್ನು ಪಾರುಪತ್ಯೆಗೆ ಒಪ್ಪಿಸುವುದಾಗಿರುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ವೈಯಕ್ತಿಕವಾಗಿ ಜನರ ಜೀವಿತಗಳಲ್ಲಿ ಈ ಐದು ಹೊಸ್ತಿಲಿನ ಮೌಲ್ಯಗಳು ಬೆಳವಣಿಗೆಯಾಗುವಾಗ, ಸಭೆಯು ಹೊಣೆಗಾರಿಕೆಯ ವಲಯದಲ್ಲಿರುವ ಅವುಗಳನ್ನು ಸಾಮೂಹಿಕವಾಗಿ ಸಂಧಿಸುತ್ತದೆ.

ಅಂತಿಯೋಕ್ಯ ರೀತಿಯ ಸಭೆಯು ದೇವರ ಸೇವಾ ಗುರಿಯನ್ನು ಸಾಧಿಸುವುದಕ್ಕೆ ಬೇಕಾದ ಸುಮಾರು ಏಳು ಗುಣಲಕ್ಷಣಗಳನ್ನು ತೋರ್ಪಡಿಸುತ್ತದೆ. ಈ ಏಳು ಗುಣಲಕ್ಷಣಗಳು ಪರಸ್ಪರ ಒಂದಕ್ಕೊಂದು ಅವಲಂಬಿತವಾಗಿಲ್ಲ, ಬದಲಾಗಿ ಪರಸ್ಪರ ಒಂದಕ್ಕೊಂದು ಪೂರಕವಾಗಿವೆ. ಪ್ರಯಾಣ ಎಂಬ ಸಂಪೂರ್ಣ ಸಭಾ ಸ್ಥಾಪನೆಯ ಈ ಅಧ್ಯಯನವು ಸಭೆಯ ಈ ಪ್ರತಿಯೊಂದು ಗುಣಲಕ್ಷಣಗಳನ್ನು ವಿವರವಾಗಿ ಪರಿಶೀಲಿಸುತ್ತದೆ.

1. ಗುರಿಯಾಧಾರಿತವಾಗಿರುವುದು: ಗುರಿಯಾಧಾರಿತ ಸಭೆಯು ತನ್ನ ಸ್ವಂತ ನಿರ್ದಿಷ್ಟವಾದ ಭೌಗೋಳಿಕ ಪ್ರದೇಶದಲ್ಲಿ -ತನ್ನ ಹೊಣೆಗಾರಿಕೆಯ ವಲಯದಲ್ಲಿ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವಿನ ಸುವಾರ್ತೀಕರಣಕ್ಕೆ ಬದ್ಧವಾಗಿರುತ್ತದೆ. ದೇವ ಜನರ ಜೀವಿತಗಳ ಮೂಲಕ ಮತ್ತು ಸುವಾರ್ತೆಗೆ ಪ್ರತಿಕ್ರಿಯಿಸುವುದರ ಮೂಲಕ, ಸುವಾರ್ತೆಯನ್ನು ನೋಡಲು ಕೇಳಲು ಮತ್ತು ಮುಟ್ಟಲು ತಮ್ಮ ಸುತ್ತಲಿರುವ ಪ್ರತಿಯೊಬ್ಬರಿಗೂ ಪುನರಾವರ್ತಿತ ಅವಕಾಶಗಳನ್ನು ಕೊಟ್ಟು ಸಭೆಯಲ್ಲಿನ ಪ್ರತಿಯೊಬ್ಬ ವಿಶ್ವಾಸಿ ಸಹ ಮಾನವಾತರವಾಗಿ ಜೀವಿಸುವಾಗ ಇದು ಈ ಸೇವಾ ಗುರಿಯನ್ನು ಸಾಧಿಸುತ್ತದೆ.

2. ದೇವ ಜನರನ್ನು ಸಬಲೀಕರಣಗೊಳಿಸುವುದು: ಅಂತಿಯೋಕ್ಯ ಸಭೆಯ ನಾಯಕತ್ವವು ದೇವ ಜನರನ್ನು ಸೇವಾಕಾರ್ಯಗಳನ್ನು ಮಾಡುವುದಕ್ಕೆ ಸಬಲೀಕರಣಗೊಳಿಸುತ್ತದೆ. ಒಂದು ಸಭೆಯ ಹೊಣೆಗಾರಿಕೆಯ ವಲಯದ ಸುವಾರ್ತಿಕರಣಕ್ಕಾಗಿನ ಪ್ರಾಥಮಿಕ ತಂತ್ರವು ದೇವ ಜನರ ಅನುಕೂಲತೆಯ ಮೇಲೆ ಅವಲಂಬಿತವಾಗಬೇಕೇ ಹೊರತು ಅಸಾಧಾರಣ ನಾಯಕರುಗಳ ಚಟುವಟಿಕೆಗಳ ಮೇಲೆ ಅಲ್ಲ, ತನ್ನ ಪ್ರತಿಯೊಬ್ಬ ಜನರಿಗೆ ದೇವರು

ವೈಯಕ್ತಿಕವಾಗಿ ಕೊಟ್ಟಂತಹ ಸಾಮರ್ಥ್ಯ, ವರ ಮತ್ತು ದಾಹಗಳನ್ನು ಗುರುತಿಸಲು, ಹೂಡಿಕೆ ಮಾಡಲು ಮತ್ತು ಬೆಳೆಸುವುದಾಗಿದೆ.

3. ದೇವಜನರ ನಾಯಕರುಗಳಾಗಿ ನಮ್ಮ ಪರಿಣಾಮಕಾರಿತ್ವವನ್ನು ಅಳೆಯುವುದು: ಸುವಾರ್ತೆಯನ್ನು ಮಾನವಾತಾರವಾಗಿ ಬದುಕಲು, ಅಂತಿಯೋಕ್ಯ ಸಭೆಯು ಸ್ಪಷ್ಟವಾಗಿ ಮಾಡಿದಂತೆ ಸಭೆಯು ಕ್ರಿಸ್ತನಲ್ಲಿನ ವಿಶ್ವಾಸಿಗಳನ್ನು ಆತ್ಮೀಕವಾಗಿ ಬೆಳೆಸಬೇಕು. ಬೆಳವಣಿಗೆಯನ್ನು ಅನೇಕ ರೀತಿಯಲ್ಲಿ ಅಳೆಯಬಹುದು ಆದರೆ SCP ಯು ತನ್ನ ಸೇವಾ ಕುರಿತಾಗಿನ ತನ್ನ ಮಹಿಮೆಯ ಸಾಧನವಾಗಿ ದೇವ ಜನರು ವೈಯಕ್ತಿಕವಾಗಿ ಬೆಳೆಯುತ್ತಿರುವರೋ ಎಂಬುದಾಗಿ ಸಭಾ ನಾಯಕತ್ವವು ಅಳೆಯುವುದರಿಂದ ಐದು ಬದಲಾಯಿಸಲಾಗದ ಪ್ರವೇಶ ಮೌಲ್ಯಗಳನ್ನು ಗುರುತಿಸುತ್ತದೆ: ದೇವರ ವಾಕ್ಯ, ತಮ್ಮ ವೈಯಕ್ತಿಕವಾದ ಕೃಪಾ ಸಾಕ್ಷಿಗಳನ್ನು ಬೇರೆಯವರಿಗೆ ಹೇಳುವುದು, ತಮ್ಮ ಆತ್ಮೀಕ ವರಗಳಲ್ಲಿ ಬೆಳೆಯುವುದು, ಆತ್ಮೀಕ ಫಲಗಳನ್ನು ಬೆಳೆಸಿಕೊಳ್ಳುವುದು ಮತ್ತು ದೇವರ ಮಹಿಮೆಗಾಗಿ ತಮ್ಮ ಜೀವಿತ ಮತ್ತು ಸ್ವತ್ತುಗಳನ್ನು ಮನೆವಾರ್ತೆಗೆ ಕೊಡುವುದರ ಮೂಲಕ ದೇವರೊಂದಿಗಿನ ತಮ್ಮ ವೈಯಕ್ತಿಕವಾದ ಸಂಬಂಧದಲ್ಲಿ ಬೆಳೆಯುವವರಾಗಿರಬೇಕು.

4. ಪರಸ್ಪರಾವಲಂಬಿತ ನಾಯಕತ್ವವನ್ನು ಬೆಳೆಸುವುದು : ಒಂದು ಆರೋಗ್ಯಯುತ ಸಭೆಯು ಅಂತಿಯೋಕ್ಯದಲ್ಲಿರುವ ಒಂದು ಸಭೆಯಂತೆ, ಆರೋಗ್ಯಯುತ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ಇದರರ್ಥ ಇದು ಒಂದಕ್ಕಿಂತ ಹೆಚ್ಚು ನಾಯಕರುಗಳನ್ನು ಒಳಗೊಂಡಿರುತ್ತದೆ, ನಾಯಕತ್ವದಲ್ಲಿ ರುವವರು ವೈವಿಧ್ಯಮಯವಾಗಿ ವರವನ್ನೊಳಗೊಂಡಿರುವರಾಗಿರುತ್ತಾರೆ ಮತ್ತು ನಾಯಕತ್ವದ ತಂಡವು ಆತನ ಮಹಿಮೆಗಾಗಿನ ದೇವರ ಸೇವಾ ಗುರಿಯನ್ನು ಸಾಧಿಸುವುದಕ್ಕಾಗಿ ಪರಸ್ಪರ ಒಬ್ಬರ ಮೇಲೊಬ್ಬರು ಅವಲಂಬಿತರಾಗಿರುತ್ತಾರೆ.

5. ಪಕ್ಕದ ನಿಲುವನ್ನೊಳಗೊಂಡಿರುವುದು: ಪಕ್ಕದ ನಿಲುವನ್ನೊಳಗೊಂಡಿರುವ ಸಭೆಯು ತನ್ನ ಜನರ ವಿಕೇಂದ್ರೀಕರಣದೆಡೆಗೆ ಸಂಘಟಿತವಾಗಿರುತ್ತದೆ, ಇದರಿಂದ ಅದರ ಗಮನವು ತನ್ನ ಸ್ವಂತ ಬೆಳವಣಿಗೆಯ ಮೇಲೆ ಇರುವುದಿಲ್ಲ, ಬದಲಾಗಿ ತನ್ನ ಗುರಿಯಾಗಿರುವ ಪ್ರದೇಶದುದ್ದಕ್ಕೂ ವಿಶ್ವಾಸಿಗಳ ಮಾನವಾತಾರದ ಗುಂಪುಗಳ ಮೇಲಿರುತ್ತದೆ.

6. ಬೇರೆ ಸಭೆಗಳೊಂದಿಗೆ ಸಂಬಂಧಿಸುವುದು: ದೇವರು ಒಂದು ದೇಹ ಮತ್ತು ಒಂದು (ಸೇವೆ) ಗುರಿಯನ್ನು ಹೊಂದಿರುವಾಗ ಅಂತಿಯೋಕ್ಯ ರೀತಿಯ ಸಭೆಯು ಉದ್ದೇಶಪೂರ್ವಕವಾಗಿ ಬೇರೆಯವರೊಂದಿಗೆ ಪಾಲುಗಾರರಾಗುವುದು ಮತ್ತು ಸಭೆಯಲ್ಲಿನ ಐಕ್ಯತೆಗಾಗಿ ಗುರಿಯನ್ನು ಕೊಂಡೊಯ್ಯುವುದಕ್ಕಾಗಿ ಬೇರೆಯವರೊಂದಿಗೆ ದೀನತೆಯಿಂದ ಸಂಬಂಧ ಹೊಂದಿರುತ್ತದೆ.

7. ದೂರದರ್ಶಿಸುವುದರ ಮೂಲಕ ಜಾಗತಿಕವಾಗಿ ಉದ್ದೇಶಪೂರ್ವಕವಾಗಿರುವುದು: "ದೂರದರ್ಶಿಸುವದು" ಸಭೆಯ ಹೊಣೆಗಾರಿಕೆಯ ವಲಯದಿಂದ ದೂರದ ಸ್ಥಳಗಳಲ್ಲಿ ಅನುಕೂಲವಾದ ಸ್ಥಳೀಯ ನಾಯಕತ್ವದೆಡೆಗೆ ಮುಖ ಮಾಡಿರುವ ಒಂದು ನಿಲುವನ್ನು ಸೂಚಿಸಲು SCP ಸೇರಿಸಿರುವ ಒಂದು ರೂಪವಾಗಿದೆ. ದೂರದರ್ಶಿಸುವ ಸಭೆಗಳು ಸಾಂಸ್ಕೃತಿಕವಾಗಿ ತಮಗಿಂತ ಭಿನ್ನವಾದ ಒಂದು ಪ್ರದೇಶದಲ್ಲಿ ದೇವಜನರ ದ್ವಿಗುಣಗೊಳ್ಳುವಿಕೆಯ ಮೂಲಕ

ಲೋಕದಲ್ಲಿ ತನ್ನ ಸೇವಾ ಕಾರ್ಯದ ವಿಸ್ತರಣೆಗೆ ಅಡಿಪಾಯವಾಗುವ ತತ್ವಬೋಧನೆಗಳನ್ನು ಪುನರುತ್ಪಾದಿಸಲು ಅಪೇಕ್ಷಿಸುತ್ತವೆ.

ಅವರ ಭಾಷೆಗಳು ವಿಭಿನ್ನವಾಗಿಯೂ ಮತ್ತು ಅವರ ಸಂಸ್ಕೃತಿಗಳು ಬಹಳವಾಗಿ ವೈವಿಧ್ಯಮಯವಾಗಿರಬಹುದು, ಆದರೆ ಬಹು ಪ್ರಾಮುಖ್ಯವಾದ ಬಗೆಗಳಲ್ಲಿ ಜಗತ್ತಿನಾದ್ಯಂತ ಅಂತಿಯೋಕ್ಯ ಸಭೆಗಳು ಒಂದೇ ರೀತಿ ಕಾಣುತ್ತವೆ: ಅವು ಕ್ರಿಸ್ತನಿಗಾಗಿ ಅನೇಕ ಜನರನ್ನು ಗೆಲ್ಲುತ್ತವೆ, ಅವು ಅನೇಕ ಹೊಸ ಸಭೆಗಳನ್ನು ಸ್ಥಾಪಿಸುತ್ತವೆ, ಮತ್ತು ಸ್ಪಷ್ಟವಾದ ಮತ್ತು ಪರಿವರ್ತನೆಯ ರೀತಿಯಲ್ಲಿ ಒಂದು ಬದಲಾವಣೆಯನ್ನು ಮಾಡುವಂತೆ ತಮ್ಮ ಜನರನ್ನು ಅವು ನಂಬಿಕೆಯಲ್ಲಿ ಬೆಳೆಸುತ್ತವೆ. ಈ ರೀತಿಯ ಸಭೆಗಳು ತಮ್ಮ ಕೈಗಳನ್ನು ಹೊರಗೂ ಚಾಚುತ್ತವೆ ಮತ್ತು ದೇವರ ರಾಜ್ಯವು ಬೆಳೆಯುವುದಕ್ಕಾಗಿ ತಮ್ಮಿಂದ ದೇವರಾತ್ಮನು ಬಯಸುವುದನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತವೆ. ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಶ್ರೇಷ್ಠವಾದದ್ದೆಂಬ ಯೇಸುವಿನ ಮಾತುಗಳನ್ನು ಅವು ಕಂಡುಕೊಂಡಿವೆ!

# 1

# ಗುರಿಯಾಧಾರಿತವಾಗಿರುವುದು(ಗುರಿಯಿಂದ ನಡೆಸಲ್ಪಡುವದು)

*ಈ ಸ್ಥಳಕ್ಕಾಗಿ ದೇವರು ಬಯಸುವುದೇನು?*

*ಈ ಸ್ಥಳದಲ್ಲಿ ತಾನು ಬಯಸುವುದನ್ನು ದೇವರು ಮಾಡಿದರೆ ಅದು ಹೇಗೆ ತೋರುತ್ತದೆ?*

ಸತ್ಯವೇದವು ಒಂದು ಸರಳವಾದ ಕಥೆಯನ್ನು ಹೇಳುತ್ತದೆ: ದೇವರು ತನ್ನ ಸೇವಾ ಗುರಿ/ಕಾರ್ಯದಲ್ಲಿದ್ದಾನೆ. ಭೂಮಿ ಮೇಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವಿಗಾಗಿ ಆತನ ಎರಡು ಸಂಗತಿಗಳನ್ನು ಬಯಸುತ್ತಾನೆ. ಮೊದಲನೆಯದು, ಏದೆನ್ ತೋಟದಲ್ಲಿ ಗಂಡು ಮತ್ತು ಹೆಣ್ಣನ್ನು ಆತನು ಸೃಷ್ಟಿಸಿದಾಗ ಮೂಲತಃ ಆತನು ಉದ್ದೇಶಿಸಿದಂತೆ, ಆತನೊಂದಿಗೆ ಅವರು ಒಂದು ಮರುಸ್ಥಾಪಿಸಲ್ಪಟ್ಟ ಸಂಬಂಧವನ್ನು ಹೊಂದುವುದು, ಮತ್ತು ಎರಡನೆಯದು, ಆತನನ್ನು ಘನಪಡಿಸಲು ಮತ್ತು ಇತರರನ್ನು ಆತನೊಂದಿಗಿನ ಸಂಬಂಧಕ್ಕೆ ತಂದು ಆತನನ್ನು ಪ್ರತಿನಿಧಿಸುವುದಕ್ಕಾಗಿ ತಮ್ಮ ವರ ಮತ್ತು ಕರೆಯನ್ನು ಉಪಯೋಗಿಸಿ ಈ ಲೋಕದಲ್ಲಿ ಅವರು ಆತನನ್ನು ಪ್ರತಿನಿಧಿಸುವುದಾಗಿದೆ.

ಹಳೆ ಒಡಂಬಡಿಕೆಯಲ್ಲಿ ಇಸ್ರಾಯೇಲು ದೇವರ ಸೇವಾ ಯೋಜನೆಗಾಗಿನ ಒಂದು ವಾಹನವಾಗಿತ್ತು. ಆದಿಕಾಂಡ 15:3 ರಲ್ಲಿ ಆದಾಮ ಹವ್ವರಿಗೆ ಆತನು ವಾಗ್ದಾನ ಮಾಡಿದಂತೆ ಇಸ್ರಾಯೇಲಿನ ಮೂಲಕ ಆತನು ತನ್ನ ಪ್ರತಿನಿಧಿ ಯಾಗಲಿರುವ ಮತ್ತು ತಂದೆಯೊಂದಿಗೆ ತನ್ನ ವಿಧೇಯತೆಯ ಮೂಲಕ ಸೈತಾನನ ತಲೆಯನ್ನು ಜಜ್ಜಲಿರುವ ಒಂದು ಸಂತತಿಯನ್ನು ತರಬೇಕಾಗಿತ್ತು. ಈ ವಾಗ್ದಾನವು ನೋಹ, ಅಬ್ರಹಾಮ, ದಾವೀದ ಮತ್ತು ಇಸ್ರಾಯೇಲಿನ ಪ್ರವಾದಿಗಳಿಗೆ ಶತಮಾನಗಳುದ್ದಕ್ಕೂ ಪುನರಾವರ್ತಿತವಾಯಿತು. ಹೊಸ ಒಡಂಬಡಿಕೆಯಲ್ಲಿ ಈ ವಾಗ್ದಾನವು ಯೇಸುಕ್ರಿಸ್ತನು ಈ ಭೂಮಿಗೆ ಬಂದು, ಸತ್ತು ಪುನಃ ಮರಣದಿಂದ ಎಬ್ಬಿಸಲ್ಪಟ್ಟಾಗ ಅಂತಿಮವಾಗಿ ನೆರವೇರಿತು.

ಶಿಷ್ಯರುಗಳಿಗೆ ಇದು ಆಗಲೇ ಅರ್ಥವಾಗಲಿಲ್ಲ, ಪರಲೋಕಕ್ಕೆ ಹಿಂತಿರುಗಲು ಆತನು ಸಿದ್ಧನಾಗುವಾಗ, ಅವರು "ಸ್ವಾಮಿ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರುಗಿ ಸ್ಥಾಪಿಸಿಕೊಡುವಿಯೋ?" ಎಂದು ಆತನನ್ನು ಕೇಳಿದರು. ಆದರೆ ಈ  ಕೇವಲ ಇಸ್ರಾಯೇಲ್ ಮಾತ್ರವಲ್ಲ ಎಲ್ಲಾ ಆದೇಶಗಳನ್ನು ದೇವರಿಗೆ ತಿರುಗಿ ಸ್ಥಾಪಿಸಿಕೊಡುವುದಕ್ಕಾಗಿ ಬಂದಿದ್ದನು. ಆತನು ಅವರಿಗೆ "ತಂದೆಯು ಸ್ವಂತ ಅಧಿಕಾರದಲ್ಲಿ ಇಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳಿದುಕೊಳ್ಳುವುದು ನಿಮ್ಮ ಕೆಲಸವಲ್ಲ, ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರುಸಲೇಮಿನಲ್ಲಿಯೂ, ಎಲ್ಲಾ ಯೂದಾಯ, ಸಮಾರ್ಯ ಸೀಮೆಗಳಲ್ಲಿಯೂ, ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" ಅಂದನು (ಅಪೊಸ್ತಲರ ಕೃತ್ಯಗಳು 1:6-8).

ಮತ್ತಾಯ 28:18-20 ರಲ್ಲಿ ಮಹಾ ಆದೇಶವೆಂದು ಕರೆಯಲ್ಪಟ್ಟಿರುವ ಆಜ್ಞೆಯು ನಮಗೆ ಕೊಡಲ್ಪಟ್ಟಿದೆ: ಆಗ ಯೇಸು ಅವರ ಹತ್ತಿರಕ್ಕೆ ಬಂದು "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ; ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ  ನಾನು ನಿಮಗೆ ಆಜ್ಞಾಪಿಸಿದ್ದನೆಲ್ಲ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" ಎಂದು ಹೇಳಿದನು.

ಅಪೊಸ್ತಲರ ಕೃತ್ಯಗಳು ಪುಸ್ತಕದುದ್ದಕ್ಕೂ ಶಿಷ್ಯರನ್ನು ಮಾಡುವ ಮಾಡುವುದು ಕಾರ್ಯಗತವಾಗಿದೆ. ಸೇವೆಯ ಒಂದು ಅರ್ಥವು ಸಭೆಯ ಪ್ರಜ್ಞೆಯ(ಜಾಗೃತಿ) ಮೂಲಕ ಸ್ಪಂದಿಸಲ್ಪಟ್ಟಿದೆ. ಆದಿ ವಿಶ್ವಾಸಿಗಳು ದೇವರ ಈ ಹೃದಯಬಡಿತದ ಪ್ರತಿನಿಧಿಗಳಾಗಿದ್ದರು, ಇದಕ್ಕಾಗಿಯೇ ದೇವರು ಅವರನ್ನು ರಕ್ಷಿಸಿದ್ದನು.    ದೇವರೊಂದಿಗೆ ಸೇವೆಯಲ್ಲಿ ನಾವು ಸಹ ಅವರಂತೆಯೇ ಸೇವಾ ಮನೋಭಾವನೆಯುಳ್ಳವರಾಗಿರಬೇಕು.

ಸೇವಾಮನೋಭಾವನೆಯುಳ್ಳವರಾಗಿರುವುದೆಂದರೆ ಗುರಿಧಾರಿತ ಅಥವಾ ಗುರಿಯಿಂದ ನಡೆಸಲ್ಪಡುವವರಾಗಿರಬೇಕು. ನಮ್ಮ ಗುರಿಯು ಲೋಕದ ಎಲ್ಲಾ ದೇಶಗಳಾಗಿವೆ, ವಿಶೇಷವಾಗಿ ನಮ್ಮ ಸ್ವಂತ ಸ್ಥಳಗಳಾಗಿವೆ.

ಜಗತ್ತಿನ ನಮ್ಮ ಸ್ವಂತ ಮೂಲೆಯಲ್ಲಿನ ನಮ್ಮ ನಿರ್ದಿಷ್ಟವಾದ ಗುರಿಯನ್ನು ವಿವರಿಸುವಲ್ಲಿ, ನಾವು ಎರಡು ಪ್ರಶ್ನೆಗಳನ್ನು ಕೇಳಬಹುದು. ಮೊದಲನೆಯದು, ನಮ್ಮ ಕ್ಷೇತ್ರಗಳಿಗಾಗಿ - ನಮ್ಮ ಪಟ್ಟಣಗಳು, ನಮ್ಮ ದೇಶಗಳು, ನಮ್ಮ ರಾಷ್ಟ್ರಗಳಿಗಾಗಿ ದೇವರು ಬಯಸುವುದೇನು? ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವು ಸಹ ನಮ್ಮ ಜೀವಿತಗಳಲ್ಲಿ ಸುವಾರ್ತೆಯು

ಮಾನವಾವತಾರವೆತ್ತಿದ ಪ್ರಾತಿನಿಧ್ಯತೆಯನ್ನು ಕಾಣಲು ಮತ್ತು ನಮ್ಮ ತುಟಿಗಳಿಂದ ಹೇಳಿದ ಸುವಾರ್ತೆಯ ಸಂದೇಶವನ್ನು ಕೇಳುವುದನ್ನು ಬಯಸುತ್ತಾನೆ. ಈ ವಿಷಯದಲ್ಲಿ ದೇವರ ಮನಸ್ಸನ್ನು ನಾವು ಕೇಳಿಸಿಕೊಳ್ಳುವಾಗ ನಮ್ಮ ಕ್ಷೇತ್ರಗಳು ದೊಡ್ಡದಿರಲಿ ಅಥವಾ ಸಣ್ಣದಿರಲಿ ಆತನಿಗೆ ಉತ್ತರವಾಗಿ ನಾವು ನಮ್ಮ ಸುತ್ತಮುತ್ತಲು ಕೆಟ್ಟುಹೋಗಿರುವವರೆಗೆ ಸೇವೆ ಮಾಡುವವರಾಗಿದ್ದೇವೆ. ಈ ರೀತಿಯಲ್ಲಿ ನಮ್ಮ ಸುತ್ತಲಿರುವ ಪ್ರತಿಯೊಬ್ಬರೂ ಸಹ ದೇವಜನರಲ್ಲಿ ಸುವಾರ್ತೆಯು ಜೀವಂತವಾಗಿರುವುದನ್ನು ಕಾಣುವ ಅವಕಾಶವನ್ನು ಹೊಂದುವರು. ಆ ಮೂಲಕ ತಮ್ಮನ್ನು ಸೃಷ್ಟಿಸಿದ ದೇವರೊಬ್ಬನಿದ್ದಾನೆ ಮತ್ತು ಯೇಸು ಕ್ರಿಸ್ತನ ಮೂಲಕ ತಾವು ಮರುರೂಪಿಸಲ್ಪಟ್ಟಬಹುದೆಂಬ ಒಂದು ನಿಜವಾದ ತಿಳುವಳಿಕೆಗೆ ಅವರು ಬರಬಹುದು.

ಎರಡನೆಯದು, ಇದನ್ನು ಹೇಗೆ ಮಾಡಿ ಮುಗಿಸಬೇಕೆಂದು ದೇವರು ಬಯಸುತ್ತಾನೆ? ಲೋಕದಾದ್ಯಂತ ಎಲ್ಲಾ ಸ್ಥಳಗಳಲ್ಲಿ ತನ್ನ ಜನರ ಗುಂಪನ್ನಿಡುವುದರ ಮೂಲಕ ಆತನಿದನ್ನು ಮಾಡುತ್ತಾನೆ. ದೇವರು ಬಯಸಿದಂತೆ ಸಭೆಯು ಗುರಿಯಿಂದ ಕೂಡಿರುವಾಗೆಲ್ಲಾ, ತಾನಿರುವ ಜನರ ಗುಂಪಿನ ನಡುವೆ ಕ್ರಿಸ್ತನ ಸುವಾರ್ತೆಯ ಒಂದು ಪ್ರದರ್ಶನವನ್ನು (ಪ್ರಕಟನೆಯನ್ನು) ತೋರ್ಪಡಿಸುತ್ತದೆ. ಒಂದು ಪಟ್ಟಣ ಅಥವಾ ಹಳ್ಳಿ, ಅಥವಾ ಕೆಲಸದ ಕ್ಷೇತ್ರ ಅಥವಾ ವಸತಿ ಸಂಕೀರ್ಣ ವಾಗಿರಬಹುದು- ಆ ಸ್ಥಳದಲ್ಲಿರುವ ಪ್ರತಿಯೊಬ್ಬ ಪುರುಷ ಸ್ತ್ರೀ ಮತ್ತು ಮಗುವು ಸುವಾರ್ತೆಯು ಕಾರ್ಯರೂಪದಲ್ಲಿರುವ ತನ್ನ ಕಾಣುವಂತೆಯೂ ಕೇಳುವಂತೆಯೂ ಮತ್ತು ಯೇಸು ಕ್ರಿಸ್ತನನ್ನು ಹಿಂಬಾಲಿಸಲು ಆಯ್ಕೆಮಾಡುವ ಒಂದು ಅವಕಾಶವನ್ನು ಹೊಂದುವಂತಾಗಬೇಕು.

## ಮುಖ್ಯ ವಾಕ್ಯಭಾಗಗಳು

ಸ್ವಲ್ಪ ಸಮಯವನ್ನು ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ:

- ಯೆರೆಮಿಯ 29:4-5. ಅದು ಎಷ್ಟು ಸುಲಭ ಅಥವಾ ಕಠಿಣವಾಗಿದೆ ಎಂಬುದನ್ನು ಲೆಕ್ಕಿಸದೆ ನಮ್ಮ ಪಟ್ಟಣಗಳ ಒಳಿತಿಗಾಗಿ ಮತ್ತು ದೇವರ ಮಹಿಮೆಗಾಗಿ ಇರುವುದಕ್ಕಾಗಿ ನಾವು ಕರೆಯಲ್ಪಟ್ಟಿದ್ದೇವೆ.
- ಅಪೊಸ್ತಲರ ಕೃತ್ಯಗಳು 1:8. ಸಾಕ್ಷಿಗಳಾಗಿರಬೇಕಾದ ನಮ್ಮ ಕರೆಯು ಭೌಗೋಳಿಕ ಪರಿಣಾಮ ಮತ್ತು ಜವಾಬ್ದಾರಿಗಳನ್ನು ಒಳಗೊಂಡಿದೆ.
- ಅಪೊಸ್ತಲರ ಕೃತ್ಯಗಳು 17:26-27. ನಾವಿರುವ ಪಟ್ಟಣಗಳಲ್ಲಿ ನಾವು ಆಕಸ್ಮಿಕವಾಗಿ ಬದುಕುತ್ತಿಲ್ಲ.

# ನಿಮ್ಮ ಹೊಣೆಗಾರಿಕೆಯ ವಲಯವನ್ನು ವಿವರಿಸಿ

ನಿಮ್ಮ ಸಭೆಯ ಹೊಣೆಗಾರಿಕೆಯ ಮೊದಲ ವಲಯವನ್ನು (ನಿಮಗೆ ಹತ್ತಿರವಾಗಿರುವ) ವಿವರಿಸಲು ನಿಮ್ಮ ಸ್ಥಳೀಯ ಕ್ಷೇತ್ರದ ಕುರಿತಾದ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ- ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ, ಸುವಾರ್ತೆಯನ್ನು ಕೊಂಡೊಯ್ಯುವುದಕ್ಕೆ ನೀವು ಜವಾಬ್ದಾರಾಗಿರುವ ನಿಮ್ಮ ಸ್ಥಳೀಯ ಕ್ಷೇತ್ರದಲ್ಲಿರುವ ಜನರು.

ಕ್ಷೇತ್ರದ ಜನಸಂಖ್ಯೆ:

ಸಂಭಾವ್ಯ ಪ್ರಭಾವವಿರುವ ನಿಮ್ಮ ಸ್ಥಳೀಯ ಕ್ಷೇತ್ರಗಳು (ಸಂಖ್ಯೆ ಅಥವಾ ಹೆಸರಿನಿಂದ):

- ನೆರೆಹೊರೆಯವರು ಅಥವಾ ಕುಟುಂಬಗಳು:
- ಶಾಲೆಗಳು/ ಶಿಕ್ಷಣದ ಸ್ಥಳಗಳು
- ವ್ಯಾಪಾರಗಳು
- ಸರ್ಕಾರ:

ನಿಮ್ಮ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಸಭೆಯ ಉಪಸ್ಥಿತಿ:

- ಅಸ್ತಿತ್ವದಲ್ಲಿರುವ ಸಭೆಗಳ ಸಂಖ್ಯೆ:
- ಹತ್ತಿರದ ಸಭಾ ಸಂಸ್ಥೆಗಳ ಸಂಖ್ಯೆ:
- ಇತರೆ ಸಂಪರ್ಕ ಜಾಲಗಳು ಅಥವಾ ಸಂಭಾವ್ಯ ಪಾಲುದಾರರು:

ನಿಮ್ಮ ಕ್ಷೇತ್ರದಲ್ಲಿನ ಜನಾಂಗೀಯ ವೈವಿಧ್ಯತೆ (ಶೇಕಡಾವಾರಿಗನುಸಾರವಾಗಿ):

ನಿಮ್ಮ ಪ್ರದೇಶದಲ್ಲಿನ ಅಗತ್ಯತೆ ಮತ್ತು ಸೇವೆ:

- ನಿಮ್ಮ ವಲಯದ ಪ್ರಾಥಮಿಕ ಅಗತ್ಯತೆಗಳಾವುವು?
- ಆ ಅಗತ್ಯತೆಗಳಿಗೆ ಯಾವ ರೀತಿಯ ಸೇವೆಗಳು ಅಥವಾ ಸಂಸ್ಥೆಗಳು ಈಗಾಗಲೇ ಅಸ್ತಿತ್ವದಲ್ಲಿವೆ?

ನಾಯಕತ್ವದ ಸಾಮರ್ಥ್ಯ:

- ವಲಯದ ಅಗತ್ಯತೆಗಳನ್ನು ಸಂದಿಸುವಲ್ಲಿ ನಿಮ್ಮ ಸಭೆಯೊಳಗಿನ ಅಥವಾ ನಿಮ್ಮ ವಲಯದೊಳಗಿನ ಯಾವ ಮುಖ್ಯ ನಾಯಕರುಗಳು ಭೌಗೋಳಿಕವಾಗಿ ಈಗಾಗಲೇ ಸಾಧನವಾಗಿದ್ದಾರೆ?
- ಅಸ್ತಿತ್ವದಲ್ಲಿರುವ ಉಳಿದ ನಾಯಕತ್ವಗಳೊಂದಿಗೆ ಒಂದು ಸಂಬಂಧವನ್ನು ಸ್ಥಾಪಿಸುವುದು ನಿಮ್ಮ ಸಭೆಗೆ ಹೇಗೆ ತೊರುತ್ತದೆ?

ಇತರೆ ಗಮನಾರ್ಹ ಮಾಹಿತಿ:

## ನಿಮ್ಮ ಸೇವಾ ಗುರಿ

ನಿಮ್ಮ ಹೊಣೆಗಾರಿಕೆಯ ವಲಯದಲ್ಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವನ್ನು ಸಂಧಿಸುವುದಕ್ಕೆ ನಿಮ್ಮ ಬಯಕೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸುವ ಒಂದು ಸಂಕ್ಷಿಪ್ತವಾದ ಹೇಳಿಕೆಯೊಂದನ್ನು ಬರೆಯಿರಿ.

## ನಿಮ್ಮ ದರ್ಶನ

ನೀವು ವಿವರಿಸಿರುವ ಹೊಣೆಗಾರಿಕೆಯ ವಲಯಕ್ಕಾಗಿ ಸಮಯ ಸೂಕ್ಷ್ಮತೆಯ ರೀತಿಯಲ್ಲಿ ಶುದ್ಧತ್ವದ ಒಂದು ದರ್ಶನವನ್ನು ಗಮನಾರ್ಹ ರೀತಿಯಲ್ಲಿ ನಿರೀಕ್ಷಿಸುವ ಸಂಕ್ಷಿಪ್ತ ಹೇಳಿಕೆಯೊಂದನ್ನು ಬರೆಯಿರಿ.

# ಮುಕ್ತಾಯ

ಈ ಸಭೆಯು ಗುರಿ ಅಥವಾ ಉದ್ದೇಶದಿಂದ ಕೂಡಿರಬೇಕು. ನಮಗಾಗಿ ಈ ಭೂಮಿಯ ಮೇಲೆ ನಾವು ಇರುವುದಿಲ್ಲ ಬದಲಾಗಿ ನಾವಿರುವ ಲೋಕಕ್ಕಾಗಿ ಇರುವವರಾಗಿದ್ದೇವೆ. ಈ ಸಂಗತಿಗಳು ಎಷ್ಟು ಒಳ್ಳೆಯವುಗಳಾಗಿದ್ದರೂ ಸಹ ಹಾಡುವುದರಲ್ಲಿ, ಒಳ್ಳೆಯ ಬೋಧನೆಗಳಲ್ಲಿ ಅಥವಾ ಕಾರ್ಯಕ್ರಮಗಳಲ್ಲಿ ಸಂತೋಷಪಡಿಸುವುದಕ್ಕಾಗಿ ಸಭೆಗೆ ಹೋಗುವಂತಹ ನಮ್ಮ ಸ್ವಂತ ಬಯಕೆಗಳ ಮೇಲೆ ನಾವು ಗಮನ ಹರಿಸಬಾರದು. ಪ್ರತಿಯೊಬ್ಬರನ್ನು ಕ್ರಿಸ್ತನೆಡೆಗೆ ತರುವುದಕ್ಕಾಗಿ ಆತನ ಆಸೆಯನ್ನು ಪೂರ್ಣಗೊಳಿಸುವುದಕ್ಕೆ ಸಹಾಯಕವಾಗಲು ನಾವು ದೇವರೊಂದಿಗೆ ಸೇವಾಕಾರ್ಯದಲ್ಲಿರಬೇಕು. ಹೊಣೆಗಾರಿಕೆಯ ವಲಯಗಳಲ್ಲಿರುವ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವಿಗಾಗಿ ಸುವಾರ್ತೆಯ ಒಂದು ನರಾವತಾರದ ಸಂದೇಶವನ್ನು ಜೀವಿಸುವುದಕ್ಕಾಗಿ ಪ್ರಯತ್ನಿಸುತ್ತಾ ನಮ್ಮ ಸುತ್ತಲು ಕೆಟ್ಟುಹೋಗಿರುವವರ ಅರಿವನ್ನು ಹೊಂದಿರಲೇಬೇಕು.

# 2

# ದೇವ ಜನರನ್ನು ಸಬಲೀಕರಿಸುವುದು/ಬಲಪಡಿಸುವದು

*ಈ ಲೋಕದಲ್ಲಿ ದೇವರು ಏನನ್ನೇ ಮಾಡಲು ಹೊರಟರೂ ಸಹ ಆತನ ತನ್ನ ಕ್ರಿಸ್ತನ ಜನ ವಾಗಿರುವ ಸಭೆಯ ಮೂಲಕ ಮಾಡುವವನಾಗಿದ್ದಾನೆ.*

ನಮ್ಮ ಗುರಿಯನ್ನು ತಲುಪಲು ನಮಗೊಂದು ಕಾರ್ಯತಂತ್ರವು ಬೇಕಾಗಿದೆ. ದೇವರು ನಮಗೆ ಒಂದನ್ನು ಕೊಟ್ಟಿದ್ದಾನೆ: ಅದು ಸೇವೆಯ ಕಾರ್ಯವನ್ನು ಮಾಡುವುದಕ್ಕಾಗಿ ತನ್ನ ಜನರನ್ನು ಸಬಲೀಕರಣಗೊಳಿಸುವುದು ಮತ್ತು ಕ್ರೋಡೀಕರಣಗೊಳಿಸುವುದು!

ನಾಯಕತ್ವವು ಎರಡು ಬಗೆಯ ಕರೆಯನ್ನು ಒಳಗೊಂಡಿದೆ. ಒಂದು ಆಗಿರುವುದು (ನಾವೇನಾಗಿದ್ದೇವೆ) ಮತ್ತು ಇನ್ನೊಂದು ಮಾಡುವುದಾಗಿದೆ (ನಾವು ಹೇಗೆ ಕಾರ್ಯಮಾಡುತ್ತೇವೆ). ಎಫೆಸದವರಿಗೆ ಬರೆದ ನಾಲ್ಕನೇ ಅಧ್ಯಾಯದಲ್ಲಿ ಹೇಳುತ್ತಾನೆ:

ಆತನು ಕೆಲವರನ್ನು ಅಪೋಸ್ತಲರನ್ನಾಗಿಯೂ, ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು ಸಭಾಪಾಲಕರನ್ನಾಗಿಯೂ, ಉಪದೇಶಿ ಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರೂ ನಂಬಿಕೆಯಿಂದಲೂ ದೇವ ಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವತನಕ ದೇವ ಜನರನ್ನು ಯೋಗ್ಯ ಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ, ಸಭೆಯ ಸೇವೆಗೋಸ್ಕರವೂ, ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು. ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ, ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಗಿಂತ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. (ಎಫೆಸದವರಿಗೆ 4:11-14).

ನಾವು ಯಾರಾಗಿದ್ದೇವೆ ಎಂಬುದು ಒಟ್ಟಾಗಿ ಕೆಲಸ ಮಾಡುವ ನಾಯಕರುಗಳ ಒಂದು ಬಹುತ್ವವಾಗಿದೆ. ನಾಯಕತ್ವವು ಯಾವಾಗಲೂ ಒಂದಕ್ಕಿಂತ ಹೆಚ್ಚಾಗಿರಬೇಕು, ಮತ್ತು ದೇವರು ನಮಗೆ ಕೊಟ್ಟಿರುವ ಗುರಿಗಳನ್ನು ಸಾಧಿಸಬೇಕಾದರೆ ನಮಗೆ

ಪರಸ್ಪರ ಒಟ್ಟಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಿದೆ.ನಾಲ್ಕನೆಯ ಅಧ್ಯಾಯದಲ್ಲಿ ನಾವಿದನ್ನು ವಿವರವಾಗಿ ಚರ್ಚಿಸಲಿದ್ದೇವೆ .

ನಾವು ಹೇಗೆ ಕಾರ್ಯ ಮಾಡುತ್ತೇವೆಂಬುದು ಎರಡು ಸಂಗತಿಗಳನ್ನು ಒಳಗೊಂಡಿದೆ. ಮೊದಲನೆಯದಾಗಿ, ನಾವು "ಸೇವಾ ಕಾರ್ಯಕ್ಕಾಗಿ ದೇವಜನರನ್ನು ಸಿದ್ಧಪಡಿಸಬೇಕು", ಪೌಲನು ಮೇಲೆ ಸಂಕ್ಷಿಪ್ತವಾಗಿ ಹೇಳಿರುವಂತೆ, ತಮ್ಮ ವರಗಳನ್ನು ಉಪಯೋಗಿಸುವುದರಲ್ಲಿ ಬೆಳೆಯುತ್ತಿರುವ ಜನರನ್ನು ಇದು ಒಳಗೊಂಡಿದೆ (1 ಕೊರಿಂಥ 12). ಹೀಗೆ ಅವರು ಪರಿಣಾಮಕಾರಿಯಾಗಿ ಸೇವೆ ಮಾಡಬಹುದು. ಎರಡನೆಯದಾಗಿ, ಜನರು "ಗಾಳಿಯಿಂದ ನೂಕಿಸಿಕೊಂಡು" ಹೊರ ಹೋಗದಂತೆ ಕ್ರಿಸ್ತನ ದೇಹವು ಪರಿಪೂರ್ಣ ಪ್ರವೀಣತೆಗೆ ಮುಟ್ಟುವಂತೆ ಮಾಡಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ, ದೇವರ ವಾಕ್ಯಗಳಲ್ಲಿ ಹೇಗೆ ಮಗ್ನರಾಗಿರಬೇಕು ಮತ್ತು ಆತನ ವಾಕ್ಯದ ಮೂಲಕ ಆತನ ಆತ್ಮನಲ್ಲಿ ದೇವರಿಂದ ಹೀಗೆ ಕೇಳಿಸಿಕೊಳ್ಳಬೇಕು ಎಂಬುದನ್ನು ನಾವು ದೇವಜನರಿಗೆ ಬೋಧಿಸಬೇಕು.

ನಾಯಕರುಗಳು ಹೆಚ್ಚಾಗಿ ಸೇವೆ ಮಾಡುವುದಕ್ಕಾಗಿ ಕರೆಯಲ್ಪಟ್ಟವರಲ್ಲ, ಬದಲಾಗಿ ಜನರೊಂದಿಗಿರಲು ಮತ್ತು ಅವರೂ ಸಹ ಸೇವೆ ಮಾಡುವಂತಾಗಲು ಕ್ರಿಸ್ತನ ದೇಹದೊಳಗಣ ಸದಸ್ಯರುಗಳಲ್ಲಿ ದೇವರು ಇಟ್ಟಿರುವ ವರವನ್ನು ತಿಳಿಸುವುದಕ್ಕಾಗಿ ಕರೆಯಲ್ಪಟ್ಟಿದ್ದಾರೆ. ಯಾರೋ ಒಬ್ಬರು ನಮ್ಮ ಬಳಿಗೆ ಬಂದು "ನಾನು ಇದನ್ನು ಅಥವಾ ಅದನ್ನು ಮಾಡಲು ಉತ್ಸುಕನಾಗಿದ್ದೇನೆ" ಎಂದು ಹೇಳುವಾಗ, ದೇವರ ಬಹುದೊಡ್ಡ ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಆತನು ಅಥವಾ ಆಕೆಯು ತನ್ನ ವರವನ್ನು ಉಪಯೋಗಿಸಲು ನಾವು ಆ ವ್ಯಕ್ತಿಗೆ ಸಹಾಯ ಮಾಡಬಹುದು.

ಸೇವೆಯನ್ನು ಮಾಡಲು ದೇವ ಜನರನ್ನು ಸಿದ್ಧಗೊಳಿಸುವುದರ ಜೊತೆಗೆ ಕ್ರಿಸ್ತನ ದೇಹವನ್ನು ನಂಬಿಕೆಯಲ್ಲಿ ಪೂರ್ಣ ಪ್ರವೀಣತೆಗೆ ತರುವುದಕ್ಕಾಗಿ ಸಹ ನಾವು ಕರೆಯಲ್ಪಟ್ಟಿದ್ದೇವೆ. ನಿಜವೆಂದರೆ, ಯೇಸುಕ್ರಿಸ್ತನ ನಂಬಿಗಸ್ಥ ಹಿಂಬಾಲಕರಾಗಿ ದೇವ ಜನರು ಪ್ರವೀಣತೆಯಲ್ಲಿ ಕಾರ್ಯನಿರ್ವಹಿಸುವಂತೆ ಜನರನ್ನು ಸೇವೆಗೆ ಕಳುಹಿಸುವುದಕ್ಕಿಂದ ಮೊದಲೇ ಇದನ್ನು ಮಾಡಬೇಕಿದೆ. ಸುಳ್ಳು ಬೋಧನೆಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗದಂತೆ ಕ್ರಿಸ್ತನ ದೇಹಕ್ಕೆ ಬೋಧಿಸಲು, ತಿದ್ದಲು ಮತ್ತು ಶಿಸ್ತುಪಡಿಸಲು ನಾವು ನಂಬಿಕಸ್ತರಾಗಿರಬೇಕು. ದೇವರ ವಾಕ್ಯದ ಸತ್ಯವನ್ನು ನಾವು ಬೋಧಿಸಬೇಕು ಮತ್ತು ತನ್ನ ವಾಕ್ಯದ ಮೂಲಕ ದೇವರು ಮಾತಾಡುವುದನ್ನು ಅವರು ಕೇಳುವಂತೆ ತಾವಾಗಿಯೇ ದೇವರ ವಾಕ್ಯವನ್ನು ಹೇಗೆ ಧ್ಯಾನಿಸಬೇಕೆಂಬುದನ್ನು ಅವರಿಗೆ ತೋರಿಸುವ ರಾಗಿರಬೇಕು.

ಅತ್ಯುತ್ತಮ ನಾಯಕರುಗಳೆಂದರೆ ಸೇವೆಯನ್ನು ಬಿಟ್ಟುಕೊಟ್ಟು ಜನರು ತಮ್ಮ ಮುಂದೆ ಹೋಗುವಂತೆ ಅವರ ಹಿಂದೆ ಇರುವವರಾಗಿದ್ದಾರೆ. ತಮಗಿಂತ ಸಣ್ಣವರು ಅಥವಾ ತಮಗಿಂತ ಕಡಿಮೆ ಅರ್ಹತೆಯುಳ್ಳವರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡುವುದರ ಮೂಲಕ, ತಮಗಿಂತ ಮುಂದೆ ಸೇವೆಯನ್ನು ಕೊಂಡೊಯ್ಯಬಹುದಾದ ಗಂಡು ಮತ್ತು ಹೆಣ್ಣು ಮಕ್ಕಳಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡುವವರಾಗಿದ್ದಾರೆ. ಇದು ನಾಯಕತ್ವವೆಂದರೆ ಹೇಗಿರಬೇಕು ಮತ್ತು ಏನು ಮಾಡುವುದೆಂದು ದೇವರು ಹೇಳಿರುವುದರ ನೆರವೇರಿಕೆಯಾಗಿದೆ.

## ಮುಖ್ಯ ವಾಕ್ಯಭಾಗಗಳು

ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ:

- 1 ಕೊರಿಂಥದವರಿಗೆ 12:4-6 – ಪರಸ್ಪರ ಅನ್ಯೋನ್ಯತೆಯಲ್ಲಿ ಪ್ರತಿಯೊಬ್ಬ ಸದಸ್ಯನೂ, ಸದಸ್ಯಳೂ ಸಹ ತನಗಿರುವ ವರವನ್ನು ಉಪಯೋಗಿಸುವಾಗ, ನಾಯಕತ್ವದಲ್ಲಿರುವವರನ್ನಳಗೊಂಡು ಇಡೀ ದೇಹವು ತ್ರೈಯೇಕತ್ವದ ಲಕ್ಷಣ/ಸ್ವಭಾವವನ್ನು ಪ್ರತಿಬಿಂಬಿಸುತ್ತದೆ.
- 2 ಕೊರಿಂಥದವರಿಗೆ 5:11-21 – ಆತನೊಂದಿಗೆ ಸಂಧಾನಗೊಂಡ ಎಲ್ಲ ದೇವಜನರು ಸಹ ದೇವರ ಮರುಸಂಧಾನದ ಸೇವೆಯಲ್ಲಿ ಸಕ್ರಿಯವಾಗಿ ಪಾಲುದಾರರಾಗಲು ಕರೆಯಲ್ಪಟ್ಟಿದ್ದಾರೆ.

## ನೀವು ಯಾರಾಗಿದ್ದೀರಿ ?

ಹೇಗೆ ದೇವರು ಅವರನ್ನು ಉಂಟುಮಾಡಿದ್ದಾನೆ ಮತ್ತು ಕ್ರಿಸ್ತನ ದೇಹದಲ್ಲಿ ಮತ್ತು ಲೋಕದಲ್ಲಿ ತಾನು ಬಯಸಿದ ಸ್ಥಳದಲ್ಲಿಯೇ ಸರಿಯಾಗಿ ಅವರನ್ನು ಇಟ್ಟಿದ್ದಾನೆಂಬುದನ್ನು ಅರಿತುಕೊಳ್ಳಲು ಅವರಿಗೆ ಸಹಾಯ ಮಾಡುವುದರಿಂದ ಜನರನ್ನು ಸಬಲೀಕರಿಸುವುದು ಪ್ರಾರಂಭವಾಗುತ್ತದೆ. ಇದು ಅವನ ಜೀವಮಾನದಲ್ಲೆಲ್ಲಾ ಇರುವ ಆವಿಷ್ಕಾರ ಮತ್ತು ಪರಿಷ್ಕರಣೆಯ ಒಂದು ಪ್ರಕ್ರಿಯೆಯಾಗಿದೆ.

ಜನರ ವೈಯಕ್ತಿಕ ಸೇವೆಯನ್ನು ನಿರ್ಧರಿಸಲು ಕೆಳಕಂಡ ನಕ್ಷೆಯು ನಿಮಗೆ ಸಹಾಯಕವಾಗಬಲ್ಲದು. ಇದು ನಾಲ್ಕು ಭಾಗಗಳನ್ನು ಒಳಗೊಂಡಿದೆ: ಅವರ ವ್ಯಕ್ತಿತ್ವ, ಅವರ ಆತ್ಮೀಕ ವರಗಳು, ಅವರನ್ನು ಸೆಳೆಯುವ ಸೇವೆಯ ಬಗೆಗಳು , ಅವರು ಭಾಗಿಯಾಗಿರುವ ಸೇವೆಗಳ ಪರಿಣಾಮಕಾರಿತ್ವ. ನಿಮ್ಮ ಸಭೆಯಲ್ಲಿ ಜನರಿಗೆ ಈ ಸಾಧನವನ್ನು

ಕೊಡುವುದಕ್ಕಿಂತ ಮೊದಲು ನಾಯಕತ್ವದಲ್ಲಿರುವ ಪ್ರತಿಯೊಬ್ಬ ಸದಸ್ಯರು ಸಹ ಸಮಯ ತೆಗೆದುಕೊಂಡು ಇದರಲ್ಲಿ ಕೆಲಸ ಮಾಡಿರಿ. ಈ ನಾಲ್ಕು ಕ್ಷೇತ್ರಗಳಿಗಿಂತ ಹೆಚ್ಚಾಗಿ ವಿಚಾರಮಾಡುವಂತೆ/ಪರಿಶೋಧಿಸುವಂತೆ ಮತ್ತು ಸೇವೆಗಾಗಿನ ನಿಮ್ಮ

ಕರೆಯನ್ನು ಸ್ಪಷ್ಟಪಡಿಸಿಕೊಳ್ಳುವಂತೆ  ನಿಮಗೆ ಮತ್ತು ನಿಮ್ಮ ಜನರಿಗೆ ಸಹಾಯಕವಾಗಲು ನಕ್ಷೆಯ ನಂತರ ನೀವು ಹೆಚ್ಚಿನ ವಿವರಗಳನ್ನು ಕಂಡುಕೊಳ್ಳುವಿರಿ.

| **ವ್ಯಕ್ತಿತ್ವ (ನಾನು)** | **ಆತ್ಮೀಕ ವರಗಳು (ಪವಿತ್ರಾತ್ಮನು)** | **ಸೇವೆಗಳು (ಮಗನು)** | **ಪರಿಣಾಮಕಾರಿತ್ವ (ತಂದೆ)** |
| --- | --- | --- | --- |
| ನನ್ನ ಕಲೆಗಳು, ಅನುಭವ, ಸಾಮರ್ಥ ಮತ್ತು ತರಬೇತಿ | “ವರಗಳಲ್ಲಿ ಬೇರೆ ಬೇರೆ ವಿಧಗಳುಂಟು; ದೇವರಾತ್ಮನೇ ಒಬ್ಬನೇ” (1 ಕೊರಿಂಥ. 12:4). | “ಸೇವೆಗಳಲ್ಲಿ ಬೇರೆಬೇರೆ ವಿಧಗಳುಂಟು; ಕರ್ತನು ಒಬ್ಬನೇ” (1 ಕೊರಿಂಥ 12:5). | “ಕಾರ್ಯಗಳಲ್ಲಿ ಬೇರೆಬೇರೆ ವಿಧಗಳುಂಟು; ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ” (1 ಕೊರಿಂಥ 12:6). |

## ವ್ಯಕ್ತಿತ್ವ

ನಿಮ್ಮ ವ್ಯಕ್ತಿತ್ವವನ್ನು ಕಂಡುಕೊಳ್ಳಲು ಕೆಳಕಂಡ ಸೈಟ್ಸ್‌ಗಳು ಸಹಾಯಕವಾಗಬಲ್ಲವು:

- www.humanmetrics.com/cgi-win/jtypes2.asp
- www.outofservice.com/bigfive
- www.16personalities.com/free-personality-test

## ಆತ್ಮೀಕ ವರಗಳು

ನಿಮ್ಮ ಆತ್ಮೀಕ ವರಗಳನ್ನು ಕಂಡುಕೊಳ್ಳಲು ಕೆಳಕಂಡ ಸೈಟ್ಗಳು ಸಹಾಯಕವಾಗಬಲ್ಲವು:

- www.spiritualgiftstest.com/tests
- www.kodachrome.org/spiritgift
- gifts.churchgrowth.org/cgi-cg/gifts.cgi?intro=1

ಸತ್ಯವೇದದ ಕೆಳಕಂಡ ವಾಕ್ಯ ಭಾಗಗಳಲ್ಲಿ ನಿಮ್ಮ ಆತ್ಮೀಕ ವರಗಳನ್ನು ಮೌಲ್ಯಮಾಪನ ಮಾಡಿ ಪರಿಗಣಿಸುವುದು ಸಹ ಸಹಾಯಕವಾಗಬಲ್ಲದು:

1 ಕೊರಿಂಥದವರಿಗೆ 12:8-10

1ಕೊರಿಂಥದವರಿಗೆ 12:28

ಎಫೆಸದವರಿಗೆ 4:14

ರೋಮಾಪುರದವರಿಗೆ 12:6-8

1 ಕೊರಿಂಥದವರಿಗೆ 7:7

1 ಪೇತ್ರ 4:11

## ಸೇವೆಗಳು

ಯಾವ ಸೇವೆಗಳಲ್ಲಿ ದೇವರು ನಿಮ್ಮನ್ನು ಉಪಯೋಗಿಸಿದನು (ಬೋಧಿಸುವುದು, ಉಪದೇಶಿಸುವುದು, ಸುವಾರ್ತೀಕರಣ, ಸ್ತ್ರೀಯರ, ಮಕ್ಕಳ, ಯೌವನಸ್ಥರ, ಪುರುಷರ ಸೇವೆಗಳು, ಬಡ ಜನರೊಂದಿಗೆ ಸೇವೆ ಮಾಡುವುದು, ಸ್ವಸ್ಥತೆ, ಸಲಹೆ-ಸಮಾಲೋಚನೆ, ಪುನರ್ವಸತಿ, ಪ್ರಾರ್ಥನೆ, ಇತ್ಯಾದಿ)? ಈ ಪಟ್ಟಿಗೆ ಅನಿಯಮಿತ ಸಾಧ್ಯತೆಗಳಿವೆ ಯಾಕೆಂದರೆ, ದೇವರು ನಿಮ್ಮ ವರ ಮತ್ತು ವ್ಯಕ್ತಿತ್ವವನ್ನು ಮಿಶ್ರಣ ಮಾಡಿ ಅವನ್ನು ಕಾರ್ಯರೂಪಕ್ಕೆ ತರುತ್ತಾನೆ.

ಯಾವ ಸೇವೆಯಲ್ಲಿ ನೀವು ಬಹಳಷ್ಟು ಪರಿಣಾಮಕಾರಿ ಅಥವಾ ಯಶಸ್ಸುಳ್ಳವರಾಗಿದ್ದೀರಿ? ಯಾವ ಸೇವೆಯಲ್ಲಿ ನೀವು ಹೆಚ್ಚು ಆನಂದವನ್ನು ಕಾಣುವಿರಿ?

## ಪರಿಣಾಮಕಾರಿತ್ವ

ಮೇಲ್ಕಂಡ ಸೇವೆಗಳು ಹೇಗೆ ಪರಿಣಾಮಕಾರಿ ಮತ್ತು ಸಫಲತೆಯಯುಳ್ಳವುಗಳಾಗಿವೆ? ನೀವು ಭಾಗಿಯಾಗಿರುವ ಪ್ರತಿಯೊಂದು ಸೇವೆಯ ಹಿನ್ನೆಲೆ/ಸಂದರ್ಭ ಮತ್ತು ವಾತಾವರಣವನ್ನು ವಿಶ್ಲೇಷಿಸಿರಿ (ಒಂದರ ಮೇಲೊಂದು, ಸಣ್ಣ ಗುಂಪುಗಳು, ದೊಡ್ಡ ಜನಸಮೂಹಗಳು; ಪ್ರತಿಯೊಂದು ಸೇವೆಗೆ ವಿಭಿನ್ನವಾಗಿರಬಹುದು).

ಆ ಸೇವೆಗಳಲ್ಲಿನ ನಿಮ್ಮ ಪಾತ್ರದ ಲಕ್ಷಣ/ ಸ್ವಭಾವವೇನು? ಆ ಸೇವೆಗಳಲ್ಲಿನ ನಿಮ್ಮ ಭಾಗವಹಿಸುವಿಕೆಯನ್ನು ದೇವರು ಹೇಗೆ ರಚಿಸಿದ್ದಾನೆ?

# ಮುಕ್ತಾಯ

ಪಾಶ್ಚಾತ್ಯದಲ್ಲಿ ನಾವು ಸಾಮಾನ್ಯವಾಗಿ ನಾಯಕರುಗಳನ್ನು ದೇವರು ಮಾಡುವುದಕ್ಕೆ ಕರದಿದ್ದಾನೆಂಬುದಾಗಿ ಯೋಚಿಸುತ್ತೇವೆ. ಹೌದು, ವರಗಳನ್ನು ನಾವು ಉಪಯೋಗಿಸಬೇಕು ಆದರೆ ದೇವರು ವರಗಳನ್ನು ನಮ್ಮ ಪ್ರಯೋಜನಕ್ಕಾಗಿ ಕೊಡದೆ, ತನ್ನ ದೇಹವನ್ನು ಕಟ್ಟುವುದಕ್ಕಾಗಿ- ಸೇವೆಯ ಕಾರ್ಯವನ್ನು ಮಾಡುವುದಕ್ಕಾಗಿ ದೇವಜನರನ್ನು ಸಿದ್ಧಗೊಳಿಸುವುದಕ್ಕಾಗಿ, ಮತ್ತು ಅವರನ್ನು ದೇವರ ವಾಕ್ಯದ ಸತ್ಯದಲ್ಲಿ ಬೆಳೆಸುವುದಕ್ಕಾಗಿ ಕೊಟ್ಟಿದ್ದಾನೆ. ನಾಯಕರುಗಳಾಗಿ ನಾವು, ನಮ್ಮ ಸಭೆಗಳಲ್ಲಿರುವ ಜನರು ನಮಗೆ ಏನನ್ನು ಮಾಡಬಲ್ಲರೆಂಬುದಾಗಿ ಎಂದಾದರೂ ನಿರೀಕ್ಷಿಸಿದ್ದರೆ, ನಾವು ದೇವರ ವಾಕ್ಯಕ್ಕೆ ಮತ್ತು ನಾಯಕತ್ವಕ್ಕಾಗಿನ ದೇವರ ಉದ್ದೇಶಕ್ಕೆ ತಿರುಗಿ ಹೋಗಬೇಕಾಗಿದೆ. ನಾವು ಸಭೆಗಾಗಿ ನಮ್ಮ ಪ್ರಾಣಗಳನ್ನು ಕೊಡುವುದಕ್ಕಾಗಿ, ನಂಬಿಕೆಯಲ್ಲಿ ಅದನ್ನು ಬೆಳೆಸಿ, ಸಿದ್ಧಗೊಳಿಸುವುದಕ್ಕಾಗಿ ಮತ್ತು ಹಾಗೆಯೇ ಸೇವಾ ಕಾರ್ಯವನ್ನು ಮಾಡುವುದಕ್ಕಾಗಿ ದೇವ ಜನರನ್ನು ಬಿಡುಗಡೆಗೊಳಿಸುವುದಕ್ಕಾಗಿ ಕರೆಯಲ್ಪಟ್ಟಿದೆ.

# 3

# ಪರಿಣಾಮಕಾರಿತ್ವವನ್ನು ಮಾಪನ ಮಾಡುವುದು ಅಥವಾ ಅಳೆಯುವುದು

*ಈ ಲೋಕದಲ್ಲಿ ದೇವರು ಏನನ್ನೇ ಮಾಡಲು ಹೊರಟರೂ ಸಹ ಆತನದನ್ನು ಕ್ರಿಸ್ತನಿಗೆ ಸೇರಿದ ಜನರ ಅಥವಾ ಸಭೆಯ ಮೂಲಕ ಮಾಡುವವನಾಗಿದ್ದಾನೆ.*

ಪ್ರತಿಯೊಬ್ಬ ವಿಶ್ವಾಸಿ ಸಹ ತನ್ನ ಸುತ್ತಲಿರುವ ಜನರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ ಕರೆಯಲ್ಪಟ್ಟಿದ್ದಾನೆ. ನಾವು ಹಳೆಯ ಜೀವಿತ ಗಳಿಂದ ವಿಮೋಚಿಸಲ್ಪಟ್ಟು ಯೇಸುವಿನ ರಕ್ತದಿಂದ ಮಾರ್ಪಾಡುಹೊಂದಿ, ದೇವರು ಆದಾಮ ಮತ್ತು ಅವರಿಗಾಗಿ ಮೂಲತ: ಉದ್ದೇಶಿಸಿದ್ದ ಜೀವಿತವನ್ನು ನಡೆಸಲು ಶಕ್ತರಾಗಿದ್ದೇವೆ ಎಂಬುದಾಗಿ ಪೌಲನು ದೇವಜನರಿಗೆ ಜ್ಞಾಪಕಪಡಿಸುತ್ತಾನೆ.

ನಾವು ಹೊಸದಾಗಿ ಹುಟ್ಟಿದವರಾಗಿದ್ದೇವೆ - ಹೊಸ ಜನರಾಗಿದ್ದೇವೆ!

ಸುವಾರ್ತೆಯಿಂದ ತನ್ನ ಸುತ್ತಣ ಸ್ಥಳಗಳನ್ನು ಶುದ್ಧೀಕರಿಸುಬ ಅಥವಾ ಬೆಳಗುವ ಗುರಿಯಲ್ಲಿ ಪ್ರತಿಯೊಬ್ಬ ವಿಶ್ವಾವಾಸಿ ಸಹ ಪರಿಣಾಮಕಾರಿಯಾಗಬೇಕಾದರೆ, ಸಾಕಷ್ಟು ರೀತಿಯಲ್ಲಿ ಆಕಸ್ಮಿಕವಾಗಿ ಅವರು ಬೆಳೆಯುವ ರಾಗಿರಬೇಕು. ಅವರನ್ನು ನಂಬಿಕೆಯಲ್ಲಿ ಬೆಳೆಸುವ ಮತ್ತು ಸೇವಾ ಕಾರ್ಯಕ್ಕಾಗಿ ಅವರನ್ನು ಸಿದ್ಧಗೊಳಿಸುವ ನಮ್ಮ ಕರೆಯನ್ನು ನಾವು ಪರಿಣಾಮಕಾರಿಯಾಗಿ ನೆರವೇರಿಸಿದ್ದೇವೆಂಬುದನ್ನು ಖಚಿತಪಡಿಸಲು ನಾಯಕರುಗಳಾಗಿ ನಾವು ನಮ್ಮ ಜನರ ಬೆಳವಣಿಗೆಯನ್ನು ನಾವು ಗಮನಿಸಬೇಕು ಮತ್ತು ಅಳೆಯಬೇಕೆಂಬುದು ಇದರ ಅರ್ಥವಾಗಿದೆ.

ಪೇತ್ರನು ಬೋಧಿಸುವಂತೆ ಎಲ್ಲಾ ವಿಶ್ವಾಸಿಗಳು ಸಹಾ ಯಾಜಕತ್ವಕ್ಕಾಗಿ ಕರೆಯಲ್ಪಟ್ಟಿದ್ದಾರೆ ಮತ್ತು ಅವರು ಆತ್ಮೀಕ ಪ್ರವೀಣತೆಗೆ ತಲುಪಬೇಕೆಂದು ನಿರೀಕ್ಷಿಸಲಾಗಿದೆ ಎಂಬುದಾಗಿ ಸತ್ಯವೇದವು ಸ್ಪಷ್ಟಪಡಿಸುತ್ತದೆ :

“ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ; ಕರ್ತನು ದಯಾಳುವೆಂದು ನೀವು ಅನುಭವದಿಂದ ತಿಳಿದುಕೊಂಡಿದ್ದೀರಲ್ಲವೋ? ನೀವು ಜೀವವುಳ್ಳ ಕಲ್ಲಾಗಿರುವ ಆತನನ್ನು ಸೇರಿಕೊಂಡಿದ್ದೀರಿ. ಆ ಕಲ್ಲನ್ನು ಮನುಷ್ಯರು ನಿರಾಕರಿಸಿದರೂ ದೇವರು ಅದನ್ನು

ಆಯಲ್ಪಟ್ಟದ್ದೂ ಮಾನ್ಯವಾದದ್ದೂ ಎಂದು ಎಣಿಸಿದನು. ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವುದಕ್ಕೆ ಪವಿತ್ರ ಯಾಜಕ ವರ್ಗದವರಾದವರಾಗಿದ್ದೀರಿ.......ನೀವಾದರೂ ನಿಮ್ಮನ್ನು ಕತ್ತಲೆಯೊಳಗಿದ್ದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜ ವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ" (1 ಪೇತ್ರ 2:2-9).

ಒಬ್ಬ ವಿಶ್ವಾಸಿಯ ಬೆಳವಣಿಗೆಯ ಸ್ಪಷ್ಟವಾದ ಮಾಪನ ಅಥವಾ ಅಳತೆಗಳೇನು?ಕರ್ತ ನೊಂದಿಗಿನ ಆತನ ಅಥವಾ ಆಕೆಯ ನಡಿಗೆಯಲ್ಲಿ ಪ್ರತಿಯೊಬ್ಬ ಕ್ರೈಸ್ತ ಸಹ ಏನನ್ನು ಬೆಳೆಸಿಕೊಳ್ಳಬೇಕಿದೆ? SCP 5ಗುಣಗಳನ್ನು ಅಥವಾ ಪ್ರವೇಶ/ಆರಂಭಿಕ ಮೌಲ್ಯಗಳನ್ನು ಗಮನಿಸುತ್ತದೆ:

1. ಪವಿತ್ರಾತ್ಮನಿಂದ ನಡೆಸಲ್ಪಟ್ಟು ಪ್ರತಿದಿನ ಆತನ ವಾಕ್ಯದಲ್ಲಿ ದೇವರೊಂದಿಗೆ ಕಳೆಯುವುದು.
2. ತಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳುವುದು: ಅದು ತಮ್ಮನ್ನು ರಕ್ಷಿಸಲು, ಕ್ಷಮಿಸಲು, ಮತ್ತು ಉಪಯೋಗಿಸಲು ದೇವರು ಮಾಡಿದ ಕಾರ್ಯಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದಾಗಿದೆ.
3. ದೇವರ ಮನೆ ವರಗಳನ್ನು ಉಪಯೋಗಿಸುವುದು ಮತ್ತು ಬೆಳೆಸಿಕೊಳ್ಳುವುದು: ಅಂದರೆ ಸಭಾ ಸೇವೆಗಾಗಿ ಅವರನ್ನು ಶಕ್ತರನ್ನಾಗಿಸಲು ತಮ್ಮ ಸಾಮರ್ಥ್ಯಗಳನ್ನುಪಯೋಗಿಸುವುದು.
4. ಪವಿತ್ರಾತ್ಮನ ಫಲಗಳಲ್ಲಿ ಬೆಳೆಯುವುದು: ದೈವಿಕ ಗುಣಲಕ್ಷಣ, ರೂಪಾಂತರಗೊಂಡ ಸಂಬಂಧಗಳಲ್ಲಿ ಹೆಚ್ಚುವದು.
5. ತೆಗೆದುಕೊಳ್ಳುವವರಾಗಿರದೆ ಕೊಡುವವರಾಗಿದ್ದು ತಮ್ಮೆಲ್ಲ ಸೊತ್ತುಗಳನ್ನು (ಹಣ, ಆಸ್ತಿ, ಸಮಯ) ದೇವರ ಮಹಿಮೆಗಾಗಿ ಬಳಸುವುದು.

ದೇವ ಜನರು ತಾವು ಬಯಸಿದವರಾಗಿರಲಾಗದು – ಅವರು ರೂಪಾಂತರಗೊಂಡ ಜನರಾಗಿದ್ದಾರೆ: ಇದರಿಂದಲೇ ನಾವು ಜನರ ಜೀವಿತಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಲೇಬೇಕು. ಪವಿತ್ರಾತ್ಮನ ಮೂಲಕ ದೇವರೊಂದಿಗಿನ ದೈನಂದಿನ ಮುಖಾಮುಖಿಯಲ್ಲಿ ಬೆಳೆಯುವ ಜನರನ್ನು ಕಾಣಲು ನಾವು ಬಯಸುತ್ತೇವೆ.ತಾವು ಯಾರಾಗಿದ್ದೇವೆಂಬುದರ ಕೇಂದ್ರವಾಗಿ ಜನರು ತಮ್ಮ ಸಾಕ್ಷಿಗಳನ್ನು ಹೇಳುವುದನ್ನು ಕಾಣಲು ನಾವು ಬಯಸುತ್ತೇವೆ – ಅವರು ಎಂಜಿನಿಯರುಗಳಲ್ಲ, ಅವರು ವೈದ್ಯರುಗಳಲ್ಲ, ಅವರು ರೈತರುಗಳಲ್ಲ - ಅವರು ಸುಮ್ಮನೆ ಆ ವೃತ್ತಿಯಲ್ಲಿ ತೊಡಗಿಕೊಂಡಿರುವ ಯೇಸುಕ್ರಿಸ್ತನ ಹಿಂಬಾಲಕರಾಗಿದ್ದಾರೆ. ದೇವರು ಉಪಯೋಗಿಸಲು ಬಯಸುವ ಆತ್ಮೀಕ ವರಗಳನ್ನು ತಾವು ಹೊಂದಿದ್ದಾರೆಂಬುದನ್ನು ಜನರು ತಿಳಿದುಕೊಳ್ಳುವುದನ್ನು ಕಾಣಲು ನಾವು ಬಯಸುತ್ತೇವೆ. ಆತ್ಮನು ಹುಟ್ಟಿಸುವ ಗುಣಲಕ್ಷಣಗಳನ್ನು ಜನರು

ಬೆಳೆಸಿಕೊಳ್ಳುವುದನ್ನು ಕಾಣಲು ನಾವು ಬಯಸುತ್ತೇವೆ. ದೇವರ ಮಹಿಮೆಗಾಗಿ ಜನರು ತಮ್ಮ ಸೊತ್ತುಗಳನ್ನು ಸ್ವತಂತ್ರವಾಗಿ ಮತ್ತು ಸಂತೋಷದಿಂದ ಬೇರೆಯವರಿಗಾಗಿ ತೊಡಗಿಸುವುದನ್ನು ಕಾಣಲು ನಾವು ಬಯಸುತ್ತೇವೆ.

ಐದು ಗುಣಗಳೆಲ್ಲವೂ ಸಹ "ಆಗಿರುವುದು" ಅಥವಾ ದೇವರೊಂದಿಗಿನ ಸಂಬಂಧವನ್ನು ಕಟ್ಟಿಕೊಳ್ಳುವುದರ ಕುರಿತಾಗಿದೆ. ಈ ಗುಣಗಳು ವೈಯಕ್ತಿಕವಾಗಿ ದೇವಜನರಲ್ಲಿ ಬೆಳೆಯುವಾಗ ಅವರು ಸಾಮೂಹಿಕವಾಗಿ ಮಾಡುವುದರ ಮೂಲಕ ಕ್ರಿಸ್ತನ ದೇಹಕ್ಕೆ ನಡೆಸಲ್ಪಡುತ್ತಾರೆ - ಅಂದರೆ ತಮ್ಮ ಹೊಣೆಗಾರಿಕೆಯ ವಲಯಗಳನ್ನು ಸಂಧಿಸುವುದರ ಮೂಲಕ ತಾವು ವಾಸವಾಗಿರುವ ಲೋಕದಲ್ಲಿ ದೇವರನ್ನು ಪ್ರತಿನಿಧಿಸುವುದು.

ಇದನ್ನು ಗಮನಿಸುವುದು ಪ್ರಾಮುಖ್ಯವಾಗಿದೆ. ಆದರೂ ಜನರು ಬೆಳೆಯುತ್ತಿರುವ ಈ ಕ್ಷೇತ್ರಗಳಲ್ಲಿ ಅವರು ಬೆಳೆಯುತ್ತಾರೋ ಇಲ್ಲವೋ ಎಂಬುದರ ಕುರಿತು ನಾವು ಚಿಂತಿಸಬಾರದು. ಅವರು ಯಾವ ಕಡೆ ಮುಖ ಮಾಡಿದ್ದಾರೆ? ಅವರು ದೇವರ ವಿಷಯಗಳಲ್ಲಿ ಮತ್ತು ಆತನ ಮಹಿಮೆಗಾಗಿ ಫಲವನ್ನು ಕೊಡುವುದರಲ್ಲಿ ಪ್ರವೀಣರಾಗುತ್ತಿರುವರೋ? ಒಂದು ವೇಳೆ ಅವರು ಅಂಬೆಗಾಲಿಡುತ್ತಿದ್ದರೂ ಪರವಾಗಿಲ್ಲ. ಹೆಚ್ಚುತ್ತಿರುವ ಈ ಗುಣಗಳು ನಿಜವಾದ ಜೀವನದ ಸಾಕ್ಷಿ/ಪುರಾವೆಗಳಾಗಿವೆ, ಅವು ನಿಜವಾಗಲೂ ಸೇವೆಯಲ್ಲಿ ನಿರತರಾಗಿರುವ ಜನರ ಸಾಕ್ಷಿಗಳಾಗಿವೆ.

## ಮುಖ್ಯ ವಾಕ್ಯ ಭಾಗಗಳು

ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ.

- ಆದಿಕಾಂಡ 1-2: ಪ್ರತಿಯೊಬ್ಬ ವ್ಯಕ್ತಿ ಸಹ ದೇವರೊಂದಿಗಿನ ಸಂಬಂಧಕ್ಕಾಗಿ ಮತ್ತು ಆತನನ್ನು ಪ್ರತಿನಿಧಿಸಲು ಸೃಷ್ಟಿಸಲ್ಪಟ್ಟಿದ್ದಾರೆ.
- ಮತ್ತಾಯ 5-7: ಕ್ರಿಸ್ತನ ಹಿಂಬಾಲಕರು ದೈವಿಕವಾಗಿ ಲೋಕದಿಂದ ವಿಭಿನ್ನರಾಗಿರುತ್ತಾರೆಂಬುದನ್ನು ದೇವರ ರಾಜ್ಯವು ನಿರೀಕ್ಷಿಸುತ್ತದೆ.
- ಮತ್ತಾಯ 28:18-20: ಎಲ್ಲಾ ಕ್ರೈಸ್ತರೂ- ಆತನ ಸಭೆಯ ಪ್ರತಿ ಸದಸ್ಯರೂ ಸಹ ಸುವಾರ್ತೀಕರಣ ಮತ್ತು ಬೇರೆಯವರನ್ನು ಶಿಷ್ಯರನ್ನಾಗಿ ಮಾಡುವುದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕಾಗಿ ಕರೆಯಲ್ಪಟ್ಟಿದ್ದಾರೆ.

## ಐದು ಮೌಲ್ಯಗಳ ಸಂಬಂಧವಾಗಿ ಸಭಾ ಚಟುವಟಿಕೆಗಳು

ನಾಯಕತ್ವವು ಐದು ಹೊಸ್ತಿಲಿನ ಮೌಲ್ಯಗಳನ್ನು ಅನೇಕ ಬಗೆಗಳಲ್ಲಿ ಅರ್ಥೈಸಿಕೊಳ್ಳುವುದರಲ್ಲಿ ಮತ್ತು ಅಭ್ಯಸಿಸುವುದರಲ್ಲಿ ಜನರನ್ನು ಬೆಳೆಸಬಲ್ಲದು. ಪ್ರಾಮುಖ್ಯವಾದದ್ದೇನೆಂದರೆ - ನೀವು ಮುನ್ನಡೆಸುವ ಸಭೆಗಾಗಿ ಕಾರ್ಯ ಮಾಡುವುದನ್ನು ಕಂಡುಕೊಳ್ಳುವುದಾಗಿದೆ.

ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ನಕ್ಷೆಯನ್ನು ಭರ್ತಿ ಮಾಡಿರಿ. ನಿಮ್ಮ ಸಭೆಯಲ್ಲಿನ ಚಟುವಟಿಕೆಗಳು ಐದು ಮೌಲ್ಯಗಳಲ್ಲಿ ನಿಮ್ಮ ಜನರನ್ನು ಬೆಳೆಸುತ್ತವೆಯೋ ಎಂಬುದನ್ನು ಮೌಲ್ಯಮಾಪನ ಮಾಡಲು ಮತ್ತು ನಾಯಕರಿಗಾಗಿ ನಿಮ್ಮ ಪರಿಣಾಮಕಾರಿತ್ವವನ್ನು ಹೆಚ್ಚಿಸುವುದಕ್ಕಾಗಿ ಇರುವ ವಿಚಾರಗಳನ್ನು ಪರಿಗಣಿಸಲು ನಿಮಗೆ ಸಹಾಯಕವಾಗಬಲ್ಲವು.

| **ಕ್ರೋಢೀಕರಣದ ಐದು ಮಾಪನಗಳು**<br>**(1 ರಿಂದ 10 ರ ವರೆಗೆ ಸಂಖ್ಯೆಗಳನ್ನು ನಿಯೋಜಿಸಿರಿ)** |
|---|
| ನಿಮ್ಮ ಸಭೆಯಲ್ಲಿನ ಸೇವೆಗಳು, ಕೂಟಗಳು ಮತ್ತು ಚಟುವಟಿಕೆಗಳೆಲ್ಲವನ್ನೂ ಕೆಳಗೆ ಪಟ್ಟಿ ಮಾಡಿರಿ. ಆನಂತರ ಬಲಗಡೆಯಲ್ಲಿ ನಿಮ್ಮ ಜನರಲ್ಲಿ ಪ್ರತಿ ಐದು(ಆರಂಭಿಕ)ಹೊಸ್ತಿಲು ಮೌಲ್ಯಗಳನ್ನು ಬೆಳೆಸಲು ಇದು ಹೇಗೆ ಸಹಾಯಕವಾಗುತ್ತದೆ ಎಂಬುದನ್ನು ಮೌಲ್ಯಮಾಪನ ಮಾಡಲು ಪ್ರತಿಯೊಂದು ಚಟುವಟಿಕೆಗೆ 1 ರಿಂದ 10 ರವರೆಗೆ 1ಅಂಕವನ್ನು ಕೊಡಿರಿ |

| ಉದಾಹರಣೆಗಳು: ವಾರದ ಕೂಟಗಳು (ಬೋಧನೆ, ಹಾಡು) ಸ್ತ್ರೀಯರ ಕೂಟ, ಯೌವನಸ್ಥರು ಕೂಟ, ಮಕ್ಕಳ ಕಾರ್ಯಕ್ರಮ, ಮನೆ ಗುಂಪುಗಳು | **ಆತನ ವಾಕ್ಯದಲ್ಲಿ ದೇವರೊಂದಿಗೆ ಅನ್ಯೋನ್ಯವಾಗಿರುವುದು** | **ವೈಯಕ್ತಿಕ ಸಾಕ್ಷಿಗಳನ್ನು ಹಂಚಿಕೊಳ್ಳುವುದು** | **ಆತ್ಮೀಕ ವರಗಳನ್ನು ವೃದ್ಧಿಪಡಿಸುವುದು** | **ಆತ್ಮನ ಫಲಗಳನ್ನು ಬೆಳೆಸಿಕೊಳ್ಳುವುದು** | **ದೇವರ ರಾಜ್ಯಕ್ಕಾಗಿ ಜೀವಿತ ಮತ್ತು ಸೊತ್ತುಗಳನ್ನು ಮುಡಿಪಾಗಿಡುವುದು** |
|---|---|---|---|---|---|
| | | | | | |
| | | | | | |

| | | | | | |
|---|---|---|---|---|---|
| | | | | | |
| | | | | | |
| | | | | | |

ಪ್ರತ್ಯೇಕವಾಗಿ ಪ್ರತಿ ಐದು ಮೌಲ್ಯಗಳಲ್ಲಿ ನಿಮ್ಮ ಜನರನ್ನು ಬೆಳೆಸಲು ಯಾವ ಚಟುವಟಿಕೆಗಳನ್ನು ನೀವು ಪ್ರಾರಂಭಿಸುವಿರಿ ಅಥವಾ ಮರುರೂಪುಗೊಳಿಸುವಿರಿ. ಅವುಗಳನ್ನು ಕೆಳಗೆ ಪಟ್ಟಿ ಮಾಡಿರಿ ಮತ್ತು ಹಾಗೆಯೇ ಪ್ರತಿ ಸೇವೆಯೂ ಹೇಗೆ ಪರಿಣಾಮಕಾರಿಯಾಗಿರಬೇಕೆಂಬ ನಿಮ್ಮ ಯೋಚನೆಯ ಆಧಾರದ ಮೇಲೆ ಪ್ರತಿ ಚಟುವಟಿಕೆಗೂ 1 ರಿಂದ 10 ರವರೆಗೆ 1 ಅಂಕವನ್ನು ಕೊಡಿರಿ

| ಉದಾಹರಣೆಗಳು: ವಾರದ ಕೂಟಗಳು (ಬೋಧನೆ, ಹಾಡು) ಸ್ತ್ರೀಯರ ಕೂಟ, ಯೌವ್ವನರ ಕೂಟ, ಮಕ್ಕಳ ಕಾರ್ಯಕ್ರಮ, ಮನೆ ಗುಂಪು | **ಆತನ ವಾಕ್ಯದಲ್ಲಿ ದೇವರೊಂದಿಗೆ ಅನ್ಯೋನ್ಯತೆ** | **ವೈಯಕ್ತಿಕ ಸಾಕ್ಷಿಗಳನ್ನು ಹಂಚಿಕೊಳ್ಳುವುದು** | **ಆತ್ಮೀಕ ವರಗಳನ್ನು ವೃದ್ಧಿಪಡಿಸುವುದು** | **ಆತ ತನ್ನ ಫಲಗಳನ್ನು ಬೆಳೆಸಿಕೊಳ್ಳುವುದು** | **ದೇವರ ರಾಜ್ಯಕ್ಕಾಗಿ ಜೀವಿತ ಮತ್ತು ಸೊತ್ತುಗಳನ್ನು ಮುಡಿಪಾಗಿಡುವುದು** |
|---|---|---|---|---|---|
| | | | | | |
| | | | | | |

| | | | | | |
|---|---|---|---|---|---|
| | | | | | |
| | | | | | |
| | | | | | |

## ಮೂರು ರೀತಿಯಲ್ಲಿ ನೀವು ದೇವ ಜನರನ್ನು ಬೆಳೆಸಬಹುದು

ಮೂರು ರೀತಿಯಲ್ಲಿ ನೀವು ನಿಮ್ಮ ಜನರನ್ನು ಐದು ಆರಂಭಿಕ ಅಥವಾ ಹೊಸ್ತಿಲು ಮೌಲ್ಯಗಳಲ್ಲಿ ಬೆಳೆಸಬಹುದು. ಮಾತ್ರವಲ್ಲದೆ ಈ ಜವಾಬ್ದಾರಿಯಲ್ಲಿನ ನಿಮ್ಮ ಪರಿಣಾಮಕಾರಿತ್ವವನ್ನು ಸಹ ಮೌಲ್ಯಮಾಪನ ಮಾಡಬಹುದೆಂಬುದಾಗಿ ಎಸಿಪಿ ಸೂಚಿಸುತ್ತದೆ. ಅವೆಂದರೆ: ಮೌಲ್ಯಮಾಪನ, ಭೋದನೆ ಮತ್ತು ಅಭ್ಯಾಸ. ನಿಮ್ಮ ಜನರ ಜೀವಿತಗಳಲ್ಲಿ ಮೌಲ್ಯಗಳನ್ನು ಬೆಳೆಸುವಲ್ಲಿನ ನಿಮ್ಮ ಸಭಾ ಚಟುವಟಿಕೆಗಳ ಪರಿಣಾಮಕಾರಿತ್ವವನ್ನು ಅಳೆಯಲು ನೀವು ಇವುಗಳನ್ನು ಉಪಯೋಗಿಸಬಹುದು.

### ಮೌಲ್ಯಮಾಪಿಸು

ಮೊದಲನೆಯದಾಗಿ, ನಮ್ಮ ವೆಬ್ ಸೈಟ್ ನಲ್ಲಿ ಕಂಡುಬರುವ ಅಂತಿಯೋಕ್ಯ ಸಮೀಕ್ಷೆಯು, ಐದು ಆರಂಭಿಕ/ಹೊಸ್ತಿಲು ಮೌಲ್ಯಗಳು ಮತ್ತು ಏಳು ಅಂತಿಯೋಕ್ಯ ಗುಣಲಕ್ಷಣಗಳ ಕುರಿತಾದ ನಿಮ್ಮ ಸಭೆಯ ಪ್ರಸ್ತುತ ಹವ್ಯಾಸಗಳ ಕಡೆಗೆ ಒಂದು ಆರಂಭಿಕ ನೋಟವನ್ನು ಕೊಡುವುದಕ್ಕಾಗಿ ಸ್ಥಾಪಿಸಲ್ಪಟ್ಟಿವೆ. ಹಾಗೆಯೇ ನಿಮ್ಮ ಸಭೆಯಲ್ಲಿನ ದೇವಜನರ ಸಂಖ್ಯಾತ್ಮಕ ಮತ್ತು ಆತ್ಮೀಕ ಬೆಳವಣಿಗೆಯೆರಡರ ಕುರಿತಾಗಿ ನಿಮ್ಮ ಚಟುವಟಿಕೆಗಳು ಎಷ್ಟು ಉತ್ತಮವಾಗಿ ಫಲವನ್ನು ಕೊಡುತ್ತವೆಂಬುದನ್ನು ಕಾಣಲು ನಿಯತಕಾಲಿಕದ (ವಾರ್ಷಿಕ ಅಥವಾ ಅರ್ಧವಾರ್ಷಿಕ) ಮಧ್ಯಂತರದಲ್ಲಿ ನೀವು ಸಮೀಕ್ಷೆ ಮಾಡಬಹುದು. ಅಂತಿಯೋಕ್ಯ ಸಮೀಕ್ಷೆಯನ್ನು ನೀವು ಸಾwww.scpglobal.org ಯಲ್ಲಿ ಕಾಣಬಹುದು.

### ಬೋಧಿಸು

ಎರಡನೆಯದಾಗಿ, ನಿಮ್ಮ ಸಭೆಗೆ ಐದು ಆರಂಭಿಕ/ಹೊಸ್ತಿಲಿನ ಮೌಲ್ಯಗಳನ್ನು ನೀವು ಹೇಗೆ ಬೋಧಿಸಲಿರುವಿರಿ ಮತ್ತು ವಾಕ್ಯದಿಂದ ಪ್ರತಿಯೊಂದು ಎಲ್ಲಿ ಉದ್ಭವಿಸುತ್ತದೆ ಎಂದು  ಒಂದು ಬೋಧನಾ ಯೋಜನೆ ಮತ್ತು ವೇಳಾಪಟ್ಟಿಯನ್ನು ನೀವು ಹಾಕಿಕೊಳ್ಳಬಹುದು.

**ಅಭ್ಯಾಸ**

ಅಂತಿಮವಾಗಿ, ದೇವಜನರ ಜೀವಿತಗಳಲ್ಲಿ ಐದು ಮೌಲ್ಯಗಳು ಬೆಳೆಯಲು ಮತ್ತು ನಿಮ್ಮ ಸಭೆಯ ಹೊಣೆಗಾರಿಕೆಯ ವಲಯವನ್ನು ಸಂಧಿಸಿ ಜನರಲ್ಲಿ ಒಂದು ಬಯಕೆಯನ್ನು ಹುಟ್ಟುಹಾಕುವುದಕ್ಕಾಗಿ ನಿಮ್ಮ ನಾಯಕತ್ವದ ತಂಡದಲ್ಲಿ ಪ್ರಾಯೋಗಿಕ ಉದ್ದೇಶಪೂರ್ವಕತೆಯನ್ನು ಹುಟ್ಟುಹಾಕುವುದಕ್ಕೆ ನಿಮಗೆ ಸಹಾಯಕವಾಗಲು ನೀವು ಶಿಷ್ಯತ್ವದ ಮಾರ್ಗಸೂಚಿ/ನಕ್ಷೆಯನ್ನು (ಮುಂದಿನ ನಾಲ್ಕು ಪುಟಗಳನ್ನು ನೋಡಿರಿ) ಉಪಯೋಗಿಸಬಹುದು. ಆದಾಗ್ಯೂ, ಸಾಧನವು ಪರಿಣಾಮಕಾರಿಯಾಗಬೇಕಾದರೆ, ನಾಯಕರಾದ ನೀವು ನಿಮಗೇ ಅನ್ವಯಿಸುವಂತೆ ಜೀವಿಸಬೇಕು. ನಿಮ್ಮ ಜೀವಿತಗಳಿಗೆ ಅನ್ವಯಿಸಿದ ನಂತರ  ನೀವು ಅವುಗಳಿಗಾಗಿಯೇ ಪ್ರಾಯೋಗಿ ನಿರೀಕ್ಷೆಗಳನ್ನು ಹುಟ್ಟುಹಾಕಲು ಬೇರೆಯವರಿಗೆ, ಒಬ್ಬೊಬ್ಬರಿಗೆ ಅಥವಾ ಸಣ್ಣ ಗುಂಪಿಗೆ ಸಹಾಯ ಮಾಡಬಹುದು. ನಿರಂತರವಾಗಿ ಮಾರ್ಗಸೂಚಿಯನ್ನು ಪರಿಶೀಲಿಸುವದು ಆಧರಿಸುವ ಹೊಣೆಗಾರಿಕೆ ಮತ್ತು ಉತ್ತೇಜನಕ್ಕೆ ಸಹಾಯಕವಾಗುವದು.

1. ನಿಮ್ಮದೇ ಜೀವಿತ, ವಿವಾಹ ಮತ್ತು ಕುಟುಂಬಗಳಲ್ಲಿ ಮೌಲ್ಯಗಳನ್ನು ಅಭ್ಯಸಿಸುವುದನ್ನು ಪ್ರಾರಂಭಿಸಿ.
2. ಮಾರ್ಗಸೂಚಿಯ ಮೂಲಕ ನಿಮ್ಮ ಮುಖ್ಯ ನಾಯಕರನ್ನು ತೆಗೆದುಕೊಳ್ಳಿರಿ
3. ನಿಮ್ಮ ಸಭೆಯಲ್ಲಿನ ಪ್ರತಿಯೊಬ್ಬ ಮುಖ್ಯ ನಾಯಕನು ಮಾರ್ಗಸೂಚಿಯ ಮೂಲಕ ಸಣ್ಣಗುಂಪುಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಲಿ.
4. ಸಣ್ಣಗುಂಪಿನ ನಾಯಕರುಗಳು ಹಾಗೆಯೇ ತಮ್ಮ ಗುಂಪಿನಲ್ಲಿರುವ ಜನರಿಗೆ ತರಬೇತಿ ನೀಡುವುದಕ್ಕಾಗಿ ಜವಾಬ್ಧಾರಿಯನ್ನು ತೆಗೆದುಕೊಳ್ಳಲಿ.

# ಶಿಷ್ಯತ್ವದ ಮಾರ್ಗಸೂಚಿ

## ಶಿಷ್ಯತ್ವದ ಮಾರ್ಗಸೂಚಿಯು.....

## .......ಶಿಷ್ಯರುಗಳಿಗಾಗಿರುವುದಾಗಿದೆ

ಕೃಪೆಯಿಂದಲೇ ಕ್ರಿಸ್ತನಲ್ಲಿಯ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟವರಲ್ಲಿ ಸ್ವಯಂ-ಪರೀಕ್ಷೆಯನ್ನು ಮಾಡುವುದಾಗಿದೆ.

## ನಮಗಿಂತ ಮುಂಚಿತವಾಗಿ ಸಂಭವಿಸುವ ದೇವರ ಕಾರ್ಯದ ಕುರಿತು

“ಫಿಲಿಪ್ಪಿ ಪಟ್ಟಣದ ವಿಶ್ವಾಸಿಗಳಿಗೆ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿ ಕೊಳ್ಳಿರಿ” ಎಂದು ಆಜ್ಞಾಪಿಸುತ್ತಾನೆ. ಇಂಥ ನಿರ್ದೇಶನ ಕೊಡಲು ಕಾರಣವು ಈ ಹೇಳಿಕೆಯ ನಂತರ ಕಂಡುಬರುತ್ತದೆ: “ಯಾಕೆಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟು ಮಾಡುವವನಾಗಿದ್ದಾನೆ” (ಫಿಲಿಪ್ಪಿ. 2:12-13).

## ದೇವರ ಅನ್ವೇಷಣೆ

ತನ್ನ ಬೆಳಕಿನಲ್ಲಿ ದೇವರು ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು, ಆತನನ್ನು ನಮ್ಮ ದೊಡ್ಡ ನಿಧಿಯನ್ನಾಗಿ ಹುಡುಕುವುದರಿಂದ ದೇವರ ಕುರಿತ ಒಂದು ವಿವರವಾದ ಜ್ಞಾನ ಮತ್ತು ತಿಳುವಳಿಕೆಯನ್ನು ಹೊಂದುವುದು.

ನೀವು ಏನನ್ನು ಮಾಡಲು ಯೋಚಿಸಿರುವಿರಿ ಮತ್ತು ಅದನ್ನು ನೀವು ಯಾವಾಗ ಮಾಡುವಿರೆಂಬುದರ ಬಗ್ಗೆ ನಿರ್ಧಿಷ್ಟವಾಗಿರಿ.

### ವಾಕ್ಯವನ್ನು ಓದುವುದು

ಆತನ ವಾಕ್ಯದ ಮೂಲಕ ನೀವು ದೇವರಿಗೆ ಹೇಗೆ ಕಿವಿಗೊಡುವಿರಿ?

### ವಾಕ್ಯದ ಬಾಯಿಪಾಟ

ದೇವರ ವಾಕ್ಯವನ್ನು ನೀವು ಹೇಗೆ ಬಾಯಿಪಾಟ ಮಾಡುವಿರಿ?

### ಪ್ರಾರ್ಥನೆ

ದೇವರೊಂದಿಗೆ ಯಾವಾಗಲೂ ನೀವು ಹೇಗೆ ಸಂಪರ್ಕಿಸುವಿರಿ?

### ಅಧ್ಯಯನ(ಅಭ್ಯಾಸ)

ದೇವರನ್ನು ಹುಡುಕುವುದರಲ್ಲಿ ನೀವು ತೊಡಗಿರುವ ಬೇರೆ ಯಾವುದೇ ಮೂಲಗಳಿವೆಯೋ?

## ಆತ್ಮೀಕ ವರಹೊಂದಿರುವಿಕೆ

ನಾವು ಏನಾಗಬೇಕೆಂದು ದೇವರು ವಿಶಿಷ್ಟವಾಗಿ ಮಾಡಿರುವುದನ್ನು ಕಂಡುಹಿಡಿಯುವುದು ಮತ್ತು ಆತನ ಉದ್ದೇಶಗಳಿಗಾಗಿ ನಮ್ಮನ್ನು ಸಮರ್ಪಿಸುವುದು.

ನಿಮ್ಮ ಆತ್ಮೀಕ ವರಗಳಾವುವು?

ಸಭೆಯ ಸೇವೆಯಲ್ಲಿ ನೀವು ಅವನ್ನು ಹೇಗೆ ಉಪಯೋಗಿಸುವಿರಿ?

ಸಮುದಾಯ?

## ದೇವರಾತ್ಮನ ಫಲ

ಸಭಾ ಜೀವಿದಲ್ಲಿನ ಪವಿತ್ರಾತ್ಮನ ಕ್ರಿಯಾತ್ಮಕ ಪ್ರಸನ್ನತೆಯು ದೇವರ ಗುಣ/ಸ್ವಭಾವವನ್ನು ತೋರ್ಪಡಿಸುತ್ತದೆ ಮತ್ತು ನಂಬದ ಲೋಕದಿಂದ ತನ್ನ ಜನರನ್ನು ಬೇರ್ಪಡಿಸುತ್ತದೆ.

ಕೆಳಕಂಡವುಗಳಿಗೆ ಪ್ರತಿಕ್ರಿಯಿಸುವುದಕ್ಕಿಂತ ಮೊದಲು ಗಲಾತ್ಯದವರಿಗೆ 5:22-25 ಮತ್ತು 2 ಪೇತ್ರ 1:3-9 ನ್ನು ಓದಿರಿ.

ಕೆಳಕಂಡ ಸಂಬಂಧಗಳಲ್ಲಿ ದೇವರ ಗುಣ/ಸ್ವಭಾವದ ಬೆಳವಣಿಗೆ ಮತ್ತು ಆಧಾರ/ಸಾಕ್ಷಿಯನ್ನು ನೀವು ಎಲ್ಲಿ ಕಾಣಬೇಕಿದೆ? (ಕುಟುಂಬ, ಸಂಗಾತಿ, ಮಕ್ಕಳು, ಸಹೋದರರು, ಪೋಷಕರು)

ಕೆಲಸ/ಶಾಲಾ ಸ್ನೇಹಿತರು, ನೆರೆಯವರು

ಈ ಜನರೊಂದಿಗಿನ ಕಷ್ಟಕ್ಕಾಧಾರವಾದ ಕಾರಣವೇನಿರಬಹುದೆಂದು ನೀವು ನಂಬುವಿರಿ?

ಈ ಸನ್ನಿವೇಶಗಳಿಗೆ ನೀವು ಹೇಗೆ ಪ್ರತಿಕ್ರಿಯಿಸುವಿರಿ?

## ಜೀವಿತದ ಮನೆವಾರ್ತಿಕೆ/ಉಸ್ತುವಾರಿ

ದೇವರು ನಮ್ಮ ವಶಕ್ಕೆ ಕೊಟ್ಟಿರುವುದನ್ನೆಲ್ಲ ಆತನ ಮಹಿಮೆಯನ್ನು ಪ್ರತಿಬಿಂಬಿಸಲು ನಂಬಿಗಸ್ತರಾಗಿ ಉಪಯೋಗಿಸುವುದು.

ದೇವರು ನಿಮ್ಮ ವಶಕ್ಕೆ ಕೊಟ್ಟಿರುವ ಯಾವುದನ್ನು ನೀವು ಕೊಟ್ಟುಬಿಡುವಿರಿ ಅಥವಾ ಬೇರೆಯವರೊಂದಿಗೆ ಹಂಚಿಕೊಳ್ಳುವಿರಿ (ಆದಾಯ, ಮನೆ, ಕಾರು, ಬಟ್ಟೆಗಳು, ಸಮಯ)?

### ಕೊಟ್ಟುಬಿಡುವುದು

ಏನನ್ನು?

ಹೇಗೆ?

### ಹಂಚಿಕೊಳ್ಳುವುದು

ಏನನ್ನು?

ಹೇಗೆ?

## ಹೊಣೆಗಾರಿಕೆಯ ವಲಯ ಮತ್ತು ಕೃಪಾಸಾಕ್ಷಿ

ಸುವಾರ್ತೆಯ ಪೂರ್ಣತೆಯನ್ನು ಅಪ್ಪಿಕೊಳ್ಳುವುದು ಮತ್ತು ಅದಕ್ಕನುಸಾರವಾಗಿ ಜೀವಿಸುವಂತೆ ಅದರಿಂದ ರೂಪಾಂತರ ಹೊಂದುವದು.

ಈ ವಲಯಗಳಲ್ಲಿ ಇನ್ನೂ ಕ್ರಿಸ್ತನ ಹಿಂಬಾಲಕರಾಗದೆ ಇರುವ ಮತ್ತು ಶಿಷ್ಯರಾಗುವಂತೆ ಸಹಾಯಮಾಡಬಹುದಾದ ಜನರನ್ನು ಗುರುತಿಸಿರಿ:

ಕುಟುಂಬ: ಸ್ನೇಹಿತರು:

ಸಹೋದ್ಯೋಗಿಗಳು/ಸಹಪಾಠಿಗಳು: ನೆರೆಹೊರೆಯವರು

## ಪ್ರತಿದಿನವೂ ಪ್ರಾರ್ಥಿಸಿರಿ

ನೀವು ಪಟ್ಟಿ ಮಾಡಿರುವ ಜನರಿಗಾಗಿ ಪ್ರತಿದಿನವೂ ನೀವು ಹೇಗೆ ಪ್ರಾರ್ಥಿಸಿರಿ?

## ವಾರಕ್ಕೊಮ್ಮೆ ತೊಡಗಿಸಿಕೊಳ್ಳಿರಿ

ಹೇಗೆ ನೀವು ಪ್ರತಿವಾರ ನಿಮ್ಮ ವಲಯದಲ್ಲಿ ಕನಿಷ್ಟಪಕ್ಷ ಒಬ್ಬ ವ್ಯಕ್ತಿಯಾದರೂ ತೊಡಗಿಸಿಕೊಳ್ಳುವಂತೆ ಮಾಡುವಿರಿ?

## ಮಾಸಿಕವಾಗಿ/ತಿಂಗಳಿಗೊಮ್ಮೆ ಹಂಚಿಕೊಳ್ಳಿರಿ

ಸುವಾರ್ತೆಯನ್ನು ಸಾರುವುದಕ್ಕೆ ನಾವು ಸತತವಾಗಿ ಅವಕಾಶಗಳಿಗಾಗಿ ಮುನ್ನೋಡುವಾಗ, ಪ್ರತಿತಿಂಗಳು ನಿಮ್ಮ ವಲಯದಲ್ಲಿರುವವರೊಂದಿಗೆ ನಿರ್ಧಿಷ್ಟವಾಗಿ ಯಾವ ರೀತಿಯಲ್ಲಿ ನೀವು ಹಂಚಿಕೊಳ್ಳುವಿರಿ?

## ವಿವಾಹ ಮತ್ತು ಕುಟುಂಬ

*ಕುಟುಂಬದ ಸದಸ್ಯರುಗಳು ನಾವು ಮುನ್ನಡೆಸುವುದಕ್ಕಾಗಿ ದೇವರು ನಮಗೆ ಕೊಟ್ಟ ಮೊದಲ ಶಿಷ್ಯರುಗಳಾಗಿದ್ದಾರೆ.*

ಈ ಸಂಬಂಧಗಳಿಗೆ ಆದ್ಯತೆಕೊಡಲು ಮತ್ತು ಅವುಗಳ ಆತ್ಮೀಕ ಜೀವಿತಗಳನ್ನು ವೃದ್ಧಿಗೊಳಿಸುವುದಕ್ಕೆ ಸಹಾಯಕವಾಗಲು ನೀವು ಮಾಡುತ್ತಿರುವ ಚಟುವಟಿಕೆಗಳಾವುವು?

### ನಿಮ್ಮ ವಿವಾಹ

ಏನು? ಯಾವಾಗ?

### ನಿಮ್ಮ ಮಕ್ಕಳು

ಏನು? ಯಾವಾಗ?

### ನಿಮ್ಮ ಪೋಷಕರು(ತಂದೆ-ತಾಯಿ)

ಏನು? ಯಾವಾಗ?

### ನಿಮ್ಮ ಸಹೋದರರು

ಏನು? ಯಾವಾಗ?

## ಮುಕ್ತಾಯ

ದೇವರೊಂದಿಗಿನ ಸಂಬಂಧ ಮತ್ತು ಆತನನ್ನು ಪ್ರತಿನಿಧಿಸುವುದರಲ್ಲಿ ದೇವಜನರು ಆಗಿರುವ ಮತ್ತು ಮಾಡುವ ಕ್ಷೇತ್ರಗಳಲ್ಲಿ ನಿಯಮಿತವಾಗದ, ಪ್ರದರ್ಶನಾತ್ಮಕವಾಗದ ಮತ್ತು ಗಮನಾರ್ಹವಾದ ಬೆಳವಣಿಗೆಯನ್ನು ತೋರಿಸುವಂತೆ ಅವರನ್ನು ಬೆಳೆಸುವುದು ನಾಯಕರುಗಳಾದ ನಮ್ಮ ಕರ್ತವ್ಯವಾಗಿದೆ. ನೀವದನ್ನು ಹೇಗೆ ಮಾಡಿತ್ತಿರುವಿರಿ?

ನಿಮ್ಮ ಜನರು ದೇವರ ವಾಕ್ಯ ಮತ್ತು ದೇವರಾತ್ಮನಿಂದ ಪೋಷಿಸಲ್ಪಡುತ್ತಾರೆಂಬುದಕ್ಕೆ ಗಮನಾರ್ಹವಾದ ಮತ್ತು ಪ್ರದರ್ಶನಾತ್ಮಕವಾದ ಸಾಕ್ಷ್ಯಗಳಿವೆಯೋ? ತಮ್ಮ ಸಾಕ್ಷಿಗಳ ಮೂಲಕ ತಮ್ಮನ್ನು ದೇವರು ಉಪಯೋಗಿಸಲು ಬಯಸುವ ಬಗೆಗಳನ್ನು ಅವರು ಕಂಡುಹಿಡಿಯುತ್ತಿರುವರೋ? ಅವರು ಇರಲು ದೇವರು ಅನುಮತಿಸುವ ಕ್ಷೇತ್ರಗಳಲ್ಲೆಲ್ಲ ತಮ್ಮ ಆತ್ಮೀಕ ವರಗಳನ್ನು ಅವರು ಉಪಯೋಗಿಸುತ್ತಿರುವರೋ? ಪವಿತ್ರಾತ್ಮನ ಫಲದ ನಿಮತ್ತ ಬೇರೆ ಜನರೊಂದಿಗೆ ತಾವು ಪ್ರತಿಕ್ರಿಸುವ(ಸ್ಪಂದಿಸುವ) ರೀತಿಯಲ್ಲಿ ಅವರು ಮಾರ್ಪಡಿಸಲ್ಪಟ್ಟಿರುವರೋ?

ಕಾಲವು ನಿತ್ಯತ್ವದ ಕುರಿತಾಗಿದೆ, ನಾವು ಭೂಮಿಯ ಮೇಲೆ ಕೇವಲ ಪ್ರವಾಸಿಗಳಾಗಿದ್ದೇವೆ, ದೇವರು ಸಮಸ್ತವನ್ನೂ ಸೃಷ್ಟಿಸಿದ್ದಾನೆ ಮತ್ತು ಇದೆಲ್ಲವೂ ಆತನಿಗೆ ಸೇರಿದೆ ಮತ್ತು ಅದರಂತೆ ಈ ಭೂಮಿಯ ಮೇಲೆ ಅವರು ಆತನ ಪ್ರತಿನಿಧಿಗಳೂ ಮತ್ತು ತಾವು ಮುಟ್ಟುವ ಎಲ್ಲವುಗಳಿಗೆ ಮನೆವಾರ್ತೆಯವರೂ(ಉಸ್ತುವಾರಿಗಳೂ) ಆಗಿದ್ದೇವೆಂದು ನಿರಂತರವಾಗಿ ಹೆಚ್ಚು ಅರಿವುಳ್ಳವರಾಗಿರುವರೋ?

ನಮ್ಮ ಉಸಿರು, ನಮ್ಮ ಸಮಯ, ನಮ್ಮ ವಿವಾಹಗಳು, ನಮ್ಮ ಕುಟುಂಬಗಳು, ನಮ್ಮ ಹಣ, ನಮ್ಮ ಕಾರುಗಳು, ನಮ್ಮ ಬೈಕ್ ಗಳು - ಅಂದರೆ ದೇವರು ನಮ್ಮ ಕೈಗೆ ಕೊಟ್ಟಿರುವ ಪ್ರತಿಯೊಂದೂ ಸಹ ದೇವರ ಉದ್ದೇಶಗಳಿಗಾಗಿ ಉಪಯೋಗಿಸಲು ನಮಗೊಂದು ಸಾಧನವಾಗಬೇಕು. ದೇವರು ನಮ್ಮ ತೆರೆದ ಕೈಗಳನ್ನು ಮುಟ್ಟಲು ಮತ್ತು ಈ ಸಂಗತಿಗಳನ್ನೆಲ್ಲ ಜನರಿಗಾಗಿ ಮತ್ತು ಅವರ ಅಗತ್ಯತೆಗಳಿಗಾಗಿ ವಿನಿಯೋಗಿಸಲು ಬಯಸುತ್ತಾನೆ. ಇದು ನಮ್ಮ ಸೊತ್ತುಗಳು ಆತನಿಗೆ ಸೇರಿದವುಗಳಾಗಿವೆ ಮತ್ತು ನಮ್ಮ ನಿಜವಾದ ಬ್ಯಾಂಕ್ ಪರಲೋಕದಲ್ಲಿ ದೆಯೇ ಹೊರತು ಭೂಮಿಯ ಮೇಲೆ ಇಲ್ಲ ಎಂಬುದನ್ನು ತೋರ್ಪಡಿಸುತ್ತವೆ. ನಾವು ನಮ್ಮ ಆಶೀರ್ವಾದಗಳನ್ನು ಸಂಗ್ರಹಿಸಿಟ್ಟುಕೊಳ್ಳುವವರಾಗಿರಲಾಗದು, ಯಾಕೆಂದರೆ ಅವುಗಳಿಗೆ ನಾವು ಯೋಗ್ಯರಲ್ಲ. ದೀನತೆಯಿಂದ ನಾವು ನಮ್ಮ ಕೈಗಳನ್ನು ತೆರೆಯುವುದಕ್ಕೆ ಕಲಿಯಬೇಕು.

ಹೊಸ ಒಡಂಬಡಿಕೆಯು ಈ ಸಂಗತಿಗಳ ಕುರಿತು ಸ್ಪಷ್ಟವಾಗಿದೆ. ಈ ಗುಣಗಳ ಉಪಸ್ಥಿತಿ ಅಥವಾ ಅನುಪಸ್ಥಿತಿಯು ದೇವಜನರು ಸೇವಾಮನೋಭಾವದಿಂದ ಬದುಕುತ್ತಾರೋ ಇಲ್ಲವೋ ಎಂಬುದನ್ನು ತೋರಿಸುತ್ತದೆ.

# 4

# ಪರಸ್ಪರಾವಲಂಬಿತ ನಾಯಕತ್ವವನ್ನು ಬೆಳೆಸುವುದು(ಬಿತ್ತುವುದು)

*ದೇವರು ಈ ಲೋಕದಲ್ಲಿ ಏನನ್ನೇ ಮಾಡಲು ಹೊರಟರೂ ಸಹ, ಆತನದನ್ನು ತನ್ನ ಜನರನ್ನು ಸಬಲೀಕರಣಗೊಳಿಸುವ ವರವು ತಮ್ಮ ಮೊದಲ ಆದ್ಯತೆಯಾಗಿದೆ ಎಂದುಕೊಳ್ಳುವ ನಾಯಕರ ಮೂಲಕ ಮಾಡುತ್ತಾನೆ.*

ಸಭೆಯು ದೇವರೊಂದಿನ ಸೇವೆಯಲ್ಲಿರುವಾಗ, ಅದು ಕೇವಲ ಗುರಿಚಾಲಿತವಾಗಿ ಮತ್ತು ಸೇವೆಯ ಕಾರ್ಯಕ್ಕಾಗಿ ದೇವಜನರನ್ನು ಸಬಲೀಕರಿಸುವುದಾಗಿ(ಬಲಪಡಿಸುವುದು) ಮಾತ್ರ ಇರುವುದಿಲ್ಲ. ಬದಲಾಗಿ ಇದು, ತಮ್ಮ ಸದಸ್ಯರುಗಳು ಒಬ್ಬರಿಗೊಬ್ಬರು ಪರಸ್ಪರಾವಲಂಬಿತವಾಗಿ ಕಾರ್ಯನಿರ್ವಹಿಸುವ ಒಂದು ಒಂದು ತಂಡವನ್ನು ಸಹ ಒಳಗೊಂಡಿದೆ.

ಸತ್ಯವೇದದಲ್ಲಿ ನಾವು ಪರಸ್ಪರಾವಲಂಬನೆಯ ಒಂದು ಮಾದರಿಯನ್ನು ಕಾಣುತ್ತೇವೆ. ಮೊಟ್ಟಮೊದಲನೆಯದಾಗಿ, ಇದು ದೇವರು ಒಬ್ಬ ತ್ರೈಯೇಕನಾಗಿ ಕಾರ್ಯನಿರ್ವಹಿಸುತ್ತಾನೆ. ದೇವತ್ವದ ಪ್ರತಿ ಸದಸ್ಯ ಸಹ ಒಂದು ಅಖಂಡ ಸಂಘಟನೆಯಿಂದ ಇತರರೊಂದಿಗೆ ಪರಸ್ಪರ ಮನಬಂದಂತೆ ಕಾರ್ಯಮಾಡುವುದಾಗಿದೆ: "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ" (ಆದಿಕಾಂಡ 1:26; 1 ಪೇತ್ರ 1:2 ನ್ನು ಸಹ ನೋಡಿರಿ). ದೇವರು ಸೃಷ್ಟಿಸುವುದೆಲ್ಲವೂ ಸಹ ಆತನ ಸ್ವಭಾವದಂತೆಯೇ ಇರುತ್ತದೆ, ಹಾಗೆಯೇ, ಲೋಕವು ಸಹ ಪರಸ್ಪರಾವಲಂಬಿತವಾಗಿದೆ - ಬೆಳಕು, ಆಮ್ಲಜನಕ, ಉಷ್ಣಾಂಶಗಳು, ಇತ್ಯಾದಿಗಳು ಜೀವಾಧಾರಕ್ಕಾಗಿ ಪರಸ್ಪರ ಮಿಶ್ರಣಗೊಂಡಿವೆ. ವಿವಾಹ(ಮದುವೆ) ಸಹ ಇದನ್ನು ಪ್ರತಿಬಿಂಬಿಸುತ್ತದೆ. ಮತ್ತು ಯೆಹೋವ ದೇವರು "ಮನುಷ್ಯನನ್ನು ಒಂಟಿಗನಾಗಿ ಇರುವುದು ಒಳ್ಳೆಯದಲ್ಲ" ಅಂದನು (ಆದಿಕಾಂಡ 2:18), ಮತ್ತು ಇಬ್ಬರೂ ಸೇರಿ ಒಬ್ಬರೇ ಆಗುವಂತೆ

ನೇಮಿಸಿದನು -ಭಾವನಾತ್ಮಕವಾಗಿ, ಶಾರೀರಿಕವಾಗಿ ಮತ್ತು ಆತ್ಮೀಕವಾಗಿ ಒಂದು ಅತೀಂದ್ರಿಯ ಐಕ್ಯತೆ. ಪ್ರತಿಯೊಂದು ಅಂಗ ಸಹ ಪರಸ್ಪರ ಒಟ್ಟಾಗಿ ಕಾರ್ಯನಿರ್ವಹಿಸುವಂತೆ ತನ್ನೆಲ್ಲ ಅಂಗಗಳೊಂದಿಗೆ ಮನುಷ್ಯನ ದೇಹ ಸಹ ಪರಸ್ಪರಾವಲಂಬಿತವಾಗಿದೆ.

ಅಪೊಸ್ತಲರು ಸ್ಥಾನಮಾನಕ್ಕಾಗಿ ವಾಗ್ವಾದ ಮಾಡುವಾಗ, ಯೇಸುವು ಎಲ್ಲ ಶಿಷ್ಯರನ್ನೂ ಒಟ್ಟಿಗೆ ಸೇರಿಸಿ, ಹೀಗೆ ಹೇಳುವಾಗ ಇದು ಅರ್ಥವಾಗುತ್ತದೆ,

"ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನ ಮಾಡುತ್ತಾರೆ, ಮತ್ತು ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡೆಸುತ್ತಾರೆ ಎಂದು ನೀವು ಬಲ್ಲಿರಷ್ಟೆ. ನಿಮ್ಮಲ್ಲಿ ಹಾಗಿರಬಾರದು; ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ  ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು. ಹಾಗೆಯೇ ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆ ಮಾಡುವುದಕ್ಕೂ, ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವುದಕ್ಕೂ ಬಂದನು" ಎಂದು ಹೇಳಿದನು. (ಮತ್ತಾಯ 20:25-28).

ಸಭೆಯಲ್ಲಿನ ನಾಯಕತ್ವವನ್ನು ಇಸ್ರಾಯೇಲ್ ದೇಶವನ್ನು ಒಳಗೊಂಡು  ಯಾವುದೇ ರೀತಿಯ ಸಂಸ್ಥೆಗಿಂತ ವಿಭಿನ್ನವಾಗಿ ಮಾಡಬಹುದು.

ದೇವಜನರನ್ನು ಸೇವಾಕಾರ್ಯಕ್ಕಾಗಿ ಸಿದ್ಧಗೊಳಿಸುವ ಉದ್ದೇಶಕ್ಕಾಗಿ ಯೇಸುವು ಸಭೆಗೆ ಎಫೆಸ ಪತ್ರಿಕೆ 4 ನೇ ಅಧ್ಯಾಯದ ಐದು ಕಾರ್ಯಗಳನ್ನು (ಅಪೊಸ್ತಲ, ಪ್ರವಾದಿ, ಸುವಾರ್ತಿಕ, ಸಭಾಪಾಲಕ, ಮತ್ತು ಬೋಧಕ) ಕೊಟ್ಟನು, ಮತ್ತು ಈ ಕಾರ್ಯಗಳೊಂದಿನ ನಾಯಕರುಗಳು ತಮ್ಮ ಸುತ್ತಲಿನ ಜನರಿಗೆ ಸುವಾರ್ತೆಯನ್ನು ಕೊಂಡೊಯ್ಯಲು ಸಭೆಯು ಶಕ್ತವಾಗುವಂತೆ  ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸುವಂತೆ ಆತನಿದನ್ನು ಮಾಡಿದ್ದಾನೆ. ಒಂದು ದೇಹವಾಗಿ ದೇವರು ಉಂಟುಮಾಡಿದಂತೆ ಸಭೆಯ ಸ್ವಭಾವ/ಲಕ್ಷಣವು, ಪರಸ್ಪರಾವಲಂಬನೆಯ ಈ ದೈವಿಕ ಪ್ರತಿಬಿಂಬವನ್ನು ಅಪೇಕ್ಷಿಸುತ್ತದೆ. ನಾಯಕತ್ವವು ಮೇಲಣಿಂದ ಕೆಳಕ್ಕೆ ಇರುವುದಲ್ಲ. ಹೌದು, ಕೆಲವೊಂದು ಕಾರ್ಯಗಳು ಹೆಚ್ಚು ತಾಂತ್ರಿಕತೆಯುಳ್ಳವುಗಳಾಗಿವೆ ಅಥವಾ ವಿಶಾಲವಾದ ಪ್ರಾಬಲ್ಯ ಹೊಂದಿವೆ. ಆದರೆ ಯಾವ ಕಾರ್ಯವೂ

ಇನ್ನೊಂದಕ್ಕಿಂತ ಪ್ರಾಮುಖ್ಯವಲ್ಲ. ಬದಲಾಗಿ, ಪ್ರತಿ ನಾಯಕನು ತನ್ನ ಗರ್ವದಿಂದ ಬಗ್ಗುವಾಗ ಇವು ಒಟ್ಟಾಗಿ ಮಿಶ್ರಣಗೊಳ್ಳುತ್ತವೆ. ಇದಕ್ಕೆ ನಾವು ನಮ್ಮ ಕುರಿತ ದೃಢವಾದ ಸರಿಪಡಿಸುವ ಮೌಲ್ಯಮಾಪನಗಳನ್ನು ಮಾಡಬೇಕಿದೆ.

ಐಕ್ಯತೆಯ ಪರಿಣಾಮವಾಗಿ ದೇವಜನರನ್ನು ಬಲಪಡಿಸುವ/ಸಬಲೀಕರಿಸುವ ಮತ್ತು ಕ್ರೋಢೀಕರಿಸುವುದಕ್ಕೆ ಸಾಮರ್ಥ್ಯವನ್ನುಂಟುಮಾಡುತ್ತದೆ. ನಾಯಕರುಗಳು ಪರಸ್ಪರಾವಲಂಬನೆಯಿಂದ ಒಬ್ಬರಿಗೊಬ್ಬರು ಸಹಕರಿಸುವಾಗ ಎಫೆಸ ಪತ್ರಿಕೆ 4 ನೇ ಅಧ್ಯಾಯದ ಐದು ಕಾರ್ಯಗಳು ನಿರ್ವಹಣೆ ಮಾಡಲು ಪ್ರಾರಂಭಿಸುತ್ತವೆ.

ಅಪೊಸ್ತಲರೊಂದಿಗೆ ಸಭೆಯು ತನ್ನ ಗುರಿಗಳನ್ನು ಮುಟ್ಟುತ್ತಾ, ಆತನದನ್ನು ಕೊಂಡೊಯ್ಯುವ ಕಡೆಗಳಲ್ಲೆಲ್ಲ ಯೇಸುವಿನ ನರಾವತಾರವಾಗಿರುತ್ತಾ ಯಾವಾಗಲೂ ವಿಸ್ತರಣೆಯ ಕ್ರಮದಲ್ಲಿದೆ.

ಪ್ರವಾದಿಯು ಸಭೆಯನ್ನು ಒಂದು ಸರಿಪಡಿಸುವ ಕ್ರಮದಲ್ಲಿಡುತ್ತಾನೆ. ನಮ್ಮ ಸುತ್ತಲಿನ ಲೋಕದಿಂದ ಕುರುಡರಾಗಿ, ನಿರಂತರವಾಗಿ ಸೈತಾನನ ಸುಳ್ಳಿನಿಂದ ತುಳಿತಕ್ಕೊಳಗಾಗಿರಲಾಗಿ, ದೇವಜನರು ಕಾಲದಿಂದ ಕಾಲಕ್ಕೆ ಸರಿಪಡಿಸಲ್ಪಡಬೇಕಿದೆ.

ತಾವು ಹೊಂದಿರುವ ಪ್ರತಿಯೊಂದು ಸಂಬಂಧವೂ, ತಮ್ಮ ಕೃಪಾಸಾಕ್ಷಿಗಳನ್ನು ಮತ್ತು ಬೇರಾರಿಗಿಂತಲೂ ವಿಭಿನ್ನವಾಗಿರುವ ತಮ್ಮ ಕೃಪೆಯ ಮುಖಾಮುಖಿಯನ್ನು ಹಂಚಿಕೊಳ್ಳಲು ತಮಗಿರುವ ಒಂದು ಅವಕಾಶವಾಗಿದೆ ಎಂಬುದಾಗಿ ಸುವಾರ್ತಿಕನು ದೇವಜನರಿಗೆ ನೆನಪಿಸುತ್ತಾನೆ. ಪ್ರತಿ ಸಾಕ್ಷಿ ಸಹ ವಿಶಿಷ್ಟ/ವಿಭಿನ್ನವಾಗಿದೆ. ಯಾಕೆಂದರೆ, ದೇವರು ಕೃಪೆಯ ಪೂರ್ಣ ಚಿತ್ರಣಕ್ಕೆ ಪ್ರತಿಯೊಬ್ಬರ ವ್ಯಕ್ತಿಗತ ಕುಂಚದಿಂದ ಬಣ್ಣಕೊಡುತ್ತಾನೆ.

ಸಭಾಪಾಲಕರುಗಳು ಜನರ ನೋವಿನಲ್ಲಿ ಕರುಣೆ ತೋರಿಸುವುದು ಮತ್ತು ತಾಳ್ಮೆಯಿಂದ ಅವರನ್ನು ಪೋಷಿಸುವುದರ ಮೂಲಕ ಕ್ರಿಸ್ತನ ದೇಹಕ್ಕಾಗಿ ಕಾಳಜಿವಹಿಸುವರು, ಮತ್ತು ಉಪದೇಶಿಗಳು ಸಭೆಯನ್ನು ಸತ್ಯದ ಅಡಿಪಾಯದ ಮೇಲೆ ಇರಿಸುವರು.

ಸಂದರ್ಭಕ್ಕನುಸಾರವಾಗಿ ಈ ಐದು ಕಾರ್ಯಗಳು ವಿಭಿನ್ನವಾಗಿ ಮಿಶ್ರಣಗೊಳ್ಳುತ್ತವೆ. ಆದರೆ, ಯಾವುದೇ ಸಭೆಯಲ್ಲಿನ ನಾಯಕತ್ವದ ಲಕ್ಷಣವು ಯಾವಾಗಲೂ ಮೂರು ರೀತಿಯಲ್ಲಿರಬೇಕು: ಇದು ಬಹುಸಂಖ್ಯೆಯದ್ದಾಗಿರಬೇಕು, ಅಥವಾ ಒಂದಕ್ಕಿಂತ ಹೆಚ್ಚಾಗಿರಬೇಕು; ಒಟ್ಟಾಗಿ ಕೆಲಸಮಾಡುವ ವಿವಿಧ ಬಗೆಯ ನಾಯಕರುಗಳಿಂದ ಇದು ವೈವಿಧ್ಯವಾಗಿಬೇಕು ಮತ್ತು ಇದು ಪರಸ್ಪರಾವಲಂಬಿತವಾಗಿರಬೇಕು. ಇದು  ವರ್ಗಾವಣೆ ಮಾಡಲಾಗದ ಒಂದು ಫಲಿತಾಂಶಕ್ಕಾಗಿ ಎಲ್ಲಾ ನಾಯಕರುಗಳು ಒಟ್ಟಾಗಿ ಸೇರಿ ಹೆಣೆಯಲ್ಪಟ್ಟಿರುವದು: ಸೇವಾಕಾರ್ಯಕ್ಕಾಗಿ ಕ್ರಿಸ್ತನ ಸಭೆಯನ್ನು ಕಟ್ಟುವುದು.

## ಮುಖ್ಯ ವಾಕ್ಯಭಾಗಗಳು

**ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ:**

- **1 ಕೊರಿಂಥದವರಿಗೆ** 12:4-7: ಪರಸ್ಪರಾವಲಂಬನೆಯು ದೇವರ ಸ್ವಭಾವ/ಲಕ್ಷಣವನ್ನು ಪ್ರತಿಬಿಂಬಿಸುತ್ತದೆ.
- ಎಫೆಸದವರಿಗೆ 4:11-16: ದೇವರು ಸಭೆಗೆ ಕೊಟ್ಟ ನಾಯಕತ್ವದ ವರವು ಬಹುವಚನ/ಬಹುಸಂಖ್ಯೆಯದ್ದೂ, ಕಾರ್ಯಗಳಲ್ಲಿ ವೈವಿಧ್ಯವೂ ಮತ್ತು ಜನರನ್ನು ಕ್ರಿಸ್ತನ ಪ್ರವೀಣತೆಗೆ ತರುವುದರ ಸಲುವಾಗಿ ಕ್ರಿಸ್ತನ ದೇಹವನ್ನು ಸಿದ್ಧಗೊಳಿಸುವ ಮತ್ತು ಸೇವೆಮಾಡುವ ಉದ್ದೇಶಕ್ಕಾಗಿ ಪರಸ್ಪರಾವಲಂಬಿತವೂ ಆಗಿದೆ.

# ಪರಸ್ಪರಾವಲಂಬನೆಯನ್ನು ತಿಳಿದುಕೊಳ್ಳುವುದು

ಈ ಅಧ್ಯಾಯಕ್ಕಾಗಿ ಪ್ರತಿಯೊಬ್ಬ ಸ್ಪರ್ಧಿಯೂ/ಪಾಲುಗಾರನೂ ಸಹ ಡ್ವೈಟ್ ಸ್ಮಿತ್ ರವರ ಉನ್ನತದಲ್ಲಿ/ತುದಿಯಲ್ಲಿ ಏಕಾಂಗಿಯಾಗಿರುವುದು: ಒಬ್ಬ ಸಭಾಪಾಲಕನ ಕುರಿತ ನಮ್ಮ ವಿಚಾರವು ನಿಜವಾಗಲೂ ಸತ್ಯವೇಧಾರಿತವಾಗಿದೆಯಾ? ಈ ಓದುವಿಕೆಯನ್ನು ನೇಮಿಸಲು ಮತ್ತು ಪುಸ್ತಕವನ್ನು ಸಂಗ್ರಹಿಸಲು ಮತ್ತು ಚರ್ಚಿಸುವುದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಳ್ಳಲು

ಅವಧಿಯ ನಾಯಕನು ಸ್ಪರ್ಧಿ/ಪಾಲುಗಾರರೊಂದಿಗೆ ಕೆಲಸಮಾಡಬೇಕು. ತುದಿಯಲ್ಲಿ ಏಕಾಂಗಿಯಾಗಿರುವದರ ಪ್ರತಿ ಅಧ್ಯಾಯಗಳಿಗಾಗಿ ಇರುವ ಪ್ರಶ್ನೆಗಳು ಈ ಪುಸ್ತಕದ ಹಿಂದಿನ ಅನುಬಂಧ B ಯಲ್ಲಿ ಪಟ್ಟಿಮಾಡಲ್ಪಟ್ಟಿವೆ.

## ಪರಸ್ಪರಾವಲಂಬನೆಯ ಕಾರ್ಯಗಳನ್ನು ಗುರುತಿಸುವುದು

**ಹಂತ 1: ನಿಮ್ಮ ನಾಯಕತ್ವದ ತಂಡದ ಕಾರ್ಯಗಳನ್ನು ಮತ್ತು ವರಗಳನ್ನು ಗುರುತಿಸುವುದು**

ಕೆಳಕಂಡ ನಕ್ಷೆಯಲ್ಲಿನ ಎಡಕ್ಕಿರುವ ಪಟ್ಟಿಯಲ್ಲಿ ನಿಮ್ಮ ನಾಯಕತ್ವದ ಪ್ರತಿಯೊಬ್ಬ ನಾಯಕರುಗಳನ್ನು ಪಟ್ಟಿ ಮಾಡಿರಿ. ಪ್ರತಿಯೊಂದು ಹೆಸರಿನ ನಂತರ ಎಫೆಸದವರು 4:11 ರಿಂದ ನಾಯಕರುಗಳ ವೈಯಕ್ತಿಕ ಕರೆಯನ್ನು ಪ್ರತಿನಿಧಿಸುವ ಅತ್ಯುತ್ತಮವಾದ ಒಂದು ಅಥವಾ ಹೆಚ್ಚೆಂದರೆ ಎರಡು ಕಾರ್ಯವನ್ನು ಆರಿಸಿಕೊಳ್ಳಿರಿ. ( ಎಫೆಸದವರಿಗೆ 4:11 ರ ಕಾರ್ಯಗಳು ಪಾತ್ರಗಳು ಅಥವಾ ಶಿರೋನಾಮೆಗಳಲ್ಲ, ಬದಲಾಗಿ ಪ್ರತಿಯೊಬ್ಬ ನಾಯಕನು ನಿರ್ವಹಿಸುವ ಸಾದಾರಣ ಕಾರ್ಯಗಳಾಗಿವೆ).

| ನಾಯಕ | **ಅಪೊಸ್ತಲ**<br><br>(ನಮ್ಮನ್ನು ಸಾಗುವಂತೆ ನೋಡಿಕೊಳ್ಳುತ್ತಾನೆ) | **ಪ್ರವಾದಿ**<br><br>(ನಮ್ಮನ್ನು ಶುದ್ಧವಾಗಿಡುತ್ತಾನೆ) | **ಸುವಾರ್ತಿಕ**<br><br>(ನಮಗೆ ಹೇಳುತ್ತಿರುತ್ತಾನೆ) | **ಸಭಾಪಾಲಕ**<br><br>(ನಮಗೆ ಕಾಳಜಿವಹಿಸುತ್ತಿರುತ್ತಾನೆ) | **ಉಪದೇಶಿ**<br><br>(ನಾವು ಸತ್ಯದಲ್ಲಿ ಬೇರೂರಿರುವಂತೆ ನೋಡಿಕೊಳ್ಳುತ್ತಾನೆ) |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

ಈ ಎರಡನೇ ನಕ್ಷೆಯಲ್ಲಿ ಎಡಬದಿಯ ಪಟ್ಟಿಯಲ್ಲಿ ನಿಮ್ಮ ತಂಡದ ಪ್ರತಿಯೊಬ್ಬ ನಾಯಕನ ಪಟ್ಟಿಮಾಡಿರಿ. ಪ್ರತಿ ಹೆಸರಿನ ತರುವಾಯ ಆ ನಾಯಕರುಗಳಿಗಿರುವ ನಾಯಕತ್ವದ ವರಗಳನ್ನು ಗುರುತಿಸಿರಿ.

| **ನಾಯಕ** | **ಆಡಳಿತ** (ವಿವರಗಳ ನಿರ್ವಹಣೆ) | **ನಿರ್ವಹಣೆ** (ಜನರ ನಿರ್ವಹಣೆ) | **ಸಂಸ್ಥೆ** (ರಚನೆ/ವಿನ್ಯಾಸದ ನಿರ್ವಹಣೆ) | **ನಡೆಸುವಿಕೆ** (ಭವಿಷ್ಯದ ನಿರ್ವಹಣೆ) |
|---|---|---|---|---|
| | | | | |
| | | | | |
| | | | | |
| | | | | |
| | | | | |

### ಹಂತ 2: ನಿಮ್ಮ ನಾಯಕತ್ವ ತಂಡದ ವಿವಿಧ ಕಾರ್ಯಗಳಿಗೆ ಹೊಂದಿಕೆಯಾಗುವ ಚಟುವಟಿಕೆಗಳನ್ನು ಗುರುತಿಸುವುದು

ಕೆಳಕಂಡ ನಕ್ಷೆಯ ಎಡಬದಿಯ ಪಟ್ಟಿಯಲ್ಲಿ ನಿಮ್ಮ ತಂಡದ ಪ್ರತಿ ನಾಯಕರನ್ನು ಪಟ್ಟಿ ಮಾಡಿರಿ. ಆನಂತರ ಅಧ್ಯಾಯ ಮೂರರಲ್ಲಿನ "ಐದು ಮೌಲ್ಯಗಳ ಸಂಬಂಧದ ಸಭಾ ಚಟುವಟಿಕೆಗಳು" ಎಂದು ಕರೆಯಲ್ಪಡುವ ವಿಭಾಗಕ್ಕೆ ಹೋಗಿ, ತನ್ನ ಕಾರ್ಯ ಅಥವಾ ಕಾರ್ಯಗಳೊಂದಿಗೆ ಸಂಬಂಧಪಡುವ ಚಟುವಟಿಕೆಗಳೊಂದಿಗೆ ಪ್ರತಿಯೊಬ್ಬ ನಾಯಕನನ್ನು ಹೊಂದಿಸಿರಿ

| **ನಾಯಕ** | | **ದೇವಜನರು ಸಿದ್ಧಗೊಂಡಿದ್ದಾರೋ ಎಂಬುದರ ಕುರಿತಾದ ಐದು ಅಳತೆ/ಮಾಪನಗಳು** (1 ರಿಂದ 10 ರವರೆಗೆ ಒಂದು ಸಂಖ್ಯೆಯನ್ನು ಕೊಡಿರಿ) | | | | **ಚಟುವಟಿಕೆಗಳು** |
|---|---|---|---|---|---|---|
| | ದೇವರ ವಾಕ್ಯದಲ್ಲಿ ಆತನೊಂದಿಗಿನ ಅನ್ಯೋನ್ಯತೆ | ಪವಿತ್ರಾತ್ಮನ ಫಲಗಳನ್ನು ಬೆಳೆಸಿಕೊಳ್ಳುವದು | ವೈಯಕ್ತಿಕವಾದ ಕೃಪಾಸಾಕ್ಷಿಗಳನ್ನು ಹಂಚಿಕೊಳ್ಳುವದು | ಪವಿತ್ರಾತ್ಮನ ವರಗಳನ್ನು ವೃದ್ಧಿಪಡಿಸುವದು | ದೇವರ ರಾಜ್ಯಕ್ಕಾಗಿ ಜೀವಿತ ಮತ್ತು ಸೊತ್ತುಗಳನ್ನು ಮುಡಿಪಾಗಿಡುವುದು | |
| | | | | | | |
| | | | | | | |
| | | | | | | |

| | | | | | | |
|---|---|---|---|---|---|---|
| | | | | | | |

## ಪರಸ್ಪರಾವಲಂಬನೆಯನ್ನು ಅಳವಡಿಸಿಕೊಳ್ಳುವುದು

ನಿಮ್ಮ ಜೀವಿತ ಮತ್ತು ಸೇವೆಗಾಗಿನ ಒಂದು ಸೇವಾ ಹೇಳಿಕೆಯನ್ನು ಬರೆಯುವುದು ನೀನು ಯಾರು ಮತ್ತು ಯೇಸುಕ್ರಿಸ್ತನ ದೇಹದೊಳಗೆ ಒಬ್ಬ ನಾಯಕನಾಗಿ ಕಾರ್ಯ ನಿರ್ವಹಿಸುವುದಕ್ಕೆ ದೇವರು ಹೇಗೆ ನಿನ್ನನ್ನು ಕರೆದನೆಂಬುದರ ಮೇಲೆ ಗಮನವನ್ನಿಡಲು ನಿಮಗೆ ಸಹಾಯಕವಾಗುವದು. ತನ್ನ ವೈಯಕ್ತಿಕವಾದ ಸೇವಾ ಹೇಳಿಕೆಯನ್ನು ಹೆಣೆಯಲು ನಿಮ್ಮ ನಾಯಕತ್ವ ತಂಡದ ಪ್ರತಿಯೊಬ್ಬ ಸದಸ್ಯನೂ ಸಹ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಬೇಕು.

**ನಿಮ್ಮ ಜೀವಿತಕ್ಕಾಗಿ ಒಂದು ಒಂದು ಸೇವಾ ಹೇಳಿಕೆಯನ್ನು ಬರೆಯಿರಿ**

ನಿಮ್ಮ ಜೀವಿತ ಉದ್ದೇಶವೇನು? ನೀವು ಯಾಕೆ ಅಸ್ತಿತ್ವದಲ್ಲಿರುವಿರಿ? ನಿಮ್ಮ ಜೀವಿತದಲ್ಲಿನ ವರ್ಗಾವಣೆ ಮಾಡಲಾಗದ ಫಲಿತಾಂಶಗಳುವು? ನೀವು ಅರವತ್ತೈದು ವರ್ಷದವರಾದಾಗ ನಿಮ್ಮ ಜೀವಿತವು ಹೇಗೆ ಕಾಣಬೇಕೆಂದು ನೀವು ಬಯಸುವಿರಿ?

**ನಿಮ್ಮ ಮೌಲ್ಯಗಳು/ಗುಣಗಳು**

ನಿಮ್ಮ ಜೀವಿತದಲ್ಲಿ ಹೆಚ್ಚಾಗಿ ದೇವರು ಯಾವ ಗುಣ/ಮೌಲ್ಯವನ್ನು ಬೆಳೆಸಬೇಕೆಂದು ನೀವು ಬಯಸುವಿರಿ?

**ನಿಮ್ಮ ಗುರಿಗಳು**

ಹಿಂದಿನ ಎರಡು ಪ್ರಶ್ನೆಗಳಲ್ಲಿ ನೀವು ಪಟ್ಟಿ ಮಾಡಿದ್ದ ಬಯಕೆಗಳು ನೆರವೇರಿದವೆಂಬುದನ್ನು ಖಚಿತಪಡಿಸಲು ಮುಂದಿನ ಹತ್ತು ವರ್ಷಗಳಲ್ಲಿ ನೀವು ಅಳೆಯಬಹುದಾದ ಕೆಲವು ಸಂಗತಿಗಳಾವುವು?

**ವೈಯಕ್ತಿಕ ಮೌಲ್ಯಮಾಪನ**

ಕೆಳಕಂಡ ಕ್ಷೇತ್ರಗಳಲ್ಲಿನ ನಿಮ್ಮ ಮಿತಿಗಳನ್ನು ಗಮನಿಸಿರಿ ಮತ್ತು ಹಾಗೆಯೇ ನೈಜವಾದ ಗುರಿಗಳನ್ನು ಸಿದ್ಧಗೊಳಿಸಿರಿ.

ದೈಹಿಕ/ಶಾರೀರಿಕ - ನಿಮ್ಮ ದೇಹದ ಇತಿಮಿತಿಗಳು ಮತ್ತು ಸೂಕ್ತ ವೇಳಾಪಟ್ಟಿ (ನಿದ್ರೆ, ಆಹಾರಕ್ರಮ, ವ್ಯಾಯಾಮ):

ಭಾವನಾತ್ಮಕ - ಬೇರೆ ಜನರೊಂದಿಗಿನ ನಿಮ್ಮ ಸಂವಹನ:

ಆತ್ಮೀಕ: ಮೌನ, ಏಕಾಂತ, ನಿಶ್ಯಬ್ದ ಮತ್ತು ನೀನು ಹೆಚ್ಚು ಪ್ರಯೋಜನಕಾರಿಯೆಂದು ಕಾಣುವ ಇತರೆ ಶಿಸ್ತುಗಳು:

ಬೌದ್ಧಿಕ - ನಿಮ್ಮ ಜೀವಿತದ ಅರಿವಿನ ಮತ್ತು ಶೈಕ್ಷಣಿಕ ಭಾಗವನ್ನು ನೀವು ಹೇಗೆ ಬೆಳೆಸುವಿರಿ:

# ಮುಕ್ತಾಯ

ಯಾವುದೇ ವ್ಯವಸ್ಥೆಯಲ್ಲಿನ ಪರಿಣಾಮಕಾರಿ ನಾಯಕತ್ವದ ಮಾಪನವು ದೇವರೊಂದಿಗೆ ಸಂಬಂಧದಲ್ಲಿರಲು ಮತ್ತು ಈ ಲೋಕದಲ್ಲಿ ಆತನನ್ನು ಪ್ರತಿನಿಧಿಸಲು ದೇವರನ್ನು ಸಬಲೀಕರಿಸುವುದರ/ಶಕ್ತರಾಗಿಸುವುದರ ಅಂಶದಿಂದ ನಿರ್ಧರಿಸಲಾಗುತ್ತದೆ. ಇದು ಉನ್ನತದಿಂದ ಕೆಳಗಿನ ಮಾದರಿಯಿಂದ ಸಾಧ್ಯವಾಗಲಾರದು. ವಾಸ್ತವವಾಗಿ ಯೇಸುವು ಹೇಳುವ ಇಡೀ ವಿಚಾರದ್ದಾಗಿದೆ "ಇದು ನಿಮ್ಮೊಳಗೆ ಇರಬಾರದು".

ಸಭೆಯು ಲೋಕದಲ್ಲಿ ಯೇಸುವಿನ ಚಿತ್ರಣವಾಗಿದೆ ಮತ್ತು ಆತನ ದೇಹದಲ್ಲಿ ನಾವು ನಾಯಕತ್ವದಲ್ಲಿರಬೇಕಾದರೆ, ನಾವು ಅಧಿಕಾರ ಹೊಂದಬೇಕಾದರೆ, ಬೇರೆಯವರಿಗಾಗಿ ನಮ್ಮ ಪ್ರಾಣ/ಜೀವಿತಗಳನ್ನು ಬದಲಿ ಕೊಡುವುದರಲ್ಲಿ ಆತನಂತೆ ನಾವು ಸೇವಕರಾಗಬೇಕು.

ನಮ್ಮ ಅಹಂ ಅನ್ನು ಬದಿಗಿಟ್ಟು ಆತನೊಂದಿಗೆ ಸಂಬಂಧದಲ್ಲಿರಲು ಮತ್ತು ಆತನನ್ನು ಪ್ರತಿನಿಧಿಸುವುದಕ್ಕಾಗಿ ನಾವು ದೇವಜನರನ್ನು ಶಕ್ತರಾಗಿಸುವ/ ಸಬಲೀಕರಿಸುವುದರ ಸಲುವಾಗಿ

ಒಂದು ನಾಯಕರ ತಂಡವಾಗಿ ಒಟ್ಟಾಗಿ ಕೆಲಸಮಾಡುತ್ತಾ ಸ್ವತ್ಯಾಗಿಗಳಾಗಿರುವಂತೆ, ಸೇವಾಮನೋಭಾವೆಯುಳ್ಳವರಾಗಿರುವುದು ಗುರಿಯಿಂದ ನಡೆಸಲ್ಪಡುತ್ತಿರುವುದರ ಕುರಿತಾಗಿದೆ.

# 5

# ಪಕ್ಕಕ್ಕೆ/ಪಾರ್ಶ್ವ ಮುಖಮಾಡಿರುವುದು

*ಲೋಕದಲ್ಲಿ ದೇವರು ಏನನ್ನೇ ಮಾಡಲು ಹೊರಟರೂ ಸಹ, ಆತನದನ್ನು ಎಲ್ಲ ಕ್ರೈಸ್ತರ ಮೂಲಕ ಮಾಡುವವನಾಗಿದ್ದಾನೆ. ಪ್ರಾಥಮಿಕವಾಗಿ ಆತನು ವಿಕೇಂದ್ರೀಕೃತ ರಚನೆಯ(ವಿನ್ಯಾಸದ) ಮೂಲಕ ಮಾಡುವವನಾಗಿದ್ದಾನೆ.*

ಆದಿಕಾಂಡ 1-3 ರಲ್ಲಿಯೇ ದೇವರು ಈ ಲೋಕದಲ್ಲಿ ಸೇವೆಯಲ್ಲಿರುವುದಕ್ಕೆ ಸಮರ್ಪಿಸಿಕೊಂಡವನಾಗಿದ್ದಾನೆ. ಆದಾಮ ಮತ್ತು ಹವ್ವರು ಪಾಪ ಮಾಡಿ, ಆತನೊಂದಿಗಿನ ಸಂಬಂಧದ ವಿನ್ಯಾಸ/ರಚನೆ ಮತ್ತು ಆತನ ಪ್ರಾತಿನಿಧ್ಯವನ್ನು ತಿರಸ್ಕರಿಸಿದಾಗ; ದೇವರು, ಒಬ್ಬ ಮೆಸ್ಸೀಯನು ಬಂದು ಆದಾಮ ಮತ್ತು ಹವ್ವರ ವಿಫಲತೆಯ ಬಿಕ್ಕಟ್ಟನ್ನು ಪರಿಹರಿಸುವನೆಂಬುದಾಗಿ ದೇವರು ಒಂದು ವಾಗ್ದಾನವನ್ನು ಮಾಡಿದನು (ಆದಿಕಾಂಡ 3:15 ನ್ನು ನೋಡಿರಿ). ದೇವರ ಕಾರ್ಯ ಯೋಜನೆಯು ಆದಾಮನಿಂದ ನೋಹನು, ಮೋಶೆ, ಅಬ್ರಹಾಮ, ದಾವೀದ ಮತ್ತು ಪ್ರವಾದಿಗಳು ಮತ್ತು ಕೊನೆಯ ಆದಾಮನಾದ ಯೇಸುಕ್ರಿಸ್ತನಲ್ಲಿ ಅದರ ನೆರವೇರಿಕೆಯನ್ನು ಕಂಡುಕೊಳ್ಳುವ ತನಕ ಹೆಣೆದುಕೊಂಡಿದೆ. ತನ್ನ ಜೀವನ, ಮರಣ ಮತ್ತು ಪುನರುತ್ಥಾನದಲ್ಲಿ ಯೇಸುವು, ದೇವರ ರಚನೆ/ವಿನ್ಯಾಸವನ್ನು ಮರುಸ್ಥಾಪಿಸಿ, ಹಾಗೆಯೇ ಪ್ರತಿ ಪಂಗಡ, ಭಾಷೆ ಮತ್ತು ದೇಶಕ್ಕಾಗಿನ ಮರುಸ್ಥಾಪನೆಯ ಸೇವೆಯನ್ನು ಸಭೆಗೆ ಹಸ್ತಾಂತರಿಸಿದನು. ಈಗ ಸಭೆಯು ಲೋಕದಲ್ಲಿರುವ ಪ್ರತಿಯೊಬ್ಬರಿಗೆ ದೇವರ ಪ್ರತಿನಿಧಿಯಾಗಿರಬೇಕಿದೆ.

ಹೀಗಾಗಿ, ಅಪೊಸ್ತಲರ ಕೃತ್ಯ 13 ರಲ್ಲಿ ಅಂತಿಯೋಕ್ಯದ ಸಭೆಯ ನಾಯಕತ್ವದ ವೈವಿಧ್ಯತೆ ಅಥವಾ ಅವರಿಗೆ ದೇವರು ಕೊಟ್ಟ ಆದೇಶ(ಆಜ್ಞೆ)ದ ಕುರಿತು ಓದುವುದು ಆಶ್ಚರ್ಯವೆನಿಸುವುದಿಲ್ಲ:

"ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ, ಭೋದಕರೂ ಇದ್ದರು; ಯಾರಾರೆಂದರೆ - ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪರಾಜನಾದ ಹೆರೋದನ ಸಾಕು ತಮ್ಮನಾದ ಮೆನಹೇನ, ಸೌಲ ಇವರೇ. ಇವರು

ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು - ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು. ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಹಿಸಿಕೊಟ್ಟರು. ಹೀಗೆ ಅವರು ಪವಿತ್ರಾತ್ಮನಿಂದ ಕಳುಹಿಸಿಕೊಂಡವರಾಗಿ ಸೆಲ್ಯೂಕಕ್ಕೆ ಬಂದರು; ಅಲ್ಲಿಂದ ಸಮುದ್ರ ಪ್ರಯಾಣವಾಗಿ ಕುಪ್ರದ್ವೀಪಕ್ಕೆ ಹೋದರು" (ಅಪೊಸ್ತಲರ ಕೃತ್ಯಗಳು 13:1-4).

ಅಂತಿಯೋಕ್ಯ ಸಭೆಗೆ ಎಲ್ಲಾ ಬಗೆಯ ಜನರೂ ರಕ್ಷಿಸಲ್ಪಟ್ಟು ಸ್ಥಳೀಯವಾಗಿ ಶಿಷ್ಯತ್ವಕ್ಕೆ ನಡೆಸಲ್ಪಟ್ಟಾಗ ದೇವರು ನಾಯಕರುಗಳಿಗೆ, "ಇದು ಬರೀ ಅಂತಿಯೋಕ್ಯದ ಕುರಿತಾಗಿ ಅಲ್ಲ, ಇದು ಇಡೀ ಜಗತ್ತಿನ ಕುರಿತಾಗಿದೆ!" ಎಂದು ಹೇಳುತ್ತಾನೆ.

ದೇವಜನರು ಪಾರ್ಶ್ವಭಾವವನ್ನು ಹೊಂದಿರಬೇಕಿದೆ - ನಾವು ನಮ್ಮ ಸ್ವಂತ ಸಭೆಗಳನ್ನು ಮೀರಿ ನಮ್ಮ ನೆರೆಹೊರೆ, ಪಟ್ಟಣಗಳು, ರಾಜ್ಯಗಳು ಮತ್ತು ಜಗತ್ತಿಗೆ(ಲೋಕ) ನಮ್ಮನ್ನು ವಿಸ್ತರಿಸಿಕೊಳ್ಳುವವರಾಗಿದ್ದೇವೆ. ದೇವರ ಸೇವೆಗೆ ಸಂಬಂಧಿಸಿದ ಸಭೆಯು ಸೇವಾಮನೋಭಾವವುಳ್ಳದ್ದಾಗಿದ್ದು ಅದು ನಿರಂತರವಾಗಿ ತನ್ನ ಸ್ವಂತ ಗೋಡೆಗಳ ಆಚೆ ನೋಡುತ್ತದೆ. ತನ್ನ ಸುತ್ತಲಿನ ಸುತ್ತಲಿನ ಸ್ಥಳಗಳನ್ನು ದೇವರ ಜ್ಞಾನದಿಂದ ತುಂಬುವುದರ ಸಲುವಾಗಿ, ತನ್ನ ಜನರು ಮತ್ತು ಸೊತ್ತುಗಳನ್ನು ಕಾರ್ಯತಂತ್ರದ ರೀತಿಯಲ್ಲಿ ಮನ:ಪೂರ್ವಕವಾಗಿ ಬಿಟ್ಟುಕೊಡುವುದನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡಿದೆ.

ಒಂದು ಸಭೆಯ ಹೊಣೆಗಾರಿಕೆಯ ಮೊದಲ ವಲಯವು ಅದರ ನೆರೆಹೊರೆಯಾಗಿದೆ. ಅದು ಎಷ್ಟನ್ನು ಒಳಗೊಂಡಿರಬೇಕು - ಕೆಲವು ಬ್ಲಾಕ್ ಗಳಾ? ಬಹಳಷ್ಟು ಬ್ಲಾಕ್ ಗಳಾ? ಉನ್ನತ ಪ್ರದೇಶವಾ? ಇಡೀ ಪಟ್ಟಣವಾ? ದೇವರಾತ್ಮನು ನಮಗೆ ತೋರಿಸುವನು. ಹಾಗೆಯೇ ಆ ವಲಯದಲ್ಲಿರುವ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವು ಸುವಾರ್ತೆಯನ್ನು ಕಾಣುವಂತೆಯೂ ಮತ್ತು ಕೇಳುವಂತೆಯೂ ಮತ್ತು ಯೇಸುವನ್ನು ಆತನ ಅಥವ ಆಕೆಯ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಲು ಅವಕಾಶ ಹೊಂದುವಂತೆ ಭರವಸೆ ಕೊಡುವುದಕ್ಕೆ ನಮ್ಮ ಸೊತ್ತಿನಿಂದ ಸಾಧ್ಯವಾಗುವುದೆಲ್ಲವನ್ನೂ ನಾವು ಮಾಡಬೇಕು.

ಎರಡನೆಯ ವಲಯವು ವಿಶಾಲವಾದದ್ದಾಗಿದೆ. ಬಹುಶ: ಅದು ಒಂದು ದೇಶ ಅಥವಾ ಪ್ರಾದೇಶಿಕ ಸ್ಥಳವಾಗಿರಬಹುದು. ಅದರೆ ಕೀಲಿಯು ಇಲ್ಲಿದೆ: ನಮ್ಮ ಸ್ವಂತ ಸಭೆಯು ಆ ಎಲ್ಲಾ ಜನರನ್ನು ಕರತರುವ ಉದ್ದೇಶ ಹೊಂದಿಲ್ಲ! ಆದಾಗ್ಯೂ ನಾವು ಜನರಿಗಾಗಿ ಸುವಾರ್ತೆಗೆ ಲಭ್ಯತೆಯನ್ನುಂಟುಮಾಡಲು ಬಯಸುತ್ತೇವೆ. ಆ ಪ್ರದೇಶದಲ್ಲಿನ ಎಲ್ಲಾ ಜನರಿಗೆ ಸಭೆಯು ನಿಕಟವಾಗುವಂತೆ ಆ ಪಾಲಕ-ರಹಿತ ಸ್ಥಳಗಳಲ್ಲಿ ನಾವು ಹೊಸ ಸಭೆಗಳನ್ನು ಸ್ಥಾಪಿಸಬೇಕು.

ನಂತರದ ವಲಯವು ನಮ್ಮ ರಾಜ್ಯ ಅಥವಾ ನಮ್ಮ ದೇಶ ಸಹ ಆಗಿರಬಹುದು. ಪುನ: ಅಲ್ಲಿ ನಾವು ಸುವಾರ್ತೆಯ ಹೊಸ ಅಭಿವ್ಯಕ್ತಿಗಳನ್ನು ಸ್ಥಾಪಿಸಲು ಸಹಾಯಕವಾಗಲು ಹಣ ಮತ್ತು ಮಹತ್ವವನ್ನು ಕೊಡುವವರಾಗಿದ್ದೇವೆ. ಕಟ್ಟಡಗಳನ್ನು ಕಾರ್ಯಕ್ರಮಗಳೊಂದಿಗೆ ಉಂಟುಮಾಡುವುದೆಂದರ್ಥವಲ್ಲ, ಬದಲಾಗಿ ನರಾವತಾರ ಮತ್ತು ಕ್ರಿಸ್ತನ ಸಂದೇಶವನ್ನು ಭೋಗೋಳಿಕವಾಗಿ ಜನರಿಗೆ ಸಿಗುವಂತೆ ಮಾಡುವುದರ ಸಲುವಾಗಿ ಸುವಾರ್ತೆಯ ಸಾರುವಿಕೆಯನ್ನು ತೆಗೆದುಕೊಳ್ಳುವ ಸ್ಥಳದಲ್ಲಿ ಜನರನ್ನು ಇಡುವುದಾಗಿದೆ.

ಆನಂತರ ನಾವು ದೂರದರ್ಶಿಸುವುದೆಂಬುದಾಗಿ ಕರೆಯುವ ಜಗತ್ತಿನ ಬೇರೆ ದೇಶಗಳಿಗೆ ಹೋಗುತ್ತೇವೆ (ನಾವಿದನ್ನು ಅಧ್ಯಾಯ 7 ರಲ್ಲಿ ವಿವರವಾಗಿ ಚರ್ಚಿಸಲಿದ್ದೇವೆ).

ಒಂದು ವೇಳೆ ನಾವು ದೇವರೊಂದಿಗೆ ಸೇವೆಯಲ್ಲಿದ್ದರೆ, ನಾವು ನಮ್ಮ ಸ್ವಂತ ಸಭೆಗಳನ್ನು ವಿಸ್ತಾರಗೊಳಿಸುವುದನ್ನೇ ನೋಡುವುದಿಲ್ಲ, ಬದಲಾಗಿ ನಾವು ಕೊಂಡೊಯ್ಯದ ಸ್ಥಳಗಳಿಗೆ ನಾವು ಸುವಾರ್ತೆಯನ್ನು ಕೊಂಡೊಯ್ಯುವಾಗ ಬಾಹ್ಯವಾಗಿ ವಿಸ್ತರಿಸುವುದನ್ನು ನೋಡುವವರಾಗಿದ್ದೇವೆ. ದೇವರೊಂದಿಗೆ ಸೇವೆಯಲ್ಲಿರುವುದರ ಮುಖ್ಯ ಲಕ್ಷಣವು ವಿಸ್ತರಿಸುವುದು, ಜನರ ಸಣ್ಣ ಗುಂಪೊಂದು ಯೇಸುಕ್ರಿಸ್ತನನ್ನು ತಿಳಿದುಕೊಳ್ಳಲು ಬಯಸುವ ಎಲ್ಲಾ ಸ್ಥಳಗಳಲ್ಲಿ ಯೇಸುಕ್ರಿಸ್ತನ ಪ್ರಸನ್ನತೆಯನ್ನು ಹರಡುವುದಾಗಿದೆ. ಆ ಮೂಲಕ ದೇವಜನರ ಜೀವಿತಗಳ ಮೂಲಕ ಕಾಣಲ್ಪಡುವ ಸುವಾರ್ತೆಯ ನರಾವತಾರವು ಅವರ ಸುತ್ತಲಿನ ಜನರಿಗೆ ಅದು  ಸ್ಪಷ್ಟವಾಗುತ್ತದೆ.

## ಮುಖ್ಯ ವಾಕ್ಯಭಾಗಗಳು

ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ:

• ಅಪೊಸ್ತಲರ ಕೃತ್ಯ 1:8: ತನ್ನ ಸಭೆಯು ಪ್ರತಿಯೊಂದು ಭೌಗೋಳಿಕ ಪ್ರದೇಶವನ್ನು ಸುವಾರ್ತೆಯಿಂದ ಭರ್ತಿಮಾಡುವಂತಹ ಒಂದು ದ್ವಿಗುಣಗೊಳಿಸುವ ಜೀವಿಯಾಗಿರಬೇಕೆಂದು ಯೇಸುವು ಉದ್ದೇಶಿದ್ದನು.

# ದ್ವಿಗುಣಗೊಳ್ಳುವಿಕೆಗಾಗಿನ ರಚನೆ

ನಿಮ್ಮ ಹೊಣೆಗಾರಿಕೆಯ ವಲಯದಲ್ಲಿ ಸಂಪೂರ್ಣಗೊಳಿಸುವಿಕೆ/ಭರ್ತಿಯಾಗುವಿಕೆಯು ಏನೆಂದು ತೋರುತ್ತದೆ ಎಂಬುದನ್ನು ವಿವರಿಸಿರಿ (ಜನಸಂಖ್ಯೆ, ನೆರೆಹೊರೆ, ಬಲಸಂಕೇತಗಳು, ಪ್ರಾಂತ್ಯಗಳು, ಮುಖ್ಯ ಜನಸಂಖ್ಯೆ ಇತ್ಯಾದಿ)

ನಿಮ್ಮ ಯೆರೂಸಲೇಮು>

ನಿಮ್ಮ ಯೂದಾಯ:

ನಿಮ್ಮ ಸಮಾರ್ಯ:

ಜಗತ್ತು:

ಈ ಎಲ್ಲಾ ಸ್ಥಳಗಳನ್ನು ಸಂಧಿಸುವುದಕ್ಕೆ ಅವಶ್ಯಕವಾಗಿರುವ ರಚನೆ(ಸಂಸ್ಥೆ)ಯನ್ನು ಬಿಡಿಸಿರಿ ಅಥವಾ ವಿವರಿಸಿರಿ ಮತ್ತು ನಿಮ್ಮ ರಚನೆಯ ಬೇರೆ ಬೇರೆ ಭಾಗಗಳು (ಸಣ್ಣ ಗುಂಪುಗಳು, ಸಭೆಗಳು, ಶಾಖೆ ಸಭೆ, ಇತ್ಯಾದಿ) ಹೇಗೆ ಪರಸ್ಪರ ಒಂದಕ್ಕೊಂದು ಸಂಬಂಧಿಸುತ್ತವೆ.

ಪ್ರತಿಯೊಂದು ಭೌಗೋಳಿಕ ಹಂತಗಳಿಗೆ ಅವಶ್ಯಕವಾಗಿರುವ ನಾಯಕತ್ವವನ್ನು ವಿವರಿಸಿರಿ. ಯಾವ ನಿರ್ದಿಷ್ಟವಾದ ವರಗಳು (2 ನೇ ಅಧ್ಯಾಯದಲ್ಲಿನ ಸತ್ಯವೇದದ ವರಗಳ ಪಟ್ಟಿಯನ್ನು ನೋಡಿ) ಮತ್ತು ಕಾರ್ಯಗಳು (ಎಫೆಸ. 4:11 ನ್ನು ನೋಡಿರಿ) ಬೇಕಾಗಿದೆ?

ಸಾಮರಸ್ಯಕ್ಕಾಗಿ ನಾ ನಿಮ್ಮ ನಾಯಕತ್ವದ ತಂಡವು ನಿಮ್ಮ ಯೆರೂಸಲೇಮ್ ಮತ್ತು ಯೂದಾಯ ಮಾದರಿಗಳ ಒಂದು ಗುಣಾಕಾರ/ದ್ವಿಗುಣವಾಗಿರುವುದೆಂಬುದನ್ನು ಗಮನಿಸಿರಿ. ಆದರೆ, ಇದಕ್ಕೆ ಜವಾಬ್ಧಾರರಾಗಿರಬೇಕಾದ ಒಂದು ಸ್ಪಷ್ಟ ನಾಯಕತ್ವ/ನಾಯಕನು ನಿಮಗೆ ಇರಬೇಕಿದೆ. ಆ ನಾಯಕತ್ವವು ಹೇಗೆ ಕಾಣುತ್ತದೆ? ನಿಮ್ಮ ಸಾಮರ್ಥ್ಯಕ್ಕನುಸಾರವಾಗಿ ವಿವರಿಸಿರಿ- ಈ ತಂಡದ ಸಂಸ್ಥೆ, ವರಗಳು ಮತ್ತು ಜವಾಬ್ಧಾರಿ.

ಅಲ್ಲದೆ, ಜಗತ್ತನ್ನು ಸಂಧಿಸು/ತಲುಪುವುದಕ್ಕಾಗಿ ನಿಮ್ಮ ತಂಡವು  ದೇಶೀಯ/ಸ್ಥಳೀಯ ನಾಯಕತ್ವದ ಕಾರ್ಯವನ್ನು ಸುಗಮಗೊಳಿಸುವ ಮೊದಲ ಮೂರು ವಲಯದ ಮಾದರಿಗಳಿಂದ ಕೂಡಿರುವುದು. ಪುನ: ಹೊರವಲಯವನ್ನು ಸಂಧಿಸುವ ಕ್ಷೇತ್ರದಲ್ಲಿ ನಡೆಸುವುದಕ್ಕೆ ನಿಮಗೆ ಬೇಕಾಗಿರುವ ನಾಯಕತ್ವ/ನಾಯಕರನ್ನು ಮತ್ತು ಸ್ಥಳೀಯವಾಗಿ ಅವರು ನಿಮ್ಮ ಕೆಲಸಕ್ಕೆ ಹೇಗೆ ವ್ಯವಹರಿಸುವರೆಂಬುದನ್ನು ವಿವರಿಸಿರಿ.

ನಿಮ್ಮ ಯೆರೂಸಲೇಮ್:

ನಿಮ್ಮ ಯೂದಾಯ:

ನಿಮ್ಮ ಸಮಾರ್ಯ:

ಜಗತ್ತು:

# ನಾಯಕತ್ವ ಬೆಳವಣಿಗೆಯ ಕೊಳವೆ ಮಾರ್ಗ

ಮೇಲೆ ನೀವು ನಿರ್ಧರಿಸಿದ ನಾಯಕತ್ವದ ವಿಧಗಳ ಆಧಾರದ ಮೇಲೆ ನಿಮ್ಮ ಹೊಣೆಗಾರಿಕೆಯ ವಲಯದ ಪ್ರತಿಯೊಂದು ಹಂತವನ್ನು ನೀವು ಮುಟ್ಟಬೇಕಿದೆ. ನೀವು ಅದರನ್ನು ತರಬೇತಿಗೊಳಿಸಿದ ಹಾಗೆ ಪ್ರತಿ ಹಂತದಲ್ಲಿ ಯಾವ ನಾಯಕರುಗಳು  ಏನನ್ನು ತಿಳಿದುಕೊಳ್ಳಬೇಕು ಮತ್ತು ಮಾಡಬೇಕಿದೆ.

| **ಹೊಣೆಗಾರಿಕೆ ವಲಯದ ಹಂತ** | **ನಾಯಕರುಗಳು ಏನನ್ನು ತಿಳಿದುಕೊಂಡಿರಬೇಕು** | **ನಾಯಕರುಗಳು ಏನನ್ನು ಮಾಡಲು ಶಕ್ತರಾಗಿರಬೇಕು** | **ತರಬೇತಿಯನ್ನು ನೀವು ಹೇಗೆ ಕೊಡುವಿರಿ** |
|---|---|---|---|
| ನಿಮ್ಮ ಯೆರೂಸಲೇಮ್ | | | |
| ನಿಮ್ಮ ಯೂದಾಯ | | | |

| | | | |
|---|---|---|---|
| ನಿಮ್ಮ ಸಮಾರ್ಯ | | | |
| ಜಗತ್ತು/ಭೂಲೋಕ | | | |

## ಸಂಪೂರ್ಣತೆಯೆಡೆಗೆ ಮೂರು ಮತ್ತು ಐದು ವರ್ಷಗಳ ಯೋಜನೆಗಳು

ದ್ವಿಗುಣಗೊಳಿಸುವಿಕೆಗಾಗಿನ ನಿಮ್ಮ ಮೇಲ್ಕಂಡ ರಚನೆಯ ಆಧಾರದ ಮೇಲೆ, ಮುಂದಿನ ಮೂರು ವರ್ಷಗಳಲ್ಲಿ ಪ್ರಾರ್ಥನಾಪೂರ್ವಕವಾಗಿ ನೀವೇನನ್ನು ಅಪೇಕ್ಷಿಸುತ್ತಿರುವಿರಿ (ಗುಂಪುಗಳು, ಸಭೆಗಳು, ಪ್ರತಿ ಹಂತದಲ್ಲಿ ನಾಯಕರುಗಳು, ತಂತ್ರತೆಯುಳ್ಳ ನಾಯಕತ್ವ)?

ನಿಮ್ಮ ಯೆರೂಸಲೇಮ್:

ನಿಮ್ಮ ಯೂದಾಯ:

ನಿಮ್ಮ ಸಮಾರ್ಯ:

ನಿಮ್ಮ ಜಗತ್ತು/ಭೂಲೋಕ:

ಮುಂದಿನ ಐದು ವರ್ಷಗಳಲ್ಲಿ ಪ್ರಾರ್ಥನಾಪೂರ್ವಕವಾಗಿ ನೀವೇನನ್ನು ಅಪೇಕ್ಷಿಸುತ್ತಿರುವಿರಿ?

ನಿಮ್ಮ ಯೆರೂಸಲೇಮ್:

ನಿಮ್ಮ ಯೂದಾಯ:

ನಿಮ್ಮ ಸಮಾರ್ಯ:

ನಿಮ್ಮ ಜಗತ್ತು/ಭೂಲೋಕ:

## ಸಂಪೂರ್ಣತೆಯೆಡೆಗೆ ಒಂದು ವರ್ಷದ ಯೋಜನೆ

ನಿಮ್ಮ ಮೂರು ಅಥವಾ ಐದು ವರ್ಷದ ಯೋಜನೆಯನ್ನು ತಲುಪಲು ಈ ವರ್ಷ ನೀವು ಮಾಡಬೇಕಾದ ಗುರಿಗಳೇನು?

ಈ ಗುರಿಗಳ ಜೊತೆಯಿರಬೇಕಾದ ಕಾರ್ಯಸಂಗತಿಗಳಾವುವು?

## ಮುಕ್ತಾಯ

ಅದರ ಜನರ ವಿಸ್ತರಣೆ ಮತ್ತು ಅದರ ಸ್ಥಳೀಯ ಮತ್ತು ಅದರಾಚೆಯ ಸಮುದಾಯಕ್ಕಿರುವ ಸೊತ್ತುಗಳ ಮೂಲಕ ಸಭೆಯು ಸಮಾಜದ ಅಡ್ಡ ಮತ್ತು ಡೊಂಕುಗಳೊಳಗೆ ಸುವಾರ್ತೆಯನ್ನು ನೇಯಬೇಕಿದೆ. ಇದನ್ನು ಎತ್ತಿಕೊಂಡಿರುವ ಸಭೆಗಳು ಪ್ರಾಥಮಿಕವಾಗಿ ಧಾರ್ಮಿಕ ಸಂಸ್ಥೆಗಳ ಆಡಳಿತವಾಗಿಯೇ ಹೊರತು ಯೇಸು ಕ್ರಿಸ್ತನ ಸೇವಾ ಸಮುದಾಯಗಳಾಗಿ ಪರಿಣಮಿಸದ ಆಸ್ತಿ, ಕಟ್ಟಡಗಳು, ಸಭಾಪಾಲಕರುಗಳು, ಕಾರ್ಯಕ್ರಮಗಳು ಮತ್ತು ಸಿಬ್ಬಂದಿಗಳ ಮೇಲೆ ಗಮನಹರಿಸುವುದಕ್ಕಿಂತ ಹೋಗಿ ದ್ವಿಗುಣಗೊಳಿಸಲು ಹೆಚ್ಚಾಗಿ ಸಿದ್ಧರಾಗಿರಬೇಕು. ಸೇವೆಯಲ್ಲಿರುವುದರ ಲಕ್ಷಣವು ದೇವಜನರ ಮೂಲಕ ಸುವಾರ್ತೆಯ ನರಾವತಾರವು ಸ್ಥಳೀಯ ಸಮುದಾಯಕ್ಕೆ ಸ್ಪಷ್ಟವಾಗುವಂತೆ, ವಿಸ್ತರಿಸುವುದು, ದ್ವಿಗುಣಗೊಳಿಸುವುದು ಮತ್ತು ಜನರನ್ನು ಸಂಧಿಸುವುದು ಅಥವಾ ತಲುಪುವುದಾಗಿದೆ. ಇದು ಸುವಾರ್ತಾ ಸಂಪೂರ್ಣತೆಯಾಗಿದೆ ಮತ್ತು ನಾವು ಪಕ್ಕಕ್ಕೆ ಮುಖಮಾಡುವಾಗ ಮಾತ್ರ ಇದು ಸಾಧ್ಯವಾಗುತ್ತ

# 6

# ಬೇರೆ ಸಭೆಗಳೊಂದಿಗೆ  ಸಂಬಂಧಿಸುವುದು

*ದೇವರು ಈ ಲೋಕದಲ್ಲಿ ಏನನ್ನೇ ಮಾಡಲು ಹೊರಟರೂ, ಆತನದನ್ನು ನಮ್ಮ ಪಟ್ಟಣ ಮತ್ತು ಜಗತ್ತಿನಲ್ಲಿ ಒಂದೇ ಸಭೆಯೆಂಬಂತೆ ಕ್ರೈಸ್ತರ ಮೂಲಕ ಮಾಡುವವನಾಗಿದ್ದಾನೆ.*

ಪ್ರತಿ ಪಟ್ಟಣಗಳಲ್ಲಿ ಬಹಳಷ್ಟು ಸಭೆಗಳು ಸಭೆಗಳಿರುವಾಗ, ಯಾವುದೇ ಸ್ಥಳದಲ್ಲಿ  ನಿಜವಾಗಲೂ ಒಂದು ಸಭೆ ಮಾತ್ರ ಇರುತ್ತದೆ. ಒಂದು ಸ್ಥಳವನ್ನು ಸುವಾರ್ತೆಯಿಂದ ಸಂಪೂರ್ಣಗೊಳಿಸಬೇಕಾದರೆ(ಭರ್ತಿಮಾಡಬೇಕಾದೇ), ಎಲ್ಲಾ ಸಭೆಗಳೂ ಸಹ ಒಂದು ಉನ್ನತವಾದ ದರ್ಶನದಲ್ಲಿ ಒಂದಾಗಿ ಐಕ್ಯಗೊಳ್ಳಲೇಬೇಕಿದೆ.

ಅಪೊಸ್ತಲರ ಕೃತ್ಯ 13 ರಲ್ಲಿ ಸೌಲ ಮತ್ತು ಬಾರ್ನಬರು ಅಂತಿಯೋಕ್ಯ ಸಭೆಯಿಂದ ಕಳುಹಿಸಲ್ಪಟ್ಟರು. ಸಭೆಗೆ ಇವರು ಬಹು ಅಮೂಲ್ಯರಾಗಿದ್ದರು, ಆದರೆ ಅವರನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವುದಕ್ಕಿಂತ, ನಾಯಕರುಗಳು ಅವರ ಕೆಲವು ಸೊತ್ತುಗಳನ್ನು ತೆಗೆದುಕೊಂಡು ಹೆಚ್ಚಿನ ಜನರಿಗೆ ಅವನ್ನು  ಕೊಟ್ಟರು. ಹೆಚ್ಚಿನ ಜನರಲ್ಲಿ(ದೊಡ್ಡ ಸಮೂಹ) ದೇವರು ಮಾಡಲು ಬಯಸಿದ್ದು, ಅವರ ಒಂದು ಸಭೆಯಲ್ಲಿ ತಾನು ಮಾಡಲು ಬಯಸಿದ್ದಕ್ಕಿಂತ ದೊಡ್ಡದ್ದಾಗಿದೆ. ಅದನ್ನು ಗುರುತಿಸಿಯೇ, ಅವರು ಈ  ಇಬ್ಬರನ್ನು ವಿಸ್ತಾರವಾದ ಸೇವೆಗೆ ಬಿಟ್ಟುಕೊಡುವ ಮನಸ್ಸುಳ್ಳವರಾದರು.

ಒಂದು ಸ್ಥಳವನ್ನು ನಾವು ಹೇಗೆ ಸುವಾರ್ತೀಕರಿಸಲು ಬಯಸುತ್ತೇವೆಂಬುದನ್ನು ಯೋಚಿಸುವಾಗ, ನಾವು ಅಂತ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾರಂಭಿಸಬೇಕಿದೆ- ಅಂದರೆ ಕೇವಲ ನಮ್ಮ ಒಂದು ಭಾವನೆಗಿಂತ ವಿಶಾಲವಾದ/ವಿಸ್ತಾರವಾದ ಚಿತ್ರಣ. ಇದಕ್ಕೆ ಬೇರೆ ಸಭೆಗಳೊಂದಿಗೆ ಸಂಬಂಧವನ್ನು ಬೆಳೆಸುವುದರ ಅಗತ್ಯವಿದೆ.

ನಮ್ಮ ಸಭಾಪಾಲಕರೊಬ್ಬರು ಮೇಲಣ ನ್ಯೂಯಾರ್ಕ್ ನಲ್ಲಿ ಸಭೆಯೊಂದನ್ನು ಪ್ರಾರಂಭಿಸಿದಾಗ, ಅದನ್ನವರು ತಮ್ಮ ಸಣ್ಣ ಸಭೆಯು ತಲುಪಲು/ಸಂಧಿಸಲು ದೂರವಾಗಿರುವ ಬಹುದೊಡ್ಡದಾದ ಇಡೀ ಪಟ್ಟಣಕ್ಕಾಗಿನ ಒಂದು ದರ್ಶನದೊಂದಿಗೆ ಪ್ರಾರಂಭಿಸಿದರು. ಹಾಗಾಗಿ ಅವರು ತಮ್ಮ ಸಮುದಾಯದಲ್ಲಿನ ಬೇರೆ ಸಭೆಗಳ ಸಭಾಪಾಲಕರೊಂದಿಗೆ ಸಂಪರ್ಕದಲ್ಲಿರಲು ಬಯಸಿದರು. ಕೇವಲ ಶೇಕಡ ಮೂರರಷ್ಟು ಜನಸಂಖ್ಯೆ ಮಾತ್ರ ವಿಶ್ವಾಸಿಗಳೆಂದು ದಾಖಲಿಸ್ಪಟ್ಟಾಗ ಅನೇಕರು ಧೈರ್ಯಗೆಟ್ಟರು ಮತ್ತು ಆ ಕ್ಷೇತ್ರದಲ್ಲಿನ ಕೆಟ್ಟುಹೋದವರನ್ನು ಸಂಧಿಸಲು ಸಾಕಷ್ಟು ಸಭೆಗಳು ಉತ್ಸಾಹಗೊಳ್ಳಲಿಲ್ಲ. ಈ ವ್ಯಕ್ತಿಯು ಸಭಾಪಾಲಕರುಗಳಿಗೆ ಎರಡು ಪ್ರಶ್ನೆಗಳನ್ನು ಕೇಳಿದರು, ಅವೆಂದರೆ: "ಈ ಪಟ್ಟಣದಲ್ಲಿ ದೇವರು ಏನನ್ನು ಮಾಡುತ್ತಿರುವನೆಂಬುದಾಗಿ ನೀವು ಗ್ರಹಿಸುವಿರಿ?" ಮತ್ತು "ನಿಮಗಾಗಿ ನಾವು ಹೇಗೆ ಪ್ರಾರ್ಥಿಸಿಬಹುದು ಮತ್ತು ನಿಮಗೆ ಸೇವೆ/ಸಹಾಯ ಮಾಡಬಹುದು?".

ಆ ಸ್ಥಳದಲ್ಲಿ ದೇವರು ಹೆಚ್ಚಾಗಿ ಏನನ್ನೂ ಮಾಡುತ್ತಿಲ್ಲವೆಂಬುದಾಗಿ ಅನೇಕರು ಭಾವಿಸಿದರು. ಅವರು ಎರಡನೇ ಪ್ರಶ್ನೆಯನ್ನು ತಿರುಗಿ ಯೋಚಿಸಿದರು, ಯಾಕೆಂದರೆ ಸ್ಥಳೀಯ ಸಭೆಯು ನಿಜವಾಗಲೂ ಒಟ್ಟಾಗಿ ಕೆಲಸಮಾಡಲಿಲ್ಲ ಅಥವಾ ಸಮಾನವಾದ ಒಂದು ಮನಸ್ಸನ್ನು ಹೊಂದಿರಲಿಲ್ಲ. ಹೊಸದಾಗಿ ಬಂದ ಈ ವ್ಯಕ್ತಿಯು ತಮ್ಮ ಜನರು ಅಥವಾ ಸಂಪನ್ಮೂಲಗಳೊಳಗೆ ಮುಳುಗಿಹೋಗುವನೆಂಬುದಾಗಿ ಅನೇಕರು ಚಿಂತಿಸಿರಬಹುದು. ಆದರೆ, ಪಟ್ಟಣವನ್ನು ಸುವಾರ್ತೀಕರಿಸುವುದಕ್ಕೆ ವಿಶಾಲವಾದ ಒಂದು ಸಭೆಗಾಗಿ ಸಭಾಸ್ಥಾಪನೆಯು ದರ್ಶನವೊಂದನ್ನು ಇಡಲು ಪ್ರಾರಂಭಿಸಿದಾಗ, ತಮ್ಮ ಕ್ಷೇತ್ರಗಳಲ್ಲಿ ಸುವಾರ್ತೆಯು ಹರಡುವುದರ ಬಗ್ಗೆ ಗಂಭೀರವಾಗಿರುವ ಬೇರೆ ಸಭೆಗಳೊಂದಿಗಿನ ಪಾಲುದಾರಿಕೆಯು ಬೆಳೆಯಿತು. ಈ ಹೊಸ ಸಭೆಯು ತನ್ನಲ್ಲಿರುವ ಕೆಲವು ಸೊತ್ತುಗಳನ್ನು ತೆಗೆದುಕೊಂಡಿತು ಮತ್ತು ಅಂತಿಯೋಕ್ಯ ಸಭೆಯಂತೆಯೇ ಅದು ಅವುಗಳನ್ನು ತನ್ನ ಸಮುದಾಯದ ವಿಶಾಲವಾದ ಸೇವೆಗಳಿಗೆ ತಿರುಗಿ ಬಿತ್ತಿತು. ಆಗ ಬಹು ಜನರು ಪ್ರತಿಕ್ರಿಯಿಸಲು/ಸ್ಪಂದಿಸಲು ಪ್ರಾರಂಭಿಸಿದರು.

ಬೇರೆ ಸಭೆಗಳ ಕುರಿತಾಗಿ ಅಂತಿಯೋಕ್ಯ ಸಭೆಯು ಮಾಡಿರುವುದು ಪಾಲುದಾರಿಕೆಯ ಸಲುವಾಗಿ ಪಾಲುದಾರಿಕೆಯನ್ನು ಉಂಟುಮಾಡುವುದು ಅಥವಾ ನಮ್ಮ ಕುರಿತಾಗಿ ಒಳ್ಳೆಯದಾಗಿ ಭಾವಿಸುವುದು ಅಥವಾ ನಿರ್ಧಿಷ್ಟವಾದ ಕಾರಣಕ್ಕಾಗಿ ಹೆಚ್ಚಿಸುವುದಲ್ಲ, ಇದು ಸುವಾರ್ತೆಯನ್ನು ಭೂಲೋಕದ ಕಟ್ಟಕಡೆಯವರೆಗೆ ಕೊಂಡೊಯ್ಯುವುದಾಗಿದೆ. ಸಭೆಯು ನಿರಾಶ್ರಯ, ಹಸಿವು ಅಥವಾ ಇತರೆ ಸಾಮಾಜಿಕ ಅಗತ್ಯತೆಗಳಂಥ ಪ್ರಾಯೋಗಿಕ ಕಾಳಜಿಗಳನ್ನು ಹೇಳಬೇಕು. ಆದರೆ ಆ ಕೆಲಸವು ಯಾವಾಗಲೂ ನಮ್ಮ ಸ್ಥಳಗಳಲ್ಲಿನ ಕಳೆದುಕೊಂಡಿರುವಿಕೆಯ ನಿರ್ಮೂಲನೆ ಮಾಡುವ ಮಹಾ ಅಂತ್ಯದೆಡೆಗೆ ಸಾಗಬೇಕು.

ಬೇರೆ ಸಭೆಗಳೊಂದಿನ ನಮ್ಮ ಸಂಬಂಧವು ನಮ್ಮ ಪಟ್ಟಣಗಳು, ರಾಜ್ಯಗಳು, ದೇಶಗಳು ಅಥವಾ ಜಗತ್ತಿನ ಸುತ್ತಲಿದ್ದರೂ, ಆ ಕ್ಷೇತ್ರದಲ್ಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವಿಗೆ ಸುವಾರ್ತೆಯು ಲಭ್ಯವಾಗುವಂತೆ ಮಾಡುವ ಗುರಿಯೊಂದಿಗೆ

ಯೇಸುಕ್ರಿಸ್ತನ ಸುವಾರ್ತೆಗೆ ಕೇಂದ್ರವಾಗಿರುವ ಸಂಬಂಧಗಳನ್ನು ಹಿಂಬಾಲಿಸಬೇಕು. ಆಗ ನಾವು ಸುವಾರ್ತೆಯ ಪ್ರಸರಣಕ್ಕಾಗಿ, ಯೇಸುಕ್ರಿಸ್ತನ ಮಹಿಮೆಗಾಗಿ ಮತ್ತು ನಮ್ಮ ಕ್ಷೇತ್ರಗಳ ಒಳಿತಿಗಾಗಿ ಒಟ್ಟಾಗಿ ನಮ್ಮ ಸೊತ್ತುಗಳನ್ನು ವ್ಯಯಮಾಡಬಹುದು. ಇದು ಆ ಸ್ಥಳದಲ್ಲಿ ದೇವರು ಮಾಡಲು ಬಯಸುವುದರ ಒಂದು ಮಹಾ ಭಾವನೆಯನ್ನು ವಹಿಸುವುದು.

## ಮುಖ್ಯ ವಾಕ್ಯಭಾಗಗಳು

ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ:

- ಆದಿಕಾಂಡ 12:1-9: ದೇವಜನರ ಒಂದು ವಿವರಾತ್ಮಕ ಗುರುತು ದೇಶಗಳಿಗೆ/ಜನಾಂಗಗಳಿಗೆ ಒಂದು ಆಶೀರ್ವಾದವಾಗಿರುವ ಅವರ ಜವಾಬ್ದಾರಿಯಾಗಿದೆ.
- ಅಪಸ್ತಲರ ಕೃತ್ಯಗಳು 11: ಅಂತಿಯೋಕ್ಯ ಸಭೆಗಳು ಜನರನ್ನು ಸಿದ್ಧಗೊಳಿಸುವ, ಸೊತ್ತುಗಳನ್ನು ಹಂಚುವ, ತಮ್ಮ ಭೌಗೋಳಿಕ ಪ್ರದೇಶಗಳನ್ನು ತಲುಪುವ/ಸಂಧಿಸುವ ಮತ್ತು ಬೇರೆ ಸಭೆಗಳೊಂದಿಗೆ ಪಾಲುಗಾರರಾಗುವವುಗಳೆಂಬುದಾಗಿ ವಿವರಿಸಲ್ಪಟ್ಟಿವೆ.
- ಫಿಲಿಪ್ಪಿಯವರಿಗೆ 1:3-5: ಹೊಸ ಒಡಂಬಡಿಕೆಯ ಸಭೆಯು ಕ್ರಿಸ್ತನ ವಿಶಾಲವಾದ/ದೊಡ್ಡ ಗುಂಪಿನೊಂದಿಗಿನ ಸುವಾರ್ತಾ ಪಾಲುದಾರಿಕೆಗೆ ಬೆಲೆಕೊಡುತ್ತದೆ.

# ನಿಮ್ಮ ಪ್ರಾಂತ್ಯದಲ್ಲಿ ಸಂಪೂರ್ಣ ಸಭಾ ಸ್ಥಾಪನೆಗೆ ಹಂತಗಳು

ಸಂಪೂರ್ಣ ಸಭಾ ಸ್ಥಾಪನೆಯು ಕೇವಲ ಒಂದು ಸಭಾ ಸ್ಥಾಪನೆಯ ಸಂಕಲ್ಪಕ್ಕಿಂತಲೂ ಹೆಚ್ಚಿನದಾಗಿದೆ; ಭೌಗೋಳಿಕ ಪ್ರದೇಶವೊಂದರಲ್ಲಿ ದೇವರು ತಾನು ಮಾಡಲು ಹೊರಟಿರುವುದನ್ನೆಲ್ಲ ಕ್ರಿಸ್ತನ ಇಡೀ ದೇಹದ ಮೂಲಕ - ಅಂದರೆ ಒಂದು ಹೆಚ್ಚಿನ ಭೌಗೋಳಿಕ ಪ್ರಾಂತದಲ್ಲಿನ ಎಲ್ಲಾ ದೇವಜನರ ಮೂಲಕ ಮಾಡುತ್ತಾನೆಂಬ ಸತ್ಯಾಂಶ/ವಾಸ್ತವಾಂಶದ ಮೇಲೆ ಕಟ್ಟಲ್ಪಡುವ ಒಂದು ಸಂಧಿಸುವ/ತಲುಪುವ ದೃಷ್ಟಿಕೋನವಾಗಿದೆ. ಇದು ತಮ್ಮ ಸ್ಥಳಗಳನ್ನು ಸುವಾರ್ತೆಯಿಂದ ತುಂಬಿಸಲು ಸಭೆಗಳೆಲ್ಲ ಒಂದಾಗಿ ಕೆಲಸಮಾಡುವುದರ ಮೂಲದೃವ್ಯವಾಗಿದೆ.

ನಿಮ್ಮ ಕ್ಷೇತ್ರದಲ್ಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗು ಸಹ ದೇವರೊಂದಿಗಿನ ಸಂಧಾನದ ಕೊಡುಗೆಗೆ ಕಿವಿಕೊಡಲು, ತಿಳಿದುಕೊಳ್ಳಲು ಮತ್ತು ಪ್ರತಿಕ್ರಿಯಿಸಲು ಮತ್ತೊಂದು ಅವಕಾಶವನ್ನು ಹೊಂದಬೇಕೆಂದು ನಿಜವಾಗಲೂ ನೀವು ಹೇಳುವ ರೀತಿಯಲ್ಲಿ ನಿಮ್ಮ ಸ್ಥಳವನ್ನು ಸುವಾರ್ತೆಯೊಂದಿಗೆ ತಲುಪಲು ನಿಮ್ಮ ಸಭೆಯು ಯಾವ ಹೆಜ್ಜೆಯನ್ನು ತೆಗೆದುಕೊಳ್ಳಬಲ್ಲದು? ಸುವಾರ್ತೆಯೊಂದಿಗೆ ನಿಮ್ಮ ಸ್ಥಳವನ್ನು ತಲುಪುವ ಸಾಮಾನ್ಯ ಗುರಿಗಾಗಿ ಬೇರೆ ಸಭೆಗಳೊಂದಿಗೆ ಸಂಬಂಧವನ್ನು ಬೆಳೆಸಲು ಏಳು ಹಂತ/ಹೆಜ್ಜೆಗಳು ಕೆಳಕಂಡಂತಿವೆ.

## 1. ಯೋಜನೆ

ಸಂಶೋಧನೆ(ಪರಿಶೋಧನೆ): ಒಂದು ಸ್ಥಳದಲ್ಲಿನ ಸಭೆಯ ಚಿತ್ರಣವನ್ನು ನಾವು ತಿಳಿದುಕೊಳ್ಳುವಾಗ, ಒಂದು ಹೊಸ ಸಭೆಯನ್ನು ಎಲ್ಲಿ ಸ್ಥಾಪಿಸಲ್ಪಡಬೇಕೆಂಬುದನ್ನು ನಾವು ಅರಿತುಕೊಳ್ಳುತ್ತೇವೆ. ನಮ್ಮ ದೇಶದಲ್ಲಿನ ಪ್ರತಿಯೊಬ್ಬರೂ ಸಹ ಒಂದು ಸ್ಥಳೀಯ ಸಭೆಯನ್ನು ಪ್ರವೇಶಿಸುವಂತೆ ಖಚಿತಪಡಿಸಿಕೊಳ್ಳುವುದೇ ಅಂತಿಮ ಗುರಿಯಾಗಿದೆ. ಪ್ರವೇಶಿಸುವುದು/ಸಂಪರ್ಕಿಸುವುದು ಎಂದರೆ ಸಭೆಗೆ ನಡೆದುಕೊಂಡು, ಬಸ್ಸನ್ನು ಓಡಿಸಿಕೊಂಡು, ಕಾರನ್ನು ಚಾಲನೆ ಮಾಡಿಕೊಂಡು ಹೋಗುವುದು ಎಂಬ ಅರ್ಥವನ್ನು ಸಹ ಕೊಡುತ್ತದೆ. ಲಭ್ಯತೆಯನ್ನು ಒದಗಿಸುವುದು ಆ ಸ್ಥಳದಲ್ಲಿನ ಸ್ಥಳೀಯವಲ್ಲದ ಭಾಷೆಗಳನ್ನು ಮಾತನಾಡುವ ಅಥವಾ ವಿವಿಧ ಆರಾಧನಾ ಭಾವಗಳನ್ನು ಹೊಂದಿರುವ ಜನರ ಗುಂಪುಗಳಿಗೆ ಸಂಬಂಧಿತ ಅಥವಾ ಅವಶ್ಯಕವಾಗಿರುವ ಸಭೆಯಾಗಿರುವುದು ಎಂಬುದಾಗಿ ಸಹ ಅರ್ಥೈಸುತ್ತದೆ.

ಒಂದು ಸ್ಥಳದಲ್ಲಿನ ಜನರನ್ನು ನಾವು ತಿಳಿದುಕೊಳ್ಳುವಾಗ, ಆ ಕ್ಷೇತ್ರದಲ್ಲಿನ ಪ್ರತಿಯೊಬ್ಬರಿಗೆ ಪುನರಾವರ್ತಿತ ಮತ್ತು ಅರ್ಥಪೂರ್ಣ ಲಭ್ಯತೆಯಲ್ಲಿ ಸುವಾರ್ತಾ ಸಂದೇಶವನ್ನಿಡುವ ಸುವಾರ್ತೀಕರಣದ ತಂತ್ರಗಳನ್ನು ರೂಪಿಸಬಹುದು. ವಿವಿಧ

ಸಾಮಾಜಿಕ ಗುಂಪುಗಳು, ಭೌತಿಕ ಸ್ಥಿತಿ, ವಯಸ್ಸು, ಆರ್ಥಿಕ ಮಟ್ಟ, ಇತ್ಯಾದಿಗಳು ಜನರನ್ನು ತಿಳಿದುಕೊಳ್ಳುವಂತೆ ಮತ್ತು ಕ್ರಿಸ್ತನಲ್ಲಿನ ದೇವರ ಸಂದೇಶವನ್ನು ತಿಳಿದುಕೊಳ್ಳಲು ಎಷ್ಟು ಉತ್ತಮವಾಗಿ ಅವರಿಗೆ ಸಹಾಯ ಮಾಡಬಹುದೆಂಬುದನ್ನು ಕಾಣುವಂತೆ ನಮ್ಮನ್ನು ಶಕ್ತರಾಗಿಸುವ ಸಂಗತಿಗಳಾಗಿವೆ.

ನಿಮ್ಮ ವಿಧಾನವನ್ನು ನಿರ್ಧರಿಸಿ. ನಿಮ್ಮ ಪರಿಶೋಧನೆ(ಸಂಶೋಧನೆ) ಮತ್ತು ನಿಮ್ಮ ಗೋಡೆಯ ಮೇಲಿನ ನಿಮ್ಮ ಕ್ಷೇತ್ರದ ನಕಾಶೆಯಿಂದ ನೀವು ಪಡೆದುಕೊಂಡ ಮಾಹಿತಿಯನ್ನು ನೀವು ಅವಲೋಕಿಸುವಾಗ, ನಿಮ್ಮ ಹೊಣೆಗಾರಿಕೆಯ ವಲಯವನ್ನು ಸಂಧಿಸುವುದು ಎಷ್ಟು ಉತ್ತಮವಾಗಿದೆ ಎಂಬುದನ್ನು ನಿರ್ಧರಿಸಿರಿ.

ಅಲ್ಲದೆ, ಕಲ್ಪಿಸಿಕೊಳ್ಳುವುದು, ತರಬೇತಿ ಮತ್ತು ಕ್ರೋಡೀಕರಿಸುವುದರಿಂದ ಈ ಸಹಾಯಗಳು ವಿಶಾಲವಾದ ಪ್ರಾಂತ್ಯಗಳಲ್ಲಿ ಪ್ರತಿ ಸಭೆಗೆ ಲಭ್ಯವಾಗುವ ರೀತಿಯಲ್ಲಿ ಒದಗಿಸುವಂತೆ ಪ್ರಾದೇಶಿಕ ಕೇಂದ್ರಗಳನ್ನು ನೀವು ಸ್ಥಾಪಿಸಬಹುದೆಂಬುದನ್ನು ನಿರ್ಧರಿಸಿರಿ.

2. **ಕಲ್ಪಿಸಿಕೊಳ್ಳು/ದರ್ಶನ ಕಾಣು**

ಕಲ್ಪಿಸಿಕೊಳ್ಳುವ ಒಂದು ಯೋಜನೆಯನ್ನು ಸ್ಥಾಪಿಸಿರಿ. ನಿಮ್ಮ ಪ್ರಾಂತ್ಯದಿಂದ ಆ ಪ್ರಾಂತ್ಯದಲ್ಲಿನ ಪ್ರತಿಯೊಂದು ಸಭೆಗಾಗಿ ಇರುವ SCP ಯ ದರ್ಶನವನ್ನು ಸಂಪರ್ಕಿಸುವುದಕ್ಕಾಗಿ ಚಟುವಟಿಕೆಯ ಒಂದು ಕ್ಯಾಲೆಂಡರ್ ಮೇಲೆ ನಿರ್ಧರಿಸಿರಿ. ಅಲ್ಲದೆ, ವಿಶಾಲವಾದ/ಹೆಚ್ಚಿನ ಕ್ಷೇತ್ರಗಳಲ್ಲಿ ಬೇರೆ ಸಭೆಯ ಅನೇಕ ನಾಯಕರುಗಳೊಂದಿಗೆ ಒಬ್ಬರ ಮೇಲೊಬ್ಬರನ್ನು ಸಂಧಿಸುವುದಕ್ಕಾಗಿ ಒಂದು ಪ್ರಕ್ರಿಯೆಯನ್ನೂ ಸಹ ಸ್ಥಾಪಿಸಿರಿ. ಆನಂತರ ಈ ನಾಯಕರುಗಳನ್ನು SCP ಯ ಮೂರು ಘಟಕಗಳ ಮೂಲಕ ಕೊಂಡೊಯ್ಯಿರಿ. ಅವೆಂದರೆ: ದರ್ಶನ, ಸಭೆ, ನಾಯಕತ್ವ (SCP ಯ ವಿಶೇಷ ಬೋಧನೆಯ ಸಂಕ್ಷಿಪ್ತ ಆವೃತ್ತಿಗಳು; ಇವು ಅನುಬಂಧ C ಯಲ್ಲಿ ಕಂಡುಬರುತ್ತವೆ).

3. **ಗುರುತಿಸಿ**

ತರಬೇತಿಗೆ ಸಿದ್ಧರಿರುವವರನ್ನು ಗುರುತಿಸುವುದು. ನಿಮ್ಮ ಕ್ಷೇತ್ರದ ಯಾವ ನಾಯಕರುಗಳು ಪ್ರಯಾಣ/ಯಾತ್ರೆ: ಸಂಪೂರ್ಣ ಸಭಾ ಸ್ಥಾಪನೆಯ ಮೂಲಕ ಹಾದುಹೋಗಲು ಸಿದ್ದಗೊಂಡಿದ್ದಾರೆಂಬುದನ್ನು ಕಂಡುಹಿಡಿಯಿರಿ. ಆನಂತರ ನವೀಕರಣವನ್ನು ಓದಲು ಹೇಳಿರಿ ಮತ್ತು ಅದನ್ನು ಮಾಡಲು ಒಪ್ಪುವವರನ್ನು ಮುನ್ನಡೆಸಿರಿ.

4. **ತರಬೇತಿಗೊಳಿಸಿ**

ಮೊದಲ ಅಲೆಯನ್ನು ತರಬೇತಿಗೊಳಿಸಿ. ಪ್ರಯಾಣ/ಯಾತ್ರೆ ತರಬೇತಿ ವಿಷಯವು ಮೊದಲು ಆಸಕ್ತರಾಗಿರುವ ಕೆಲವು ಸಭೆಗಳೊಂದಿಗೆ ಪ್ರಾರಂಭಿಸಬಹುದಾದ ಸ್ಥಳದಲ್ಲಿ ಕನಿಷ್ಟ ಪಕ್ಷ ಒಂದಾದರೂ ಪ್ರಾದೇಶಿಕ ಕೇಂದ್ರವನ್ನು ಸಿದ್ಧಗೊಳಿಸಿರಿ.

ಖಂಡಿತವಾಗಿ ಪ್ರತಿ ಸಭೆಗೆ ಹೋಗುವಂತಹ ತರಬೇತಿ ಕಾರ್ಯಕ್ರಮವೊಂದನ್ನು ಸ್ಥಾಪಿಸಿರಿ. ಮನಸ್ಸಿನಲ್ಲಿನ ನಿಮ್ಮ ವಿಧಾನದ ಮೂಲಕ ವಿಶಾಲವಾದ(ಹೆಚ್ಚಿನ) ಪ್ರಾಂತ್ಯಕ್ಕಾಗಿ ನೀವು ಗುರುತಿಸಿದ ಪ್ರತಿಯೊಂದು ಪ್ರಾದೇಶಿಕ ಕೇಂದ್ರಗಳನ್ನು ನಿಭಾಯಿಸಲು ಸಂಯೋಜಕರನ್ನು ತರಬೇತಿಗೊಳಿಸಿರಿ. ಆ ಪ್ರಾಂತ್ಯದಲ್ಲಿನ ಆಸಕ್ತ ಸಭೆಗಳೊಂದಿಗೆ ಪ್ರತಿ ಕೇಂದ್ರಗಳಲ್ಲಿ SCP ಪ್ರಕ್ರಿಯೆಯನ್ನು ಅನಾವರಣಗೊಳಿಸಿರಿ.

5. **ತರಬೇತುದಾರ**

ನೀವು ಲೆಕ್ಕಿಸಬಹುದಾದ ಹೆಚ್ಚುವರಿ ಗುಂಪುಗಳನ್ನು ಕಂಡುಹಿಡಿಯಿರಿ. ಈಗಾಗಲೇ ತಿಳಿದಿರುವವರ ಹೊರತಾಗಿ ನಿಮ್ಮ ಪ್ರಾಂತದಲ್ಲಿನ ಹೆಚ್ಚುವರಿ ಪ್ರತಿಭಾನ್ವಿತ ಪಾಲುದಾರರನ್ನು ಅಥವಾ ಸಂಪರ್ಕವುಳ್ಳ ಸ್ನೇಹಿತರನ್ನು ಗುರುತಿಸಿರಿ - ಮೊದಲು ಸೇರಲು ಸಿದ್ದವಾಗಿರದ ಸಭೆಗಳು, ಅರೆ-ಸಭಾ ಸೇವೆಗಳು, ಇತ್ಯಾದಿ. ನೀವು ಹಂಚಿಕೊಂಡ ಪ್ರಾಂತ್ಯದೊಳಗೆ ಅಥವಾ ಅವರ ನಿರ್ಧಿಷ್ಟ ಸಭೆಗಳ ಸಂಪರ್ಕಗಳೊಳಗೆ ದರ್ಶನದೊಂದಿಗೆ ಸಹಾಯ ಮಾಡಲು ಮನಸ್ಸುಳ್ಳ ಜೊತೆಗಾರರುಗಳಿಗಾಗಿ ಹುಡುಕಿರಿ.

1-5 ಹಂತ(ಹೆಜ್ಜೆ)ಗಳನ್ನು ಕಟ್ಟಲು ಅವರಿಗೆ ಸಹಕರಿಸಿರಿ. ಅವರ ಸಂಪರ್ಕ ಜಾಲದೊಳಗೆ ಒಂದರಿಂದ ಐದರವರೆಗಿನ ಹೆಜ್ಜೆ ಅಥವಾ ಹಂತಗಳನ್ನು ಕಟ್ಟಲು/ಸ್ಥಾಪಿಸಲುವಆಗ್ಗಾಗ್ಗೆ ಮತ್ತು ಯಾವಾಗಲೂ ಅವರನ್ನು ಸಂಧಿಸಿರಿ. ತಮಗಾಗಿಯೇ ಪ್ರಯಾಣ ಅಥವಾ ಯಾತ್ರೆಯನ್ನು ಪ್ರಾರಂಭಿಸಲು ಮತ್ತು ಸಂಯೋಜಿಸಲು ಅವರನ್ನು ತರಬೇತುಗೊಳಿಸಿರಿ.

6. **ಆಧಾರವಾಗಿರಿ/ಸಹಾಯಮಾಡಿರಿ**

ಆಧಾರವಾಗಿರುವ ಸಾಹಿತ್ಯಗಳನ್ನು(ಬರಹ) ಹಂಚಿರಿ. ಬೇರೆ ಯಾವ ಸುವಾರ್ತಿಕ, ಶಿಷ್ಯತ್ವದ ಮತ್ತು ನಾಯಕತ್ವದ ತರಬೇತಿಯ ಸಲಕರಣಿಗಳು ನಿಮ್ಮ ದೊಡ್ಡ ಪ್ರಾಂತ್ಯದಲ್ಲಿ ಇರುವ ಸಭೆಗಳಿಗೆ ಸಹಾಯಕವಾಗುವವೆಂಬುದನ್ನು ನಿರ್ಧರಿಸಿರಿ ಮತ್ತು ಅವೆಲ್ಲವುಗಳಿಗೂ ಅವು ಲಭ್ಯವಾಗುವಂತೆ ಮಾಡಿರಿ.

ಸಾಂಧರ್ಭಿಕ ಆಚರಣೆಗಳನ್ನು ಏರ್ಪಡಿಸಿರಿ. ಬೇರೆಯವರು ಸೇವಾ ಜೀವಿತವನ್ನು ಮತ್ತು ಸಭೆಯಾಗಿರುವುದನ್ನು ಅಭ್ಯಸಿಸುವುದನ್ನು ಕಾಣಲು ಜನರಿಗೆ ಸಹಾಯಕವಾಗುವಂತೆ ನೀವು ದೇಣಿಗೆ ನೀಡಬಹುದಾದ ಕೆಲವು ಪ್ರಾದೇಶಿಕ ಮತ್ತು ಮಹಾ ಪ್ರಾದೇಶಿಕ ಸಂಭ್ರಮಾಚರಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿರಿ.

ನಿಮ್ಮ ಮೂಲ ತಂಡದೊಂದಿಗೆ ಪ್ರಕ್ರಿಯೆಯನ್ನು ತಿಂಗಳಿಗೊಮ್ಮೆಯಾದರೂ ಪರಿಶೀಲಿಸಿರಿ. ಅಗತ್ಯದಂತೆ ಹೊಂದಾಣಿಕೆ ಮತ್ತು ಸೇರ್ಪಡೆ ಮಾಡುತ್ತಾ ನಿಯಮಿತವಾಗಿ ಪ್ರಕ್ರಿಯೆಯನ್ನು ಕಟ್ಟಲು ಮತ್ತು ಗೊತ್ತುಮಾಡಲು ನಿಮ್ಮ ವಲಯವಾರು ನಾಯಕತ್ವ ತಂಡವನ್ನು ಸೇರಿಸಿರಿ.

7. **ಬಿಟ್ಟುಕೊಡಿರಿ/ಬಿಡುಗಡೆ**

ಬೇರೆ ಪ್ರಾಂತ್ಯ/ಪ್ರದೇಶಗಳಿಗೆ ಸಹಾಯ ಕಳುಹಿಸುವುದನ್ನು ಪರಿಗಣಿಸಿರಿ. ಉತ್ತೇಜಿಸಲು ಮತ್ತು ತಮ್ಮ ಸ್ವಂತ ಸ್ಥಳಗಳಲ್ಲಿ ಬೇರೆ ಸಭೆಗಳೊಂದಿಗೆ ಪಾಲುದಾರಿಕೆಯನ್ನು ಬೆಳೆಸುವುದಕ್ಕೆ ಬೇರೆ ಪ್ರಾಂತ್ಯಗಳಿಗೆ ನೆರವಾಗಲು ನಿಮ್ಮ ನಾಯಕ ಸಮುದಾಯದ ಒಂದು ಭಾಗವನ್ನು ನೀವು ಕಳುಹಿಸಬಹುದಾದ ನಿಮ್ಮ ದೇಶದಲ್ಲಿನ ಬೇರೆ ಸ್ಥಳಗಳನ್ನು ಕಂಡುಕೊಳ್ಳಿರಿ.

ಕರೆಯಲ್ಪಟ್ಟವರನ್ನು ಗುರಿತಿಸಿ, ತರಬೇತಿಗೊಳಿಸಿ ಮತ್ತು ಹೆಚ್ಚು ಪರಿಣಾಮಕಾರಿಯಾಗಿರುವವರನ್ನು ಬೇರೆ ದೇಶಗಳಿಗೆ ಬಿಟ್ಟುಕೊಡಿರಿ. ಇವೆಲ್ಲವುಗಳ ನಡುವೆ ನೀವು, ದರ್ಶನ, ತರಬೇತಿ ಮತ್ತು ಸಹಾಯ ಮಾಡುವುದರಲ್ಲಿ ಬಹು ಪರಿಣಾಮಕಾರಿಯಾಗಿರುವ ಕೆಲವರನ್ನು ಕಂಡುಕೊಳ್ಳುವಿರಿ. ತಮ್ಮ ಸ್ಥಳಗಳಲ್ಲಿ ಪಾಲುದಾರಿಕೆಯನ್ನು ರೂಪಿಸಲು/ಕಟ್ಟಲು ಬೇರೆ ದೇಶಗಳಲ್ಲಿನ ಸಭೆಗೆ ನೆರವಾಗುದಕ್ಕಾಗಿ ಆ ದೇಶಗಳಿಗೆ ಅವರನ್ನು ಕಳುಹಿಸುವುದಕ್ಕೆ ಹೆಜ್ಜೆಗಳನ್ನು ತೆಗೆದುಕೊಳ್ಳಿರಿ.

# ನಾಯಕರುಗಳನ್ನು ಗುರುತಿಸುವುದು

ಸಂಪೂರ್ಣ ಸಭಾ ಸ್ಥಾಪನೆಯು ತಮ್ಮ ಪ್ರಾಂತ್ಯಗಳಿಗಾಗಿ ದೇವರ ಮನಸ್ಸನ್ನು ಹಿಡಿದುಕೊಳ್ಳಬಲ್ಲ ನಾಯಕರುಗಳನ್ನು ಕಂಡುಕೊಳ್ಳುವುದು ಮತ್ತು ತಮ್ಮ ಸ್ವಂತ ಸ್ಥಳಗಳಲ್ಲಿ ಸಂಪೂರ್ಣ ಸಭಾ ಸ್ಥಾಪನೆಯ ತತ್ವಗಳನ್ನು ಕೊಂಡೊಯ್ಯುವುದಕ್ಕೆ ಅವರನ್ನು ತರಬೇತಿಗೊಳಿಸುವುದರ ಕುರಿತಾಗಿದೆ! ನಾವು ಸಮರ್ಥಿಸುವ ತತ್ವಬೋಧನೆ ಮತ್ತು ಮೌಲ್ಯಗಳನ್ನು ಸಾಕಾರಗೊಳಿಸುವ ಮತ್ತು ನಾವು ಹಿಡಿದುಕೊಂಡಿರುವ ತತ್ವಗಳನ್ನು ಪ್ರತಿಬಿಂಬಿಸುವ ಸೇವೆಯನ್ನು ಕೊಂಡೊಯ್ಯುವ ನಾಯಕರುಗಳಿಗಾಗಿ ನಾವು ಹುಡುಕುತ್ತಿದ್ದೇವೆ.

ಮುಖ್ಯ ನಾಯಕರುಗಳನ್ನು ಗುರುತಿಸಲು ಸಂಪೂರ್ಣ ಸಭಾ ಸ್ಥಾಪನೆಯ ತತ್ವಗಳು ಮಾತ್ರವಲ್ಲದೆ ಆ ನಾಯಕನ ಭಾಗಿಯಾಗಿರುವ ಸೇವೆಯ ಮಾದರಿಗೆ ಒಬ್ಬ ನಾಯಕನ ಗ್ರಹಿಕೆಯನ್ನು ನಿರ್ಣಯಿಸಲು ಕೆಳಕಂಡ ಪ್ರಶ್ನೆಗಳನ್ನು ಉಪಯೋಗಿಸಿರಿ. ಇದು ಕೇಳಿಸಿಕೊಳ್ಳುವುದು ಮತ್ತು ಕೆಳಕಂಡ ಅಂಶಗಳ ಕುರಿತಾಗಿ ಒಬ್ಬ ನಾಯಕನ ಸಂಪೂರ್ಣ ಮೌಲ್ಯಮಾಪನ ಅಥವಾ ಪರಿಮಾಣವನ್ನು ನಿಮಗೆ ಕೊಡುವಂತಹ ತನಿಖೆಯ ಪ್ರಶ್ನೆ ಗಳನ್ನು ಕೇಳುವುದರ ಒಂದು ಪ್ರಕ್ರಿಯೆಯಾಗಿದೆ.

## ನಾಯಕನ ಮೌಲ್ಯಮಾಪನ

1. ನಾಯಕನು ಒಂದು ದರ್ಶನವನ್ನು ಹೊಂದಿರುವನೋ? ನಾಯಕನ ಹೃದಯದ ಬಯಕೆಯೇನು(ಮತ್ತಾಯ 18:12-14, 1 ತಿಮೊಥೆ. 2:3-6; 2 ಪೇತ್ರ 3:9)? ಪ್ರತಿ ಪುರುಷ, ಸ್ತ್ರೀ ಮತ್ತು ಮಗುವು ದೇವರೊಂದಿಗೆ ಸಂಧಾನವಾಗಬೇಕೆಂಬ ಒಂದು ಗುರಿಯೊಂದಿಗೆ ಇದು ಸ್ಥಿರವಾಗಿದೆಯೋ?

2. ತನ್ನದೇ ಮಾತಿನಲ್ಲಿ ನಾಯಕನು ದೇವರ ಸೇವಾಗುರಿಯನ್ನು ಸಾಧಿಸುವುದಕ್ಕೆ ಅವಶ್ಯಕವಾದ ಸತ್ಯವೇದದ ತತ್ವ(ಬೋಧನೆ)ಗಳನ್ನು ಹೇಗೆ ಅಭಿವ್ಯಕ್ತಿಗೊಳಿಸುವನು (ಮತ್ತಾಯ 28:18-20; 2 ಕೊರಿಂಥ. 5:18)?

3. ಮೊಟ್ಟ ಮೊದಲನೆಯದಾಗಿ ನಾಯಕನು ವಾಕ್ಯದಿಂದ ಕಟ್ಟಿಹಾಕಲ್ಪಟ್ಟಿದ್ದಾನೋ? ಆ ಕಟ್ಟಿಹಾಕುವಿಕೆಗೆ ತಿಳುವಳಿಕೆ(ಜ್ಞಾನ) ಮತ್ತು ಅನ್ವಯಿಸುವಿಕೆಯಲ್ಲಿ ತನ್ನ ಜೀವಿತದಲ್ಲಿ ಸಾಕ್ಷ್ಯವಿದೆಯೋ?

4. ಆತನೊಬ್ಬ ಏಕವ್ಯಕ್ತಿ ನಾಯಕನೋ ಅಥವಾ ಆತನೊಂದಿಗೆ ಬೇರೆಯವರಿದ್ದಾರೋ? ತನ್ನ ವರವು ಬಹು ಪ್ರಾಮುಖ್ಯವಾದುದ್ದಲ್ಲ ಮತ್ತು ದೇವರ ಸೇವಾಗುರಿಯನ್ನು ಸಾಧಿಸಲು(ನೆರವೇರಿಸಲು) ತನಗೆ ಬೇರೆಯವರ ಅಗತ್ಯವಿದೆಯೆಂಬುದನ್ನು ಆತನು ತಿಳಿದುಕೊಂಡಿದ್ದಾನೋ?

5. ಸಭೆಯ ಮತ್ತು ಲೋಕದಲ್ಲಿ ಬೇರೆಯವರೊಂದಿಗೆ ನಾಯಕನ ಪ್ರಭಾವವೇನು? ಆತನ ಹೆಸರೇನು?

6. ನಾಯಕನಿಗೆ ಬೋಧಿಸುವ ಮತ್ತು ನಮ್ಯತೆ(ಹೊಂದಿಕೊಳ್ಳುವ) ಒಂದು ಪರಿವಿದೆಯೋ? ಆತನು ಬೇರೆಯವರಿಂದ ಕಲಿಯುತ್ತಾನೋ? ಆತನು ಹೆಚ್ಚು ಕಲಿಯಲು ಮತ್ತು ಬೆಳೆಯಲು ಬಯಸುವನೋ?

## ನಾಯಕನ ಸೇವೆಯ ಮೌಲ್ಯಮಾಪನ

1. ನಾಯಕನ ಸೇವೆಯ ಯಾವ ಅಂಶಗಳು ಅಂತಿಯೋಕ್ಯ ಸಭೆಯ ಏಳು ಗುಣಲಕ್ಷಣದೊಂದಿಗೆ ಹೆಚ್ಚು ಸ್ಥಿರವಾಗಿವೆ: ಗುರಿಚಾಲಿತವಾಗಿರುವುದು, ದೇವಜನರ ಮೌಲ್ಯಗಳನ್ನು ಅಳೆಯುವುದು, ದೇವಜನರನ್ನು ಸಬಲೀಕರಿಸುವುದು(ಬಲಗೊಳಿಸುವುದು), ಪಕ್ಕಕ್ಕೆ ಮುಖಮಾಡುವುದು(ಪಾರ್ಶ್ವ ನಿಲುವು ಹೊಂದಿರುವುದು) ಬಹುಸಂಖ್ಯೆಯ ಪರಸ್ಪರಾವಲಂಬಿ ನಾಯಕರನ್ನು ಹೊಂದಿರುವುದು, ಬೇರೆ ಸಭೆಗಳೊಂದಿಗೆ ಪಾಲುದಾರರಾಗುವುವುದು ಮತ್ತು ದೂರದರ್ಶಿಸುವುದು (ಜಾಗತಿಕವಾಗಿ ಉದ್ದೇಶಪೂರ್ವಕವಾಗಿರುವುದು)?

2. ನಾಯಕನ ಸೇವೆಯು ಸುವಾರ್ತೀಕರಣ ಮತ್ತು ಸಭಾ ಸ್ಥಾಪನೆಗಾಗಿ ನಿಲುವು ಹೊಂದಿರುವುದೋ? ಅದು ಆಂತರಿಕವೋ ಅಥವಾ ಬಾಹ್ಯವೋ? ತನ್ನ ಹಣಕಾಸಿನ ವಿಷಯದಲ್ಲಿ ಸಭೆಯ ನಿಲುವು ಸ್ಪಷ್ಟವಾಗಿದೆಯೋ?

3. ಸಭೆಯ ಒಳಗೆ ಮತ್ತು ಹೊರಗೆ ನಾಯಕನ ಸೇವೆಯ ಎಷ್ಟು ಭಾಗವು ನಾಯಕರುಗಳಿಂದ ಮಾಡಲ್ಪಟ್ಟಿದೆ( ಎಲ್ಲಾ ದೇವಜನರಿಗೆ ವಿರೋಧವಾಗಿ)?

4. ಈ ನಾಯಕನ ಸೇವೆಯ ಯಾವ ಸಂಪ್ರದಾಯ ಮತ್ತು ಆಚರಣೆ(ಅಭ್ಯಾಸ)ಗಳು SCP ಗೆ ವಿರೋಧವಾಗಿ ಮಿತಗೊಳಿಸಬಹುದು?

ಅನಾದಿ ಕಾಲದಿಂದ ದೇವರು ಒಂದು ಸೇವೆಯಲ್ಲಿದ್ದಾನೆ ಮತ್ತು ಆತನು ಆ ಸೇವೆಯನ್ನು ತನ್ನ ವಾಕ್ಯದಲ್ಲಿ ಸ್ಪಷ್ಟಪಡಿಸುದ್ದಾನೆ. ಆ ಕಾರಣಕ್ಕಾಗಿ ತಮ್ಮ ಜೀವಿತಗಳು ದೇವರ ಸೇವೆಯೊಂದಿಗೆ ಸ್ಥಿರವಾಗಿರುವುದಕ್ಕಾಗಿ ಈಗಾಗಲೇ ದರ್ಶನವನ್ನು ಹೊಂದಿರುವ ವ್ಯಕ್ತಿಗಳನ್ನು ಕಂಡುಹಿಡಿಡಿಯುವುದು ನಮ್ಮ ಕರ್ತವ್ಯವಾಗಿದೆ. ತಮ್ಮ ಭೂಪ್ರದೇಶಕ್ಕಾಗಿ ದೇವರ ಹೃದಯ(ಮನಸ್ಸನ್ನು) ಹೊತ್ತೊಯ್ಯುವಲ್ಲಿ ಈ ನಾಯಕರುಗಳು ಹೆಚ್ಚು ಸ್ವೀಕೃತರೂ ಮತ್ತು ಶಕ್ತರೂ ಆಗಿದ್ದಾರೆ.

ಯಾಕೆಂದರೆ ಅವರು ಒಂದು ಸಂಸ್ಥೆಯ ಉದ್ದೇಶವನ್ನಲ್ಲ, ಬದಲಾಗಿ ತನ್ನ ಸಭೆಗಾಗಿನ ದೇವರ ಯೋಜನೆಯನ್ನು ಪಾಲಿಸುವವರಾಗಿದ್ದಾರೆ.

## ಮುಕ್ತಾಯ

ಅಂತಿಯೋಕ್ಯ ರೀತಿಯ ಸಭೆಗಳು, ಕೇವಲ ತಮ್ಮ ಒಂದು ನಿರ್ಧಿಷ್ಟ ಸೇವೆಯ ಭಾವನೆಯ ಬಾದಲಾಗಿ ಒಂದು ಇಡೀ ಭೂಪ್ರದೇಶದ ಚಿತ್ರಣವನ್ನೊಳಗೊಂಡಿವೆ. ನಮ್ಮ ಕ್ಷೇತ್ರಗಳನ್ನು ನಾವು ಸುವಾರ್ತೀಕರಣಗೊಳಿಸಲು ಹೊರಡುವಾಗ, ಮನಸ್ಸಿನಲ್ಲಿ ನಾವು ಇಡೀ ಪ್ರಾಂತ್ಯದಿಂದ ಪ್ರಾರಂಭಿಸಬೇಕು. ನಾವು ನೇಮಿಸುವ ಪ್ರತಿ ಕಾರ್ಯತಂತ್ರವು, ಕೇವಲ ಆ ಪಟ್ಟಣಗಳಲ್ಲಿ ಒಂದು ಸಭೆಯನ್ನು ಹೇಗೆ ಕಟ್ಟಬೇಕೆಂಬುದಾಗಿರದೆ, ನಮ್ಮ ಪಟ್ಟಣಗಳಲ್ಲಿನ ಇಡೀ ಜನಸಂಖ್ಯೆಯನ್ನು ತಲುಪುವುದರ ಕುರಿತಾಗಿರಬೇಕು. ನಮ್ಮ ಕ್ಷೇತ್ರದಲ್ಲಿನ ಪ್ರತಿಯೊಬ್ಬರಿಗೆ ಸುವಾರ್ತೆಯನ್ನು ತಲುಪಿಸುವುದು ನಮ್ಮ ಸಭೆಗಳ ಕುರಿತಾಗಿ ಯೋಚಿಸುವುದರಿಂದ ಆರಂಭವಾಗುತ್ತದೆ.

ತಮ್ಮ ಕ್ಷೇತ್ರದುದ್ದಕ್ಕೂ ಮಾಡಬೇಕೆಂದು ದೇವರು ಬಯಸುವ ವಿಶಾಲವಾದ(ದೊಡ್ಡ) ಚಿತ್ರಣವು, ಅವರ ಒಂದು ಸಭೆಯಲ್ಲಿ ತಾನು ಮಾಡಲು ಬಯಸುವುದಕ್ಕಿಂತ ದೊಡ್ಡದಾಗಿದೆ ಎಂಬುದನ್ನು ಅಂತಿಯೋಕ್ಯ ಸಭೆಗಳು ಗುರುತಿಸುತ್ತವೆ. ಆದುದರಿಂದ ಅವರು ತಮ್ಮ ಜನರನ್ನು ಮತ್ತು ಸಂಪನ್ಮೂಲಗಳನ್ನು ತಮ್ಮ ಸುತ್ತಲಿನ ಭೂಪ್ರದೇಶಗಳ ಹತೋಟಿಗೆ ಕೊಡಲು ಮತ್ತು ಬೇರೆ ಸಭೆಗಳ ಸಹಕಾರದೊಂದಿಗೆ ಸಿದ್ದರಿದ್ದಾರೆ.

ನಮ್ಮ ಬಹುದೊಡ್ಡ ಸೊತ್ತು, ಮತ್ತು ಜನರನ್ನು ತೆಗೆದುಕೊಂಡು ಅವುಗಳನ್ನು ವಿಶಾಲವಾದ ಒಂದು ಭೂಪ್ರದೇಶ, ಜಗತ್ತಿನಲ್ಲಿ ಬಿತ್ತೋಣ. ಹೀಗೆ ಇಡೀ ಸಭೆಯು ಸುವಾರ್ತಾ ವಿಸ್ತರಣೆಯಿಂದ ಪ್ರಯೋಜನ ಹೊಂದಬಲ್ಲದು. ದೇವರ ಮಹಿಮೆಗಾಗಿ, ನಮ್ಮ ಸ್ಥಳಗಳ ಒಳಿತಿಗಾಗಿ ಮತ್ತು ಲೋಕಕ್ಕೆಲ್ಲ ಸುವಾರ್ತೆಯನ್ನು ತೆಗೆದುಕೊಂಡು ಹೋಗುವ ಗುರಿಯನ್ನು ಪೂರ್ಣಗೊಳಿಸುವುದಕ್ಕಾಗಿ, ನಮ್ಮ ಕ್ಷೇತ್ರಗಳನ್ನೆಲ್ಲ ಸುವಾರ್ತೆಯಿಂದ ಸಂಪೂರ್ಣಗೊಳಿಸಲು(ತುಂಬಿಸಲು) ದೇವರು ನಮ್ಮ ವಶಕ್ಕೆ ಕೊಟ್ಟಿರುವ ಸೊತ್ತುಗಳನ್ನು ತೆಗೆದುಕೊಂಡು, ನಮ್ಮ ಪಟ್ಟಣ, ಪ್ರಾಂತ್ಯ, ರಾಜ್ಯ, ದೇಶಗಳು ಮತ್ತು ಜಗತ್ತಿ(ಲೋಕ)ನಲ್ಲಿರುವ ಸಭೆಗಳ ಸೇವೆಗಾಗಿ ಅವುಗಳನ್ನು ವಿನಿಯೋಗಿಸುವುದರ ಮೂಲಕ ನಾವು ಇಡೀ ದೇಹ(ಸಭೆ)ವನ್ನು ಆಶೀರ್ವದಿಸಲು ಆಶಿಸುವವರಾಗಿದ್ದೇವೆ.

# 7

# ದೂರದರ್ಶಿಸುವುದರ ಮೂಲಕ ಜಾಗತಿಕವಾಗಿ ಉದ್ದೇಶಪೂರ್ವಕವಾಗಿರುವುದು

*ಈ ಲೋಕದಲ್ಲಿ ದೇವರು ಯಾವುದೇ ಸ್ಥಳೀಯ ಸಭೆಯ ಹೊಣೆಗಾರಿಕೆಯ ವಲಯದಿಂದ ದೂರದಲ್ಲಿ ಏನನ್ನೇ ಮಾಡಲು ಹೊರಟರೂ ಸಹ, ಆತನದನ್ನು ಪವಿತ್ರಾತ್ಮನ ಜಂಟಿ ಸಾಹಸದ ಮೂಲಕ ಮತ್ತು ಆ ಸ್ಥಳದಲ್ಲಿನ ಸ್ಥಳೀಯ ಜನರೊಂದಿಗೆ ಮಾಡುವವನಾಗಿದ್ದಾನೆ.*

ದೇವರೊಂದಿಗೆ ಸೇವೆಯಲ್ಲಿರುವ ನಾವುಗಳು ನಮ್ಮ ಸ್ಥಳದಲ್ಲಿರುವ ಬೇರೆ ಸಭೆಗಳನ್ನು ಸಹ ತಲುಪಬೇಕಿದೆ ಮತ್ತು ಒಂದಾಗಿ ಅವರೊಂದಿಗೆ ಕೆಲಸ ಮಾಡಬೇಕಿದೆ. ಆದ್ದರಿಂದ ಜಗತ್ತಿನ ಸುತ್ತ ಸಾಂಸ್ಕೃತಿಕ ಮೇರೆಗಳುದ್ದಕ್ಕೂ ಸಭೆ ಗಳೊಂದಿಗೆ ಪಾಲುದಾರರಾಗಬೇಕಿದೆ. ನಮ್ಮ ಸ್ವಂತ ಭೂಪ್ರದೇಶಗಳನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಿರುವಾಗ - ಎಲ್ಲಾಕ್ಕಿಂತ ನಾವು ಆ ಸ್ಥಳದಲ್ಲಿರುವ ದೇವಜನರಾಗಿದ್ದೇವೆ ಮತ್ತು ಅದೇ ವೇಳೆ ನಾವು ವಾಸಿಸುವ, ಮಲಗುವ ಮತ್ತು ಕೆಲಸ ಮಾಡುವ ಪಟ್ಟಣಗಳನ್ನು ನಾವು ಆಳವಾಗಿ ಪ್ರೀತಿಸಬೇಕಾಗಿದೆ ಕೂಡ. ನಾವು ಬರೀ ಸಮೀಪದೃಷ್ಟಿಯುಳ್ಳವರಾಗಿರಬಾರದು. ಲೋಕಕ್ಕಾಗಿ ನಮಗೊಂದು ಪ್ರೀತಿ ಸಹ ಇರಬೇಕಿದೆ.

ನಮ್ಮದೇ ಜೀವಿತಗಳು ಮತ್ತು ನಮ್ಮ ಹತ್ತಿರದ ವಲಯಗಳಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಅತಿಯಾಗಿ ಯೋಚಿಸುವವರಾಗಿ ನಾವು ಸಮೀಪ ದೃಷ್ಟಿಯುಳ್ಳವರಾಗಿರುವುದು ಸುಲಭ. ಆದರೆ ದೇವರು ಇಡೀ ಲೋಕವೇ ತನ್ನ ಮಹಿಮೆಯಿಂದ ಮತ್ತು ಸ್ವರೂಪದಿಂದ ತುಂಬಬೇಕೆಂಬುದಾಗಿ ಅನಾದಿಯಿಂದಲೇ ಬಯಸಿದ್ದನು. ತನ್ನ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟ ಆದಾಮ ಹವ್ವರಿಗೆ ಆತನು ಕೊಟ್ಟ ಆಜ್ಞೆಯು, "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ;

ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳುವುದಾಗಿದೆ(ಆದಿಕಾಂಡ 1:28)- ಪೂರ್ಣವಾಗಿ ಆತನ ಸ್ವರೂಪದಿಂದ ತುಂಬುವುದಾಗಿದೆ, ಮತ್ತು ಅದು ಎಂದಿಗೂ ಬದಲಾಗಿಲ್ಲ. ಪಾಪವು ದೇವರ ಉದ್ದೇಶಿತ ವಿನ್ಯಾಸವನ್ನು ಕೆಡಿಸಿಬಿಟ್ಟಿತು, ಆದರೆ ಆತನು ಅಬ್ರಹಾಮನಿಗೆ ಮಾಡಿದ ತನ್ನ ವಾಗ್ದಾನದಲ್ಲಿ ನಾವು ನೋಡುವಂತೆ ತನ್ನ ಜನರ ಮೂಲಕ ಭೂಮಿಯನ್ನು ತನ್ನ ಸ್ವರೂಪದಿಂದ ತುಂಬಿಸುವ ದೇವರ ಉದ್ದೇಶವು ಹಾಗೆಯೇ ಉಳಿದುಕೊಂಡಿತು: "ನಿನ್ನ ಮೂಲಕ ಭೂ ಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು" (ಆದಿಕಾಂಡ 12:3). ಇಡೀ ಲೋಕವನ್ನು ಆಶೀರ್ವದಿಸಲು ದೇವರು ತನ್ನ ಎಲ್ಲಾ ಜನರನ್ನು ಉಪಯೋಗಿಸಲು ಬಯಸುತ್ತಾನೆಂಬುದು ವಾಕ್ಯಭಾಗದ ನಮ್ಮ ತಿಳುವಳಿಕೆಯಾಗಿದೆ.

ಅದು ಎಲ್ಲಿದೆ ಎಂಬುದನ್ನು ಲಕ್ಷಿಸದೆ, ಅದು ದೊಡ್ಡದಿರಲಿ ಅಥವಾ ಸಣ್ಣದರಲಿ, ಶ್ರೀಮಂತವಾಗಿರಲಿ ಅಥವಾ ಬಡವಾಗಿರಲಿ, ಪ್ರತಿ ಸಭೆ ಸಹ ಲೋಕದಲ್ಲಿ ಮತ್ತೊಂದು ಸ್ಥಳವನ್ನು ಕಂಡುಕೊಳ್ಳಬೇಕು ಮತ್ತು ಆ ಸ್ಥಳದಲ್ಲಿನ ಬೇರೊಂದು ಸಭೆಯೊಂದಿಗೆ ಪಾಲುದಾರಿಕೆ ಹೊಂದಬೇಕು ಮತ್ತು ನಮ್ಮ ಸ್ವಂತ ಸ್ಥಳಗಳಲ್ಲಿ ದೇವರು ಏನನ್ನು ಮಾಡುತ್ತಿದ್ದಾನೆಂಬುದನ್ನು ಹೇಳಲು  ಮತ್ತು ಅದು ಅಲ್ಲಿಯೂ ನಡೆಯುವಂತೆ ಅರ್ಥಪೂರ್ಣವಾದ ಮಾರ್ಗಗಳನ್ನು ಕಂಡುಕೊಳ್ಳಬೇಕು. ಇದರರ್ಥ ಕೇವಲ ಒಂದು ಚೆಕ್ಕನ್ನು ಬರೆಯುವುದು ಅಥವಾ ಯೌವನಸ್ಥರ ಕೇಂದ್ರಗಳನ್ನು ಅಥವಾ ಶಾಲೆಗಳನ್ನು ನಿರ್ಮಿಸಲು ಅಲ್ಪಕಾಲದ ಪ್ರವಾಸವನ್ನು ಕೈಗೊಳ್ಳುವುದಕ್ಕಿಂತ ಹೆಚ್ಚಿನದಾಗಿದೆ. ಬದಲಾಗಿ, ಆ ಸ್ಥಳವನ್ನು ಪೂರ್ಣವಾಗಿ ಸುವಾರ್ತೀಕರಿಸುವುದರಲ್ಲಿ ನಮ್ಮ ಜೀವಿತಗಳನ್ನು ತ್ಯಾಗಪೂರ್ಣವಾಗಿ ವಿನಿಯೋಗಿಸುವುದಾಗಿದೆ.

ಆ ಸ್ಥಳದಲ್ಲಿನ ನಮ್ಮ ಅರ್ಥಪೂರ್ಣವಾದ ಹೂಡಿಕೆಯು, ಪರಸ್ಪರವಾಗಿ ಆ ಸಭೆಯಲ್ಲಿನ ನಾಯಕರುಗಳೊಂದಿಗೆ ಪಾಲುದಾರರಾಗುವುದನ್ನು ಒಳಗೊಂಡಿರುತ್ತದೆ. ಅವರಿಗೆ ಬೋಧಿಸುವುದಕ್ಕಿಂತ, ಅವರಿಂದ ಕೇಳಿಸಿಕೊಳ್ಳಲು ಮತ್ತು ಅವರಿಂದ ಕಲಿತುಕೊಳ್ಳಲು ನಾವು ಸ್ಥಳೀಯ ನಾಯಕರುಗಳೊಂದಿಗೆ ಒಟ್ಟಾಗಿ ಸೇರಿ ಕೆಲಸಮಾಡುವುದನ್ನು ನಾವು ಕಲಿಯಬೇಕು. ಅಮೇರಿಕದವರು ಹೋಗಲು, ಬೋಧಿಸಲು, ಹೇಳಲು ತಜ್ಞರಾಗಲು ಇಷ್ಟಪಡುತ್ತಾರೆ. ಆದರೆ ಲೋಕದಾದ್ಯಂತ ಇರುವ ಸಭೆಯಿಂದ ಕಲಿತುಕೊಳ್ಳುವುದು, ಹಾಗೆಯೇ ನಮ್ಮ ಪಾಶ್ಚಾತ್ಯ ಹಿನ್ನಲೆಗೆ ಬಂದು, ನಮ್ಮ ಸಾಂಸ್ಕೃತಿಕ ಚೌಕಟ್ಟಿನಾಚೆ ಆಗುತ್ತಿರುವುದನ್ನು ನಾವು ನೋಡುವುದರ ಮೂಲಕ ಸಭೆಯ ಮೇಲೆ ಪ್ರಭಾವ ಬೀರುವುದು ಒಂದು ದೊಡ್ಡ ಸಂತೋಷವಾಗಿದೆ. ಅವರಲ್ಲಿ ಹೂಡಿಕೆ ಮಾಡುವುದರ ಮೂಲಕ ಅಲ್ಲಿನ ನಾಯಕರುಗಳೊಂದಿಗೆ ನಾವು ತ್ಯಾಗಪೂರ್ವಕವಾಗಿ ಒಟ್ಟಾಗಿ ಕೆಲಸ ಮಾಡಬಹುದು, ಮತ್ತು ಅವರು ಸಹ ನಮ್ಮಲ್ಲಿ ತ್ಯಾಗಪೂರ್ವಕವಾಗಿ ಹೂಡಿಕೆ ಮಾಡುವರು.

## ಮುಖ್ಯ ವಾಕ್ಯಭಾಗಗಳು

ಸ್ವಲ್ಪ ಸಮಯ ತೆಗೆದುಕೊಂಡು ಕೆಳಕಂಡ ವಾಕ್ಯಭಾಗಗಳನ್ನು ಓದಿರಿ ಮತ್ತು ಚರ್ಚಿಸಿರಿ:

• ಯೆಶಾಯ 49:6- ಪುರುಷ, ಸ್ತ್ರೀ ಮತ್ತು ಮಕ್ಕಳನ್ನು ವಿಮೋಚಿಸುವ ದೇವರ ಸಮಗ್ರ ಯೋಜನೆಯು ಆದಿಯಿಂದಲೇ ಆತನ ಹೃದಯ/ಮನಸ್ಸಿನಲ್ಲಿತ್ತು.

• ಮತ್ತಾಯ 28:18-20- ಭೂಮಿಯ ಮೇಲೆ ತನ್ನ ರಾಜ್ಯವನ್ನು ಕಟ್ಟುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ದೇವರು ತನ್ನ ಸಭೆಗೆ ಆಜ್ಞಾಪಿಸಿದ್ದಾನೆ.

## ದೂರದರ್ಶಿಸುವ ಹೆಜ್ಜೆ/ಹಂತಗಳು

1. **ಪ್ರಾರ್ಥಿಸಿ**

ನಾಯಕರಾಗಿ ಸಮಯ ತೆಗೆದುಕೊಂಡು ಲೋಕದಲ್ಲಿ ಎಲ್ಲಿ ನಿಮ್ಮ ಸಭೆಯು ಹೂಡಿಕೆ ಮಾಡಬೇಕೆಂದು ದೇವರು ಬಯಸುತ್ತಾನೆ ಎಂಬುದರ ಕುರಿತಾಗಿ ನಿಮ್ಮ ಜನರಿಗೆ ತಿಳಿಹೇಳುವುದರ ಮೂಲಕ ಪ್ರಾರಂಭಿಸಿರಿ. ತನ್ನ ಜನರ ಹೃದಯಗಳ ಮೂಲಕ ಹಾದುಹೋಗಲು ದೇವರಿಗೆ ಸಮಯಕೊಡಿರಿ. ಕೆಳಕಂಡ ಹಂತ/ಹೆಜ್ಜೆಗಳ ಮೂಲಕ ಒಂದು ಸಭೆ ಮತ್ತು ನಾಯಕತ್ವದ ತಂಡವಾಗಿ  ಪ್ರಾರ್ಥಿಸುತ್ತಲೇ ಇರ್ರಿ.

2. **ಸಭೆಯೊಳಗಿನ ಸಂಪರ್ಕಗಳನ್ನು(ಸಂಬಂಧ) ಪರೀಕ್ಷಿಸಿರಿ**

ನಿಮ್ಮ ಸಭೆಯೊಳಗೆ ದೇವರು ತನ್ನ ಜನರಿಗೆ ಕೊಡಲ್ಪಟ್ಟ ಸಹಜವಾದ ಸಂಪರ್ಕ(ಸಂಬಂಧ)ಗಳ ಒಂದು ಪಟ್ಟಿಯನ್ನು ಮಾಡಿರಿ:

• ಅವರು ಸಹಾಯ ಮಾಡಿದ ಅಥವಾ ಕೆಲಸಮಾಡಿದ ಸೇವೆಗಳು

• ಬೇರೆ ದೇಶಗಳಲ್ಲಿ ಅವರಿಗಿರುವ ಸ್ನೇಹಿತರು ಮತ್ತು ಕುಟುಂಬ ಮತ್ತು ಅವರು ಹೋಗುವ ಸಭೆಗಳು.

• ದೇವರು ಅವುಗಳ ಹೃದಯದಲ್ಲಿ ಪರಿಣಾಮ ಬೀರಿದ ಜಗತ್ತಿನ ದೇಶಗಳು ಮತ್ತು ಪ್ರಾಂತ್ಯಗಳು

• ನಿಮ್ಮ ಸಭೆಯಲ್ಲಿ ಪ್ರಚಲಿತದಲ್ಲಿರುವ ಭಾಷೆಗಳು ಮತ್ತು ರಾಷ್ಟ್ರೀಯತೆಗಳು

3. **ಸಂಶೋಧಿಸಿರಿ**

ಮೊದಲೆರಡು ಹಂತ(ಹೆಜ್ಜೆ)ಗಳ ಮೂಲಕ ಹೇಗೆ ದೇವರು ನಿಮ್ಮ ಸಭೆಯನ್ನು ನಡೆಸುತ್ತಿದ್ದಾನೆಂಬುದನ್ನು ಗೊತ್ತುಮಾಡಿರಿ. ಹೆಚ್ಚು ವಾಗ್ದಾನಯುತ ಸಂಪರ್ಕಗಳ ಸಂಶೋಧಿಸುವುದಕ್ಕಾಗಿ ಒಂದು ಯೋಜನೆಯ ನಕ್ಷೆಯನ್ನು ಮಾಡಿರಿ.

4. **ಗುರುತಿಸಿರಿ**

ಅಧ್ಯಾಯ 6 ರಲ್ಲಿನ  ವಿಭಾಗದಲ್ಲಿ ಕಂಡುಬರುವ

"ನಾಯಕರುಗಳನ್ನು ಗುರುತಿಸುವುದು" ಎಂಬ ಹಂತ/ಹೆಜ್ಜೆಯನ್ನುಪಯೋಗಿಸಿ, ನೀವು ನಾಯಕರುಗಳನ್ನು ಕಂಡುಕೊಳ್ಳಬಹುದಾದ ಸ್ಥಳಗಳನ್ನು ಮತ್ತು ಸಂಪೂರ್ಣ ಸಭಾ ಸ್ಥಾಪನೆಯ ಫಲಿತಾಂಶಕ್ಕೆ ಹೆಚ್ಚು ಸ್ವೀಕಾರ್ಹವಾದ ರಚನೆ(ವಿನ್ಯಾಸ)ಗಳನ್ನು ಹುಡುಕಿರಿ.

5. **ತೀರ್ಮಾನಿಸಿರಿ ಮತ್ತು ಯೋಜನೆ ಮಾಡಿರಿ**

ಒಂದು ಸಭೆಯಾಗಿ ನೀವು ಎಲ್ಲಿ ವಿನಿಯೋಗಿಸಬೇಕೆಂದು ದೇವರು ನಿಮಗೆ ಕೇಳುತ್ತಿದ್ದಾನೆಂಬುದನ್ನು ಪ್ರಾರ್ಥನಾಪೂರ್ವಕವಾಗಿ ನಿರ್ಧರಿಸಿರಿ. ಒಂದು ದರ್ಶನ ಮತ್ತು ಮುಖ್ಯ ಗುರಿಗಳನ್ನು ರೂಪುರೇಖೆಗೊಳಿಸುವ ಒಂದು ವರುಷ, ಮೂರು ವರುಷ ಮತ್ತು ಐದು ವರುಷಗಳಿಗಾಗಿ ಕೆಳಕಂಡ ಮೂರು ಸಹಾಯಕ(ಬೆಂಬಲಿತ) ಕ್ಷೇತ್ರಗಳ ಆಧಾರದ ಮೇಲೆ ಹೂಡಿಕೆಯ ಒಂದು ಯೋಜನೆಯನ್ನು ರೂಪಿಸಿರಿ.

6. **ನಾಯಕತ್ವದೊಂದಿಗೆ ನೆರವಾಗಿರಿ**

ಪ್ರಾಯಾಣ(ಯಾತ್ರೆ)ದಿಂದ ದೂರ ಸ್ಥಳದಲ್ಲಿರುವ ನಾಯಕರುಗಳಿಗೆ ನೀವು ಹೇಗೆ ಅನುಕೂಲಮಾಡಿಕೊಡುವಿರೆಂಬುದಾಗಿ ನಿಮ್ಮ ನಾಯಕತ್ವದೊಂದಿಗೆ ಒಂದು ಸಂಕಲ್ಪವನ್ನು ಮಾಡಿಕೊಳ್ಳಿರಿ. ಸ್ಥಳೀಯ ನಾಯಕರುಗಳು ಪ್ರಯಾಣದ ಮೂಲಕ ಕಾರ್ಯಮಾಡುವಂತೆ, ಬೇಕಾಗಿರುವ ಪೂರಕ ಕಾರ್ಯತಂತ್ರಗಳಿ ನೆರವಾಗಿರಿ ಗೆ ಅವರು ಎಷ್ಟು ಬೆಂಬಲ ಮತ್ತು ತರಬೇತಿಯನ್ನು ಕೊಡುತ್ತಾರೆಂಬುದನ್ನು ನಿಮ್ಮ ಸ್ವಂತ ನಾಯಕತ್ವವು ನಿರ್ಧರಿಸಬೇಕು.

7. **ಸಭೆಯಿಂದ ಜನರೊಂದಿಗೆ ನೆರವಾಗಿರಿ**

ನಿಮ್ಮ ನಾಯಕತ್ವವು ಒಂದು ದೂರದರ್ಶಿಸುವ ಪಾಲುದಾರಿಕೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿರುವಾಗ, ನಿಮ್ಮ ಸಭೆಯ ಕಾರ್ಯತಂತ್ರಗಳ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಅಲ್ಪಾವಧಿಯ ತಂಡಗಳನ್ನು ಕಳುಹಿಸುವಲ್ಲಿ ನಿಮ್ಮ ಸಭೆಯು ಸ್ಥಳೀಯ ಮಾದರಿಯೊಳಗೆ ಹೇಗೆ ಮತ್ತು ಎಲ್ಲಿ ಪಾಲ್ಗೊಳ್ಳಬಹುದೆಂಬುದನ್ನು ಇದು ಕೇಳುವದು. ಪ್ರವೀಣರಾಗಲು ಸಮಯಕೊಡುವಾಗ ನಿಮ್ಮ ಸ್ವಂತ ಸಭೆ ಮತ್ತು ದೂರದ ಸಭೆಗಳಲ್ಲಿನ ಜನರ ವರ ಮತ್ತು ದಾಹದ ಮೂಲಕ ಸಂಬಂಧಗಳು ಸ್ವಾಭಾವಿಕವಾಗಿ ವೃದ್ಧಿಯಾಗುವವು.

8. **ಸಂಪನ್ಮೂಲಗಳ ಮೂಲಕ ಬೆಂಬಲಿಸಿರಿ(ನೆರವಾಗಿರಿ)**

ಹಣ, ತರಬೇತಿ, ವಸ್ತುಗಳು, ಆಹಾರ, ಬಟ್ಟೆ ವೈದ್ಯಕೀಯ ಸೌಲಭ್ಯಗಳು ಜಗತ್ತಿನ ಬೇರೊಂದು ಪ್ರಾಂತ್ಯದಲ್ಲಿ ತನ್ನ ಜನರ ಮೂಲಕ ದೇವರು ಮಾಡುತ್ತಿರುವುದನ್ನು ಸುಗಮಗೊಳಿಸುವುದಕ್ಕಿರುವ ಮಾರ್ಗಗಳೆಂಬುದಾಗಿ ತಮ್ಮನ್ನು ನಿರೂಪಿಸುವ ಅವಕಾಶಗಳಾಗಿರಬಹುದು. ಸಂಪನ್ಮೂಲಗಳಿಂದ ನಿಮ್ಮ ಜೊತೆ ಸಭೆಗೆ ಹೇಗೆ ನೆರವಾಗಿ, ಆ ಸಂಪನ್ಮೂಲಗಳನ್ನು ಹಂಚಿಕೆಮಾಡಬೇಂದು ನೀವು ತೀರ್ಮಾನಿಸುವುದು ಒಂದು ವಿದೇಶಿ ನೆಲದಲ್ಲಿ SCP ಯನ್ನು ಸುಗಮಗೊಳಿಸಲು ಒಂದು ಬಹುದೊಡ್ಡ ಸಹಾಯವಾಗಬಲ್ಲದು. ಆದರೂ ಸಂಪನ್ಮೂಲಗಳನ್ನು ನೀವು ಹೇಗೆ ಹಂಚಿಕೆ ಮಾಡುತ್ತೀರೆಂಬುದು ಒಂದು ಅಡ್ಡಿ ಸಹ ಆಗಬಲ್ಲದು. ಒಂದು ಸಭೆಯು ಸೇವೆಯ ತಪ್ಪುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಒಂದು ಯೋಜನೆಯನ್ನು ಹೊಂದಿರಬೇಕು. ಸ್ವಲ್ಪ ಸಮಯವನ್ನು ತೆಗೆದುಕೊಂಡು ಯಾವ ರೀತಿಯಲ್ಲಿ ನಿಮ್ಮ ಸಂಪನ್ಮೂಲಗಳು ಸಹಾಯಕವಾಗಬಲ್ಲವೋ ಅಥವಾ ಅಡ್ಡಿ ಆಗಬಲ್ಲವೋ ಎಂಬುದನ್ನು ನಿಮ್ಮ ತಂಡದೊಂದಿಗೆ ಚರ್ಚಿಸಿರಿ. ಕೆಲವು ಪ್ರಾಯೋಗಿಕ ಉದಾಹರಣೆಗಳನ್ನು ಕೊಡಿರಿ.

# ಮುಕ್ತಾಯ

ನಾವೆಲ್ಲ ಒಟ್ಟಾಗಿ ಸೇರಿ ಮಾಡಲು ದೇವರು ನಮಗೆ ಕೊಟ್ಟಿರುವ ಸುವಾರ್ತೀಕರಣದ ಗುರಿಯನ್ನು ಪೂರ್ಣಗೊಳಿಸಲು ಜಗತ್ತಿನಾದ್ಯಂತ ಇರುವ ಸಭೆಗಳೊಂದಿಗೆ ಜತೆಜತೆಯಾಗಿ ಪಾಲುದಾರರಾಗುವುದಕ್ಕಾಗಿ ನಾವು ಕರೆಯಲ್ಪಟ್ಟಿದ್ದೇವೆ. ನಾವು ನಮ್ಮ ಜನರನ್ನು ಶಿಷ್ಯರನ್ನಾಗಿ ಮಾಡುವಾಗ, ಜಗತ್ತಿನಾದ್ಯಂತ ಇಲ್ಲಿ ಮತ್ತು ಅಲ್ಲಿ ಎರಡೂ ಕಡೆ ದೇವರು ಒಂದೇ

ಸೇವೆಯಲ್ಲಿರುವುದನ್ನು ನಾವು ಕಾಣಬಹುದು. ನಮ್ಮ ಸಂಸ್ಕೃತಿಗಳು ವಿಭಿನ್ನವಾಗಿವೆ, ನಮ್ಮ ಹಿನ್ನೆಲೆಗಳು ವಿಭಿನ್ನವಾಗಿವೆ ಆದರೆ ನಮ್ಮ ಕುಲ ಬಣ್ಣ ಅಥವಾ ಭಾಷೆಗಳ ಭೇದ ಭಾವವಿಲ್ಲದೆ ಭೂಲೋಕದ ಕಟ್ಟಕಡೆಯವರೆಗೂ ಸುವಾರ್ತೆಯನ್ನು ಕೊಂಡೊಯ್ಯುವ ನಮ್ಮ ಸತ್ಯವೇದದ ನಿಲುವುಗಳು ಒಂದೇ ಆಗಿವೆ. ನಮ್ಮ ಸ್ಥಳಗಳಲ್ಲಿ ದೇವರು ಏನನ್ನು ಮಾಡಲು ಬಯಸುತ್ತಾನೆಂಬ ನಿಲುವಿನಲ್ಲಿ ಹಂಚಿಕೊಳ್ಳುವುದು ಒಂದು ಬಲವಾದ ಸಂಗತಿಯಾಗಿದೆ. ಆತನು ಜಗತ್ತಿನಾದ್ಯಂತ ಸಹ ಮಾಡಲು ಬಯಸುತ್ತಾನೆ.

## ಮುಕ್ತಾಯ

## ಪಾಶ್ಚಾತ್ಯ ಸಭೆಗೆ ನವೀಕರಣದ ಅಗತ್ಯವಿದೆ

ಪಾಶ್ಚಾತ್ಯ ಸಭೆಯು ನವೀಕರಣದ ಅಗತ್ಯದಲ್ಲಿದೆ! ನಾವೇನನ್ನು ಮಾಡುವೆವೆಂಬುದಕ್ಕಿಂತ ಮಿಗಿಲಾಗಿ ನಾವು ಯೋಚಿಸುವ ಬಗೆಯನ್ನು ಅತೀವವಾಗಿ ಪ್ರಶ್ನಿಸುವ ಅಗತ್ಯದಲ್ಲಿ ನಾವಿದ್ದೇವೆ. ಸಮಸ್ಯೆಯೇನೆಂದರೆ, ನಮ್ಮ ಯೋಚನೆಯನ್ನು ಸುಧಾರಣೆ ಮಾಡುವುದು ಯಾವಾಗಲೂ ಅಷ್ಟು ಸುಲಭವಲ್ಲ.

ಒಂದು ಸಂಗತಿಯೇನೆಂದರೆ, ಪಾಶ್ಚಾತ್ಯದಲ್ಲಿನ ಸಭೆಯು, ಸಭೆಯನ್ನು ನಂಬಿಕೆಯ ಅಭ್ಯಾಸಗಳಲ್ಲಿ ಮತ್ತು ತನ್ನ ಸಭೆಗಾಗಿನ ದೇವರ ಉದ್ದೇಶದ ಸೇವೆಯಲ್ಲಿ ಪಾಲ್ಗೊಳ್ಳುವುದರಲ್ಲಿ ಜನರು ಬೆಳೆಯುವುದಕ್ಕಾಗಿ ಇರುವ ಸ್ಥಳವಾಗಿದೆ ಎಂಬುದಕ್ಕಿಂತ ಮಿಗಿಲಾಗಿ ಒಟ್ಟಾಗಿ ಸೇರುವುದಕ್ಕಾಗಿ ಇರುವ ಒಂದು ಸ್ಥಳವಾಗಿದೆಯೆಂದು ನೋಡಬೇಕೆಂದು ವಿಧಿಸಿದೆ.  ನಾಯಕತ್ವವು ಸಭೆಯ ಕುರಿತ ಸತ್ಯವೇದದ ವಿಚಾರಕ್ಕಿಂತ ಸ್ವಲ್ಪವಾಗಿ ದೇವ ಜನರು ವಿಶ್ರಮಿಸುವುದಕ್ಕೆ ಅನುಮತಿಸಿದೆ - ಒಂದು ಸ್ಥಳವಾಗಿ ಅವರು ಅಲ್ಲಿ ಸೇರಬಹುದು, ಆರಾಧಿಸಬಹುದು ಮತ್ತು ಒಂದು ಸಂದೇಶವನ್ನು ಕೇಳಬಹುದು. ಆದರೀಗ, ಕ್ರಿಸ್ತನು, ಆತನ ಸುವಾರ್ತೆ, ಆತನ ಅಪೇಕ್ಷೆಗಳು ಮತ್ತು ಆತನ ಜೀವಿತ ಕುರಿತ ಹಗೆತನವು ನಮ್ಮ ಸಂಸ್ಕೃತಿಯಲ್ಲಿ ಆತನ ಜನರಲ್ಲಿ ಹೆಚ್ಚುತ್ತಿರುವಾಗ, ಸಾಮಾನ್ಯವಾಗಿ ದೇವ ಜನರು ಮುಂದೆ ಸಾಗುವುದು ಅಸಾಧ್ಯವಾಗಿದೆ. ಸಭೆಯು ದೇವರೊಂದಿಗೆ ಸಂಬಂಧದಲ್ಲಿರಲು ಮತ್ತು ಆತನನ್ನು ಪ್ರತಿನಿಧಿಸುವುದಕ್ಕಾಗಿ ರೂಪಿಸಲ್ಪಟ್ಟಿರುವ  ಒಂದು ಜನವಾಗಿದೆ.

ನಾವು ಎಲ್ಲೇ ಹೋಗಲಿ ಅಥವಾ ಹೋದಲ್ಲಿ ಏನನ್ನೇ ಮಾಡಲಿ, ಯೇಸುಕ್ರಿಸ್ತನ ಸಭೆಯು ಕಳುಹಿಸಲ್ಪಟ್ಟ ಒಂದು ಜನವಾಗಿದೆ. ಕೇವಲವಾದದ್ದೆಲ್ಲವೂ ಕೇವಲ ಅಸಮರ್ಪವಾಗಿರುವುದು ಮಾತ್ರವಲ್ಲದೆ, ಅದು ದುರ್ಬೋಧನೆಯಾಗಿದೆ.

ಸಭೆಯನ್ನು ಅದರ ಸುಧಾರಣಾ ಯೋಚನೆಯಿಂದ ದೂರವಿರಿಸುವ ಇನ್ನೊಂದು ಸಮಸ್ಯೆಯೆಂದರೆ ಅದು ನಾಯಕತ್ವದಲ್ಲಿರುವ ಅನೇಕರ ಗರ್ವವಾಗಿದೆ!  ಯಾಕೆ ಒಟ್ಟಾಗಿ ಸೇರಿಬರುವ ಒಂದು ಸ್ಥಳವಾದ ಸಭೆಯ ವಿಚಾರವು ಅದನ್ನು ಮುನ್ನಡೆಸುವವರಿಗೆ ಅಷ್ಟೊಂದು ವೈಯಕ್ತಿಕವಾದ ಅರ್ಥವನ್ನು ಹೊಂದಿದೆ ಎಂಬುದನ್ನು ನೋಡಲು ಸುಲಭವಾಗಿದೆ. ಆದರೆ ನಾಯಕತ್ವವು ನಿಜವಾಗಲೂ ತನ್ನ ಸಭೆಯನ್ನು ಮುನ್ನಡೆಸಲು ಕರೆಲ್ಪಟ್ಟವರಿಗೆ ಯೇಸುವಿನಿಂದ ಕೊಡಲ್ಪಟ್ಟ ಬಲಪಡಿಸುವ ಆದೇಶದಿಂದ ನಡೆಸಲ್ಪಡುವಾಗ, ಅವರ ಸ್ವಂತ ಪ್ರಾಮುಖ್ಯತೆಯು ದೇವರೊಂದಿಗೆ ವೈಯಕ್ತಿಕ, ದೈನಂದಿನ, ಅನ್ಯೋನ್ಯವಾದ ಸಂಬಂಧಕ್ಕೆ ಎಡೆಮಾಡಿಕೊಡುತ್ತದೆ. ನಾಯಕರುಗಳು ಸಾಮಾನ್ಯವಾಗಿ ಶುಶ್ರೂಷಕಿಯರುಗಳಾಗಿದ್ದು, ಸತ್ಯದಲ್ಲಿ ನಡೆಯಲು ಮತ್ತು ಸತ್ಯವನ್ನು ಕೊಡುವವನೊಂದಿಗೆ ಅರ್ಥಪೂರ್ಣವಾದ ಸಂಬಂಧವನ್ನು ಬೆಳೆಸಿಕೊಳ್ಳುವಂತೆ ದೇವಜನರಿಗೆ ನೆರವಾಗುವುದಕ್ಕಾಗಿ ಕರೆಯಲ್ಪಟ್ಟವರಾಗಿದ್ದಾರೆ! ಈ ನಿಲುವಿನಲ್ಲಿ ಆತನು ಹೆಚ್ಚಾಗುವುದಕ್ಕಾಗಿ ಅವರು ಸ್ವಇಚ್ಛೆಯಿಂದ ಕಡಿಮೆಯಾಗುವರು. .

ಕೊನೆಯದಾಗಿ, ನಮ್ಮ ಯೋಚನೆಗಳನ್ನು ಸುಧಾರಿಸಲು ನಮಗೆ ಕಷ್ಟಕರವಾಗುತ್ತದೆ. ಯಾಕೆಂದರೆ, ನಾವು ಚರ್ಚಿಸಿದಂತೆ, ಸಭೆಗೆ ಬರುವುದನ್ನು ಆಕರ್ಷಕವಾಗಿಯೂ ಮತ್ತು ಸುಲಭಕರವಾಗಿಯೂ ಇರಲು ಮಾಡಬೇಕಾದಗಳನ್ನೆಲ್ಲ ನಾಯಕರುಗಳು ಮಾಡಬೇಕೆಂಬುದಾಗಿ ಇಂದು ಅನೇಕ ವಿಶ್ವಾಸಿಗಳು ಅಪೇಕ್ಷಿಸುತ್ತಾರೆ. ಈ ನಾಯಕತ್ವದಲ್ಲಿ ಮನುಷ್ಯನ ಮತ್ತು ನಮ್ಮ ಸಂಸ್ಕೃತಿಯ ಅಂತರ್ಗತವಾದ ಸ್ವಾರ್ಥತೆಯನ್ನು ಉತ್ತೇಜಿಸಲಾಗಿದೆ. ಇಂದು ಜನರಿಗೆ ಯೇಸುಕ್ರಿಸ್ತನ ವಾಕ್ಯಗಳ ಬೆಳಕಿನಲ್ಲಿ ನಡೆಯುವುದಕ್ಕೆ ಕರೆಗೊಡಲು ನವೀಕರಣದ ಒಂದು ದೀರ್ಘವಾದ ಹಾದಿ ಬೇಕಾಗಿದೆ.

# ನವೀಕರಣವನ್ನು ಒಪ್ಪಿಕೊಳ್ಳುವುದು

ಹಾಗಾದರೆ ಸಭೆಯಾಗಿ ನಾವು ಏನನ್ನು ಮಾಡುತ್ತೇವೆಂಬುದು ಮಾತ್ರವಲ್ಲದೆ ನಾವು ಹೇಗೆ ಯೋಚಿಸುತ್ತೇವೆ ಎಂಬುದನ್ನು ಸಹ ನಾವು ಹೇಗೆ ಯಶಸ್ವಿಯಾಗಿ ಮರುಮೌಲ್ಯಮಾಪನ ಮಾಡುತ್ತೇವೆ?

ಮೊದಲನೆಯದಾಗಿ, ನಾವು ಸಭೆಗಾಗಿ ಇರುವ ದೇವರ ಉದ್ದೇಶವನ್ನು ಹಿಡಿದುಕೊಳ್ಳಬೇಕು ಮತ್ತು ಅದು ನೆರವೇರುವುದನ್ನು ಕಾಣಲು ಗುರಿಗಳನ್ನು ನಿಗಧಿಪಡಿಸಬೇಕು. ನಾವು ಗುರಿಯಿಂದ ನಡೆಸಲ್ಪಡುವರಾಗಿರಬೇಕು! ತನ್ನ ಸಭೆಗಾಗಿನ ದೇವರ ಸ್ಪಷ್ಟವಾದ ಸತ್ಯವೇದದ ಉದ್ದೇಶಗಳಲ್ಲಿ ಭಾಗಿಯಾಗುವುದು, ಹೊಣೆಗಾರಿಕೆಯ ಭೂಪ್ರದೇಶದ ಒಂದು ವಲಯವನ್ನು ಸ್ಪಷ್ಟಪಡಿಸಲು ಪವಿತ್ರಾತ್ಮನೊಂದಿಗೆ ಸಂಭಾಷಿಸುವುದು ಮತ್ತು ಪ್ರತಿ ಪುರುಷ, ಸ್ತ್ರೀ ಮತ್ತು ಮಗುವು ಸುವಾರ್ತೆಯನ್ನು ಕೇಳಲು, ನೋಡಲು ಮತ್ತು ಮುಟ್ಟಲು ಮತ್ತು ಅವರು ಕ್ರಿಸ್ತನಿಗಾಗಿ ಒಂದು ತೀರ್ಮಾನವನ್ನು ಮಾಡುವಂತೆ ಅವರಿಗೆ ಒಂದು ಅವಕಾಶವನ್ನು ಕೊಡಲ್ಪಡುವುದನ್ನು ಕಾಣಲು ನಮ್ಮೆಲ್ಲ ಸಂಪನ್ಮೂಲಗಳನ್ನು ಕೇಂದ್ರೀಕರಿಸುವಂಥದ್ದು ಬೇರೊಂದಿಲ್ಲ.

ಎರಡನೆಯದಾಗಿ, ನಮ್ಮ ಹೊಣೆಗಾರಿಕೆಯ ವಲಯದಲ್ಲಿರುವವರನ್ನು ಸುವಾರ್ತಿಕರಿಸಲು ನಾವು ಕಾರ್ಯತಂತ್ರಗಳನ್ನು ರೂಪಿಸಲೇಬೇಕು. ಈ ಗುರಿಯನ್ನು ಸಾಧಿಸುವ ಪ್ರಾಥಮಿಕ ಬಗೆಯು ದೇವ ಜನರನ್ನು ಸಿದ್ಧಗೊಳಿಸುವುದು ಮತ್ತು ಕ್ರೋಡೀಕರಿಸಬಹುದಾಗಿದೆ! ನಾಯಕತ್ವವು ದೇವ ಜನರನ್ನು ಅತಿಯಾಗಿ ಪ್ರೋತ್ಸಾಹಿಸಲಾರದು. ನಾವು ನಮ್ಮ ಜನರಿಗೆ ಬೋಧಿಸಬೇಕು, ಅವರನ್ನು ಬಿಟ್ಟುಕೊಡಬೇಕು, ಮತ್ತು ದೇವರು ಅವರನ್ನು ಕೊಂಡೊಯ್ಯುವ ಸ್ಥಳದಲ್ಲೆಲ್ಲಾ ಅವರು ರೂಪಾಂತರಗೊಂಡ ಜೀವಿತದ ಸಾಕ್ಷಿಗಳಾಗುವಂತೆ ನಿರೀಕ್ಷಿಸಬೇಕು.

ಮೂರನೆಯದಾಗಿ, ನಾಯಕರಾಗಿ ಸಭೆಗಾಗಿ ಇರುವ ದೇವರ ಉದ್ದೇಶದ ಬಹು ಪ್ರಾಮುಖ್ಯವಾದ ಅಂಶಗಳಲ್ಲಿ ನಾವು ಹೇಗೆ ಮುಂದುವರಿಯುತ್ತಿದ್ದೇವೆ(ಮುನ್ನಡೆಯುತ್ತಿದ್ದೇವೆ) ಎಂಬುದನ್ನು ನಾವು ಮೌಲ್ಯಮಾಪನ ಮಾಡಿಕೊಳ್ಳಲೇಬೇಕು: ಅವು, ಕ್ರೈಸ್ತರನ್ನು ಸಬಲೀಕರಿಸುವುದು(ಬಲಪಡಿಸುವುದು), ಜನರ ಕ್ರೋಢೀಕರಣ ಮತ್ತು ಹೊಣೆಗಾರಿಕೆಯ ವಲಯದಲ್ಲಿನ ಸುವಾರ್ತೀಕರಣ. ಅವರು ಐದು ಆರಂಭಿಕ ಮೌಲ್ಯಗಳಲ್ಲಿ ಬೆಳೆಯುತ್ತಿರುವರೋ ಇಲ್ಲವೋ ಎಂಬುದನ್ನು ಗುರುತಿಸುವುದರ ಮೂಲಕ ದೇವ ಜನರನ್ನು ನಾವು ಅವರ ಕರೆಯಲ್ಲಿ ಬೆಳೆಸುತ್ತಿದ್ದೇವೆಯೋ ಎಂಬುದನ್ನು

ತಿಳಿದುಕೊಳ್ಳಬಹುದು: ದೇವರ ವಾಕ್ಯದಲ್ಲಿ ಆತನೊಂದಿಗೆ ಅನ್ಯೋನ್ಯತೆಯಲ್ಲಿ ಬೆಳೆಸುವುದು, ತಮ್ಮ ಜೀವಿತದಲ್ಲಿ ಬರುವ ಜನರೊಂದಿಗೆ ಸಾಕ್ಷಿಗಳನ್ನು ಹಂಚಿಕೊಳ್ಳುವುದು, ಅವರ ಆತ್ಮೀಕ ವರಗಳನ್ನು ವೃದ್ಧಿಪಡಿಸುವುದು, ದೇವರಾತ್ಮನ ಫಲಗಳಲ್ಲಿ ಬೆಳೆಯುವುದು ಮತ್ತು ಬೇರೆಯವರ ಸೇವೆಗಾಗಿ ಮತ್ತು ದೇವರಿಗೆ ಮಹಿಮೆಯನ್ನು ತರಲು ಅವರ ಜೀವಿತ ಮತ್ತು ಸೊತ್ತುಗಳನ್ನು ಮುಡಿಪಾಗಿಡುವುದು.

ನಾಲ್ಕನೆಯದಾಗಿ, ನಾಯಕತ್ವದಲ್ಲಿರುವವರು ವೈಯಕ್ತಿಕ ಆಕಾಂಕ್ಷೆಗಳನ್ನು ಬದಿಗಿಟ್ಟು ದೇವ ಜನರನ್ನು ಶಕ್ತರಾಗಿಸಲು ಮತ್ತು ಆತ್ಮೀಕವಾಗಿ ಅವರನ್ನು ಬಲಪಡಿಸಲು, ವೈವಿಧ್ಯತೆಯಲ್ಲೂ ಮತ್ತು ಏಕತೆಯಲ್ಲಿ ಒಟ್ಟಾಗಿ ಸೇರಿ ಕೆಲಸ ಮಾಡಲೇಬೇಕು. ಕ್ರಿಸ್ತನ ಸಭೆಯಲ್ಲಿನ ನಾಯಕತ್ವವು ಪರಸ್ಪರಾವಲಂಬನೆಗಾಗಿ ಕರೆಯಲ್ಪಟ್ಟಿದೆ, ಇದು ಲೋಕದಲ್ಲಿ ಪ್ರಚಲಿತದಲ್ಲಿರುವ ಮೇಲಣಿಂದ-ಕೆಳಗಿನ ಮಾದರಿಯಲ್ಲ

ಐದನೆಯದಾಗಿ, ಸಭೆಯು ಲಂಬವಾಗಿ ಬೆಳೆಯುವುದಕ್ಕಿಂತ ಪಾರ್ಶ್ವದಲ್ಲಿ ಬೆಳೆಯುವುದಕ್ಕೆ ಬದ್ಧವಾಗಿರಬೇಕು- ಅಂದರೆ, ಎತ್ತರವಾದ ಕಟ್ಟಡಗಳನ್ನು ಕಟ್ಟಿ ಜನರು ನಮ್ಮೆಡೆಗೆ ಆಕರ್ಷಿಸುವಂತೆ ಮಾಡುವುದರ ಬದಲು, ನಮ್ಮ ಸಮುದಾಯದುದ್ದಕ್ಕೂ ಇರುವ ಸ್ಥಳಗಳಿಗೆ ಬಾಹ್ಯವಾಗಿ ವಿಸ್ತರಿಸುವುದು. ಎರಡರಿಂದ ಮೂರು ಸಾವಿರಕ್ಕಿಂತ ಹೆಚ್ಚು ಜನರನ್ನು ನಾವು ಒಂದು ಸ್ಥಳದಲ್ಲಿ ಸೇರಿಸಬಾರದು. ಇಟ್ಟುಕೊಳ್ಳಬಾರದ್ದನ್ನು ನಾವು ಇಟ್ಟುಕೊಳ್ಳಬಾರದು. ಜನರು ಮಾಡಬಹುದಾದದ್ದನ್ನು ಮಾಡಲು ನಾವು ಸಿಬ್ಬಂದಿಗೆ ಪಾವತಿ ಮಾಡಬಾರದು. ಬದಲಾಗಿ ನಾವು ದೇವ ಜನರನ್ನು ಆರ್ಥಿಕವಾಗಿ ಸಂಪನ್ಮೂಲವುಳ್ಳ ಜನರನ್ನಾಗಿ ಮತ್ತು ಸುವಾರ್ತೆಯು ಸಾರಲ್ಪಡಬೇಕಾದ ಮತ್ತು ಹೊಸ ಸಭೆಯು ಬೆಳೆಯಬೇಕಾದ ಸ್ಥಳಗಳಾಗಿ ಸಿದ್ಧಪಡಿಸಬೇಕು. ನಮಗಿರುವುದೆಲ್ಲವೂ ದೇವರದ್ದಾಗಿದೆ. ನಮ್ಮ ಜೀವಿತಗಳನ್ನು ಮತ್ತು ಆತನು ನಮಗೆ ಕೊಟ್ಟಿರುವದೆಲ್ಲವನ್ನು ನೋಡಿಕೊಳ್ಳುವುದರ ಮೂಲಕ ನಾವು ಆತನನ್ನು ಪ್ರತಿನಿಧಿಸುವಂತೆ ತನ್ನೊಂದಿಗೆ ಸಂಬಂಧದಲ್ಲಿರುವುದಕ್ಕಾಗಿ ಆತನು ನಮ್ಮನ್ನು ಉಂಟುಮಾಡಿದನು.

ಪಾರ್ಶ್ವದಲ್ಲಿ ಬೆಳೆಯುವ ಪ್ರಯತ್ನದಲ್ಲಿ ಸಭೆಯು ಮಾಡಬಹುದಾದ ಒಂದು ಬಹು ಪ್ರಾಮುಖ್ಯವಾದ ಸಂಗತಿಯು ನಾಯಕರುಗಳನ್ನು ತರಬೇತಿಗೊಳಿಸುವುದಾಗಿದೆ. ಪಾವತಿ ಮಾಡುವ ಸಿಬ್ಬಂದಿಗಳನ್ನು ನಾನಿಲ್ಲಿ ಸೂಚಿಸುವುದಿಲ್ಲ ಅದು ಕಡಿಮೆಯಾಗಬೇಕು, ಬದಲಾಗಿ ಸೇವಾ ಪಾತ್ರಗಳಲ್ಲಿ ಸೇವೆ ಮಾಡುವ ಮನಸ್ಸುಳ್ಳ ತರಬೇತಿ ಹೊಂದಿದ ಸ್ವಯಂಸೇವಕರನ್ನು ಸೂಚಿಸುತ್ತೇನೆ. ಸಭಾ ಜೀವಿತದ ಪ್ರತಿ ಹಂತಗಳಲ್ಲಿ ಶುಶ್ರೂಷೆ ಮಾಡುವ ಸೇವೆಯಲ್ಲಿನ ನಾಯಕತ್ವದೊಂದಿಗೆ ಸೇರುವುದಕ್ಕಾಗಿ ಜನರನ್ನು ತರಬೇತಿಗೊಳಿಸುವುದು ವಿಕೇಂದ್ರೀಕೃತ ನಾಯಕತ್ವದ ಚಟುವಟಿಕೆಗಳ ಕಡೆಗಿನ ನಮ್ಮ ಪ್ರಯತ್ನದಲ್ಲಿ ನೆರವಾಗುವದು. ಸಂಭಾವ್ಯ/ಸಮರ್ಥವಾದ ನಾಯಕರುಗಳೊಂದಿಗೆ ಮುಖಾಮುಖಿಯಾಗಿ ಉತ್ತಮವಾದ ಸಮಯವನ್ನು ಕಳೆಯುವುದರ ಮೂಲಕ ನಾವಿದನ್ನು ಸಂಬಂಧಾತ್ಮಕವಾಗಿ ಮಾಡಬಹುದು. ಅಲ್ಲದೆ ನಾವು, ನಿಯಮಿತವಾಗಿ ಸೇರಿಬರುವ ಸಣ್ಣ ಮತ್ತು ದೊಡ್ಡ ಗುಂಪುಗಳನ್ನು ಮುನ್ನಡೆಸುತ್ತಾ ಮತ್ತು ಸಭೆಯ ಉದ್ದೇಶ,

ಮೌಲ್ಯಗಳು ಮತ್ತು ನಿರೀಕ್ಷಿತ ಪರಿಣಾಮಗಳ ಕುರಿತು ಬೋಧಿಸುತ್ತಾ ಸಾಂಸ್ಥಿಕವಾಗಿ ಹೊಸ ನಾಯಕರುಗಳನ್ನು ಸಹ ತರಬೇತಿಗೊಳಿಸಬಹುದು.

ಆರನೆಯದಾಗಿ, ಬೇರೆ ಸಭೆಗಳಿಂದ ನಾವು ಸ್ನೇಹಿತರನ್ನು ಮಾಡಿಕೊಳ್ಳಬೇಕು. ದೇವರ ಎಲ್ಲಾ ಸಭೆಗಳು ಒಂದೇ ಆಗಿವೆ, ಯಾಕೆಂದರೆ ನಾವು ಕ್ರಿಸ್ತನಲ್ಲಿದ್ದೇವೆ ಮತ್ತು ಆತನು ನಮ್ಮೆಲ್ಲರನ್ನು ಒಂದಾಗಿ ಮಾಡಿದ್ದಾನೆ. ಯೋಹಾನ 17:20-23 ಯೇಸು ಹೇಳುತ್ತಾನೆ,

"ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವುದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದಿ ಎಂದೂ ಲೋಕಕ್ಕೆ ತಿಳಿದುಬರುವದು".

ಕ್ರಿಸ್ತನಲ್ಲಿ ನಾವು ಒಂದಾಗಿರುವುದರಿಂದ, ನಾವು ಸುವಾರ್ತೆಗಾಗಿ ಪಾಲುದಾರಿಕೆಯ ಒಂದು ಐಕ್ಯತೆಗಾಗಿ ಕರೆಯಲ್ಪಟ್ಟಿದ್ದೇವೆ. ಹೀಗೆಂದರೆ, ದೇವರಾತ್ಮನು ನಮ್ಮನ್ನು ಕರೆಯುವ ನಿರ್ದಿಷ್ಟವಾದ ಯೋಜನೆಗಳಲ್ಲಿ ಸ್ಥಳೀಯ ಸಭೆಗಳೊಂದಿಗೆ ಒಟ್ಟಾಗಿ ಕೆಲಸ ಮಾಡುವುದಾಗಿದೆ, ಮತ್ತು ಆಳವಾಗಿ ಹೇಳಬೇಕೆಂದರೆ ಇನ್ನೂ ಅವರ ವೈಯಕ್ತಿಕ ಸಂಪೂರ್ಣತೆಯನ್ನಲ್ಲದೆ ತಮ್ಮ ಸ್ಥಳಗಳನ್ನು ಸಂಧಿಸುವ ಅವರ ವೈಯಕ್ತಿಕ ಜವಾಬ್ದಾರಿಗಳನ್ನೂ ಒಪ್ಪಿಕೊಳ್ಳುವ, ಸ್ಥಳೀಯ ಸಭೆಗಳನ್ನು ಸೆಳೆಯುವುದರಿಂದ

ಒಂದು ಸ್ಥಳವನ್ನು ಪೂರ್ಣವಾಗಿ ಸುವಾರ್ತೀಕರಿಸುವುದರ ಮೇಲೆ ಒಟ್ಟಾಗಿ ಗಮನಹರಿಸುವುದು ಎಂಬುದಾಗಿ ಸಹ ಅರ್ಥಕೊಡುತ್ತದೆ. ಒಂದು ಸಭೆಯಾಗಿ, ತಮ್ಮ ಸ್ಥಳಗಳಲ್ಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ, ಮತ್ತು ಮಗುವಿಗೆ ಸುವಾರ್ತೆಯು ಲಭ್ಯವಾಗುವಂತೆ ಮಾಡಲು ಸ್ಥಳೀಯ ಸಭೆ/ಸಮೂಹಗಳು ಮಾರ್ಗಗಳನ್ನು ಕಂಡುಕೊಳ್ಳಬಹುದು.

ಮತ್ತು ಏಳನೆಯದಾಗಿ, ನಮ್ಮ ಸ್ವಂತ ಸ್ಥಳದಿಂದ ಜಗತ್ತಿನಾದ್ಯಂತ ಇರುವ ಜನರು ಮತ್ತು ಸ್ಥಳಗಳಿಗೆ ನಮ್ಮ ಉದ್ದೇಶಗಳನ್ನು ದೂರದರ್ಶಿಸುತ್ತಾ

ನಾವು ಸಾಂಸ್ಕೃತಿಕ ಮೇರೆಗಳುದ್ದಕ್ಕೂ ಸಭೆಗಳೊಂದಿಗೆ ಪಾಲುದಾರರಾಗಬೇಕು. ನಾಯಕತ್ವದೊಂದಿಗೆ ನಾವು ಒಟ್ಟಾಗಿ ಸೇರಿ ಕೆಲಸ ಮಾಡುವಾಗ ಮತ್ತು ಪರಸ್ಪರ ಒಬ್ಬರಿಗೊಬ್ಬರು ಕಲಿಯುವಾಗ, ದೇವರ ಮಹಿಮೆ ಕಾಟಿ ಸುವಾರ್ತೆಯು ನಮ್ಮೆರಡು ಸ್ಥಳಗಳಲ್ಲಿ ವೃದ್ಧಿಯಾಗುತ್ತದೆ.

## ಶಾಶ್ವತವಾದ ಫಲಿತಾಂಶಗಳು/ಪರಿಣಾಮಗಳು

ನಮಗೆ ನವೀಕರಣದ ಅಗತ್ಯವಿದೆ! "ಪ್ರಯಾಣ/ಯಾತ್ರೆಯ" ಮೂಲಕ ಸಾಗುವ ನಿಮ್ಮ ನಡಿಗೆಯು ಇಂದಿನ ಕ್ರೈಸ್ತ ಜಗತ್ತಿನಲ್ಲಿ ಸಮೃದ್ಧವಾಗಿರುವ ಸುಲಭ ಉತ್ತರಗಳಿಗೆ ತದ್ವಿರುದ್ದವಾದ ಆಯ್ಕೆಗಳನ್ನು ಮಾಡಲು ನಿಮಗೆ ಸಹಾಯಕವಾಗಬಲ್ಲದೆಂಬುದು ನನ್ನ ನಿರೀಕ್ಷೆಯಾಗಿದೆ.

ಸಭೆಯಲ್ಲಿನ ಸುಧಾರಣೆಗೆ ಸಮಯ ಮತ್ತು ಪ್ರತಿಫಲನವು ಬೇಕಿದೆ. ಇದು ತಿದ್ದುಪಡಿಗೆ ನಡೆಸುತ್ತದೆ. ಪರಸ್ಪರ ಸಭೆಗಳ ಒಂದು ಭೌಗೋಳಿಕ ಸಂಬಂಧದಲ್ಲಿ ಇದು ಸಾಧ್ಯವಾಗಬಲ್ಲದು. ಪರಿಣಾಮ/ಫಲಿತಾಂಶಗಳೇನು? ಪ್ರತಿ ವಿಷಯಗಳಲ್ಲಿ ಅವು ಇಟ್ಟುಕೊಳ್ಳುವುದಕ್ಕಿಂತ ಹೆಚ್ಚಾಗಿ ಬಿಟ್ಟುಕೊಡುವ ರೀತಿಯಲ್ಲಿ ನಾವು ಸಭೆಗಳನ್ನು ಸ್ಥಾಪಿಸುತ್ತೇವೆ. ಅಂತಿಮವಾಗಿ, ತಮ್ಮ ಪರಿಣಾಮಕಾರಿತ್ವವನ್ನು ಸಭೆಯ ವಿನ್ಯಾಸ/ರಚನೆಯಿಂದ ಅಳೆಯದೆ, ಜನರು ತಮ್ಮ ನಂಬಿಕೆಯೊಂದಿಗೆ ಏನನ್ನು ಮಾಡುತ್ತಾರೆಂಬುದರಿಂದ ಅಳೆಯುವ ಸಭೆಗಳಿಗೆ ಜನ್ಮಕೊಡುತ್ತದೆ.

# ಅನುಬಂಧ A

# ಅಧ್ಯಾಯದಿಂದ ನವೀಕರಣದ ಪ್ರಶ್ನೆಗಳು

"ಯಾತ್ರೆ: ಸಂಪೂರ್ಣ ಸಭಾ ಸ್ಥಾಪನೆ" ಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು  ನಿಮ್ಮ ನಾಯಕತ್ವ ತಂಡದ ಪ್ರತಿ ಸದಸ್ಯನೂ ಕೂಡ "ನವೀಕರಣ": ಡ್ವೈಟ್ ಸ್ಮಿತ್ ರವರ "ಸಭಾ ಜೀವಿತದಲ್ಲಿನ ದೈವಿಕ ವಿನ್ಯಾಸ ಮೇಲೆ ಒಂದು ಸಮೀಕ್ಷೆ"ಯನ್ನು ಓದಿರಬೇಕು. ನೀವು ಒಟ್ಟಾಗಿ ಪ್ರಯಾಣ/ಯಾತ್ರೆಯ ಮೂಲಕ ಕಾರ್ಯ ಮಾಡುವಾಗ ಕೆಳಕಂಡ ಪ್ರಶ್ನೆಗಳು ಚರ್ಚಿಸಲ್ಪಡುಬೇಕೆಂದು ಖಚಿತಪಡಿಸಲು ಗುಂಪಿನ ಎಲ್ಲಾ ಸ್ಪರ್ಧಿಗಳೊಂದಿಗೆ ಸಭೆಯ ನಾಯಕನು ಯೋಜನೆ ಮಾಡಬೇಕು.

## ಅಧ್ಯಾಯ 1: ನಾವು ನಮ್ಮ ದೇಶದ ಇತಿಹಾಸವನ್ನು ಬರೆಯುತ್ತಿದ್ದೇವೆ

1. ನಿಮ್ಮ ದೇಶಕ್ಕಾಗಿ ದೇವರು ಬಯಸುವುದೇನು?

2. ನಿಮ್ಮ ದೇಶಕ್ಕಾಗಿ ದೇವರು ಬಯಸುವುದನ್ನು ನೆರವೇರಿಸುವುದಕ್ಕೆ ಎದುರಾಗುವ ಕೆಲವು ಸವಾಲುಗಳಾವುವು?

3. ಸುವಾರ್ತೆಯು ಇಡೀ ಜಗತ್ತಿಗೆಲ್ಲ ಕೊಂಡೊಯ್ಯಲ್ಪಡುವದು ಇನ್ನು ದೇವರ ಉದ್ದೇಶವಾಗಿದೆ ಎಂಬುದನ್ನು ನೀವು ಅರಿತುಕೊಂಡು ಅದನ್ನು ಒಪ್ಪುವಿರೋ?

4. ನಿಮ್ಮ ಹಳ್ಳಿ ನಗರ ಅಥವಾ ಪಟ್ಟಣಗಳಲ್ಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ, ಮತ್ತು ಮಗುವಿಗೆ ಸುವಾರ್ತೆಯನ್ನು ತಿಳಿದುಕೊಳ್ಳಲು ಮತ್ತು ಎಲ್ಲಿಯೂ ಹುಡುಕುತ್ತಾ ಹೋಗದೆ ಕ್ರಿಸ್ತನಲ್ಲಿ ದೇವರೊಂದಿಗೆ ಸಂಧಾನಗೊಳ್ಳುವುದಕ್ಕೆ ನಿಮ್ಮ

ಸಭೆಯು ಅವರಿಗೆ ಪದೇ ಪದೇ ಅವಕಾಶವನ್ನು ಕೊಟ್ಟರೆ ದೇವರು ಏನನ್ನು ಮಾಡಬಹುದೆಂಬುದನ್ನು ಊಹಿಸಿರಿ. ನಿಮ್ಮ ಜೀವಿತ ಕಾಲದಲ್ಲಿ ಇದೊಂದು ವಾಸ್ತವಾಂಶವಾಗಬಲ್ಲದೆಂಬುದನ್ನು ನೀವು ನಂಬುವಿರಾ?

## ಅಧ್ಯಾಯ 2: ಸಭೆಯ ಉದ್ದೇಶವೇನು?

1. ಭಾನುವಾರದ ಮುಂಜಾನೆಯ ಕಾರ್ಯಕ್ರಮಕ್ಕೆ ನಿಮ್ಮ ಸಭಾ ನಾಯಕತ್ವದ ಶೇಕಡಾ ಎಷ್ಟು ಸಮಯ ಮತ್ತು ಪ್ರಯತ್ನವನ್ನು ಹಾಕಲಾಗುತ್ತದೆ?

2. ನಿಮ್ಮ ಸಭೆಯಲ್ಲಿನ ಶೇಕಡಾ ನೂರರಷ್ಟು ಜನರು ಭಾನುವಾರದ ಮುಂಜಾನೆಯ ಹೊರತಾಗಿ ತಮ್ಮ ನಂಬಿಕೆಯೊಂದಿಗೆ ಏನೋ ಮಾಡುತ್ತಿರುವುದನ್ನು ನೋಡುವುದು ನಿಮಗೆ ಹೇಗೆ ಕಾಣಿಸಬಲ್ಲದೆಂಬುದನ್ನು ಚರ್ಚಿಸಿರಿ.

3. ಒಂದು ವೇಳೆ "ಸಭೆಯ ಉದ್ದೇಶ ಏನಾಗಿದೆ? ಎಂಬುದಾಗಿ ಅವರಿಗೆ ಕೇಳಿದರೆ, ನಿಮ್ಮ ಸಭೆಯ ಸದಸ್ಯರುಗಳು ಏನೆಂದು ಹೇಳಬಹುದು? ಇದೇ ಸಮಯಕ್ಕೆ ನಿಮ್ಮ ನಾಯಕರ/ನಾಯಕತ್ವದ ತಂಡವು ಏಕೆ ಉತ್ತರಿಸಬಲ್ಲದು?

## ಅಧ್ಯಾಯ 3: ತನ್ನ ಯಶಸ್ಸನ್ನು ಸಭೆಯು ಹೇಗೆ ಅಳೆಯಬೇಕು?

1. ಪ್ರಸ್ತುತ ನಿಮ್ಮ ಸಭೆಯಲ್ಲಿ ಕಾರ್ಯ ಮಾಡುತ್ತಿರುವ ಹೇಳದಿರುವ ಆದರೆ ಅಂಗೀಕೃತ ಮೌಲ್ಯ ವ್ಯವಸ್ಥೆಯ ಬಗ್ಗೆ ನಿಮ್ಮ ಸಭೆಯಲ್ಲಿನ ದೇವ ಜನರ ನಡುವಳಿಕೆಯು ತಿಳಿಸುತ್ತದೆ? (ಉದಾಹರಣೆಗೆ, ನಿಮ್ಮ ಸಭೆಯೂ ಯಾವುದಕ್ಕೆ ಪ್ರಾಮುಖ್ಯತೆ ಕೊಡುತ್ತದೆ ಎಂಬುದಾಗಿ ಜನರಿಗೆ ಕೇಳಿದರೆ ಅವರು ಏನೆಂದು ಉತ್ತರಿಸಬಹುದು?)

2. ಈ ಅಧ್ಯಾಯದಲ್ಲಿ ತಿಳಿಸಲಾದ 5 ಮೌಲ್ಯಗಳು  ಯೇಸುಕ್ರಿಸ್ತನ ಶಿಷ್ಯರುಗಳಲ್ಲಿ ಬೆಳೆಯುವುದಕ್ಕೆ ಕಡ್ಡಾಯವಾಗಿರುವ ಹೊಸ್ತಿಲುಗಳಾಗಿವೆ ಎಂದು ನೀವು ವಿವರಿಸುವುದರೊಂದಿಗೆ ಸ್ಥಿರವಾಗಿವೆಯೋ? ಇಲ್ಲವಾದರೆ ಯಾಕೆ?

3. ನಿಮ್ಮ ಸಭೆಯ ಶೇಕಡಾ ಎಷ್ಟು ಭಾಗವು ಪ್ರತಿದಿನ ದೇವರ ವಾಕ್ಯದಲ್ಲಿ ನಿರತವಾಗುತ್ತದೆ? ನಿಮ್ಮ ನಾಯಕತ್ವದ ಭಾಗವೇನು? ನಿಮ್ಮ ಉತ್ತರಗಳು ಏನನ್ನು ಸೂಚಿಸುತ್ತವೆ?

## ಅಧ್ಯಾಯ 4: ನಮ್ಮ ಜೀವಿತಗಳನ್ನು ನೋಡಿಕೊಳ್ಳುವುದು

1. ನಿಮ್ಮ ಸಭೆಯ ಶೇಕಡಾ ಎಷ್ಟು ಸದಸ್ಯರುಗಳು ಭಾನುವಾರದ ಮುಂಜಾನೆಯನ್ನು ಬಿಟ್ಟು(ಹೊರತುಪಡಿಸಿ) ದೇವರ ರಾಜ್ಯಕ್ಕಾಗಿನ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ?

2. ನಿಮ್ಮ ಸಭೆಯಲ್ಲಿನ ಜನರ ಸಮಯ, ವರಗಳು, ಸಾಮರ್ಥ್ಯಗಳು ಮತ್ತು ವೈಯಕ್ತಿಕ ಸಂಪನ್ಮೂಲಗಳು, ಹೇಗೆ ಅವರ ನೆರೆಹೊರೆಯವರು, ಕುಟುಂಬ, ಸ್ನೇಹಿತರು ಮತ್ತು ಸಹೋದ್ಯೋಗಿಗಳ ಜೀವಿತಗಳಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ವಿಮರ್ಶಿಸಿರಿ. ನಿಮ್ಮ ಸಭೆಯ ಹೊಣೆಗಾರಿಕೆಯ ವಲಯದಲ್ಲಿರುವ ಜನರಿಗಾಗಿ ಅವರಿಗೆ ಸಮಯವಿದೆಯೋ? ಅಥವಾ ಅವರು ಸಭಾ ಕಾರ್ಯಕ್ರಮಗಳಲ್ಲಿ ಕಾರ್ಯನಿರತರಾಗಿದ್ದಾರೋ?

3. ನಿಮ್ಮ ಸಭೆಯಲ್ಲಿನ ಜನರು ಸಭೆಯ ಕಾರ್ಯಕ್ರಮಕ್ಕೆ ಮೊದಲು ದಶಮಾಂಶ ಕೊಡುವ ನಿಲುವನ್ನು ಹೊಂದಿದ್ದಾರೋ ಅಥವಾ ತಮ್ಮ ಸುತ್ತಲಿನ ಜನರ ಅಗತ್ಯತೆಗಳಿಗೆ ಕೊಡುವ ನಿಲುವು ಹೊಂದಿರುವರೋ? ಎರಡೂ ರೀತಿಯ ಕೊಡುವಿಕೆಗಳ ನಡುವಿನ ವ್ಯತ್ಯಾಸವನ್ನು ಚರ್ಚಿಸಿರಿ.

4. ಸಭೆಯ ನಾಯಕತ್ವ, ಹಣಕಾಸು, ಆಸ್ತಿ ಮತ್ತು ಸಂಪನ್ಮೂಲಗಳ ಶೇಕಡಾ ಎಷ್ಟು ಭಾಗವನ್ನು ನಿಮ್ಮ ಸಭೆಯು ಬಿಟ್ಟುಕೊಡುತ್ತದೆ?

## ಅಧ್ಯಾಯ 5: ಯೇಸುವು ತನ್ನ ಸಭೆಗೆ ನಾಯಕತ್ವವನ್ನು ಕೊಟ್ಟಿದ್ದಾನೆ

1. ನಿಮ್ಮ ಸಭೆಯು ಒಬ್ಬನೇ ನಾಯಕನ ಮೇಲೆ ಅವಲಂಬಿತವಾಗಿದೆಯೋ? ಚರ್ಚಿಸಿರಿ.

2. ಅವರು ನಾಯಕರುಗಳಲ್ಲದಿದ್ದರೂ ನಿಮ್ಮ ಸಭೆಯೊಳಗಿನ ಜನರಲ್ಲಿ ನಿರ್ವಹಿಸಲ್ಪಡುತ್ತಿರುವ ಪ್ರತಿ 5 ಕಾರ್ಯಗಳ ಉದಾಹರಣೆ ಕೊಡಿರಿ.

3. ವಿಧವಿಧವಾದ ವರಗಳ ನಿಮಿತ್ತ ನಿಮ್ಮ ನಾಯಕತ್ವ ತಂಡದ ಸದಸ್ಯರುಗಳ ನಡುವೆ ಯಾವುದೇ ಗೊಂದಲವಿದೆಯೋ?

4. ನಿಮ್ಮ ಸಭೆಯ ನಾಯಕತ್ವ ತಂಡದಿಂದ ಯಾವ  ವರಗಳು ಪ್ರಸ್ತು ಅತಿಯಾಗಿ ನಿರೂಪಿಸಲ್ಪಟ್ಟಿವೆ ಅಥವಾ ಪ್ರಸ್ತುತವಾಗಿ ಕಾಣೆಯಾಗಿವೆ ?

5. ನಿಮ್ಮ ಸಭೆಯ ನಾಯಕತ್ವವು ಜನರನ್ನು ಸಬಲೀಕರಿಸುವುದು ಅಥವಾ ಬಲಪಡಿಸುವುದರಲ್ಲಿ ಹೆಚ್ಚಿನ ಸಮಯವನ್ನು ಕಳೆದರೆ ಆಗುವ ಕೆಲವು ಪ್ರಾಯೋಗಿಕ ಪರಿಣಾಮಗಳೇನು?

## ಅಧ್ಯಾಯ 6: ಸಭಾ ನಾಯಕತ್ವದಲ್ಲಿನ ಪರಸ್ಪರಾವಲಂಬನೆ

1. ಪರಸ್ಪರಾವಲಂಬನೆಯು ಹೇಗೆ ನಾಯಕತ್ವವು ಭ್ರಷ್ಟವಾಗದಂತೆ ಕಾಯುತ್ತದೆ?

2. ಯಾಕೆ ಪರಸ್ಪರಾವಲಂಬನೆಯು ಸರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಸೇವೆಯ ಮೇಲೆ ಗಮನಹರಿಸುವುದರ ಪರಿಣಾಮವು ಪ್ರಾಮುಖ್ಯವಾಗಿದೆ?

3. ಒಂದು ಪಟ್ಟಣದೊಳಗಣ ಸಭೆಗಳ ನಡುವಿನ ಪರಸ್ಪರಾವಲಂಬನೆಯು ಹೇಗೆ ತೋರುತ್ತದೆ?

## ಅಧ್ಯಾಯ 7: ಅಮೇರಿಕದ ಸಭೆಯ ಈಗಿನ ಸ್ಥಿತಿಯೇನು?

1. ನವೀಕರಣವನ್ನು ಓದಿದ ನಂತರ ನಿಮ್ಮ ಸಭೆಗಾಗಿ ನೀವು ಕಾಣುವ ಬಹುದೊಡ್ಡ ಸವಾಲು ಯಾವುದು?

2. ನಿಮ್ಮ ನೀವು ಮುಂದಾಗಿ ಕಾಣುವ ಬಹುದೊಡ್ಡ ಅವಕಾಶ ಯಾವುದು?

3. ಯಾವ ಸಭಾ ಆಸ್ತಿಯನ್ನು ನೀವು ನಿಮ್ಮ ಮಕ್ಕಳಿಗೆ ಬಿಟ್ಟುಹೋಗಲು ಬಯಸುವಿರಿ?

## ಅನುಬಂಧ 2: ಜಗತ್ತಿನಲ್ಲಿ ಬೇರೆಡೆ ನಮ್ಮ ಉದ್ದೇಶವನ್ನು ದೂರದರ್ಶಿಸುವುದು

1. ಸೇವಾ(ಸುವಾರ್ತಾ)ಕಾರ್ಯಗಳು ಸ್ಥಳೀಯ ಸಭೆ ಅಥವಾ ಅರೆ-ಸಭಾ ಸೇವೆಗಳ ಜವಾಬ್ದಾರಿಯಾಗಿದೆಯೋ? ನಿಮ್ಮ ಸಭೆಯ ಚಟುವಟಿಕೆಗಳು ನಿಮ್ಮ ಉತ್ತರಗಳನ್ನು ಬೆಂಬಲಿಸುತ್ತದೆಯೋ? ಇಲ್ಲವಾದರೆ, ಯಾಕೆ?

2. ನಿಮ್ಮ ಸಭೆಯ ದರ್ಶನಾ ಹೇಳಿಕೆಯು, ಜಗತ್ತಿನ ಬೇರೆಡೆಯಲ್ಲಿನ ಹೂಡಿಕೆಗಾಗಿ ಸ್ಪಷ್ಟವಾದ ಗುರಿ, ಯೋಜನೆ, ಮತ್ತು ಕಾಲಮಿತಿಯುಳ್ಳ ಗುರಿಗಳನ್ನು ಪ್ರತಿಬಿಂಬಿಸುತ್ತಿವೆಯೋ?

3. ಪ್ರಸ್ತುತ ಜಗತ್ತಿನೆಲ್ಲೆಡೆ ನಿಮ್ಮ ಸಭೆಯು ಭಾಗಿಯಾಗಿರುವುದರ ಅಂಶಗಳನ್ನು ಪಟ್ಟಿ ಮಾಡಿರಿ. ಈ ಸ್ಥಳಗಳಲ್ಲಿನ ಸ್ಥಳೀಯ ನಾಯಕರು(ನಾಯಕತ್ವವು) ಪ್ರತಿ ಪುರುಷ, ಸ್ತ್ರೀ ಮತ್ತು ಮಗುವನ್ನು ತಲುಪುವುದಕ್ಕೆ ಅನುಕೂಲವಾಗುವಂತೆ ನಿಮ್ಮ ಸಭೆಯು ಒಂದು ಕಾರ್ಯತಂತ್ರವನ್ನು ಹೊಂದಿದೆಯೋ?

4. ನಿಮ್ಮ ಸಭೆಯ ಬಜೆಟ್, ನಾಯಕತ್ವ ಮತ್ತು ಸಂಪನ್ಮೂಲಗಳ ಶೇಕಡಾ ಎಷ್ಟು ಭಾಗವು ಜಗತ್ತಿಗೆ ಹಂಚಿಕೆಯಾಗಿದೆ?

## ಅನುಬಂಧ B

# ಅಧ್ಯಾಯದಿಂದ ತುದಿ/ಕೊನೆಯಲ್ಲಿ ಏಕಾಂಗಿಯಾಗಿರುವುದು

ಎಂಬ ನಾಯಕತ್ವ ತಂಡದ ಪ್ರತಿಯೊಬ್ಬ ಸದಸ್ಯನೂ "ಪ್ರಯಾಣ": "ಸಂಪೂರ್ಣ ಸಭಾ ಸ್ಥಾಪನೆ"ಯ ನಾಲ್ಕನೇ ಅಧ್ಯಾಯದ ಸಂಯೋಗದೊಂದಿಗೆ ಡ್ವೈಟ್ ಸ್ಮಿತ್ ರವರ "ತುದಿಯಲ್ಲಿ ಏಕಾಂಗಿಯಾಗಿರುವುದು: ಒಬ್ಬ ಸಭಾಪಾಲಕನ ಕುರಿತ ನಮ್ಮ ವಿಚಾರವು ಸತ್ಯವೇದಕ್ಕಸಾರವಾಗಿದೆಯೋ" ಎಂಬ ಬರಹವನ್ನು ಓದಬೇಕು. "ಪ್ರಯಾಣದ" ನಾಲ್ಕನೇ ಅಧ್ಯಾಯದ ಮೂಲಕ ಒಟ್ಟಾಗಿ ಕಾರ್ಯಮಾಡುವಾಗ ಕೆಳಕಂಡ ಪ್ರಶ್ನೆಗಳು ಚರ್ಚಿಸಲ್ಪಡಬೇಕೆಂಬುದನ್ನು ಖಚಿತಪಡಿಪಡಿಕೊಳ್ಳಲು ಸಭಾನಾಯಕನು ಗುಂಪಿನ ಎಲ್ಲಾ ಪಾಲುದಾರರೊಂದಿಗೆ ಯೋಜನೆ ಮಾಡಬೇಕು.

### ಅಧ್ಯಾಯ 1: ಬದಲಾವಣೆಗಾಗಿ ಒಂದು ದಿನ!

1. ನೀವು ಮುನ್ನಡೆಸುವ ಸಭೆ(ಸಮೂಹ)ಯನ್ನು ಅದು ತನ್ನ ಪ್ರಸ್ತುತ ರೂಪದಲ್ಲಿ ಅನಂತವಾಗಿ ಪುನರುತ್ಪಾದಕವಾಗಿದೆ ಎಂಬುದಾಗಿ ನೀವು ವಾಖ್ಯಾನಿಸುವಿರೋ? ಇಲ್ಲವಾದರೆ, ಯಾಕೆ?

2. ಅನಂತ(ಅಪರಿಮಿತವಾಗಿ) ಪುನರುತ್ಪಾದಿಸುವ ಒಂದು ಸಭೆಯಾಗುವುದರಲ್ಲಿನ ಪ್ರಯತ್ನದಲ್ಲಿ ನಿಮ್ಮ ಸಭೆಯು ಎದುರಿಸುವ ಸವಾಲುಗಳೇನು?

3. ಸಭೆಯ ಪುನರುತ್ಪಾದಿಸುವ ಸಾಮರ್ಥ್ಯವು ನಾಯಕರಿಗೆ ಸಂಬಂಧಿಸಿದೆಯೋ? ಇಲ್ಲವಾದರೆ, ಯಾಕೆ?

## ಅಧ್ಯಾಯ 2: ತುದಿಯಲ್ಲಿ ಏಕಾಂಗಿಯಾಗಿರುವುದು

1. ನಿಮ್ಮ ಸಭೆಯಲ್ಲಿನ ನಾಯಕತ್ವವು ಹೇಗೆ ವೈವಿಧ್ಯಮಯವಾಗಿದೆ ಮತ್ತು ಜವಾಬ್ದಾರಿ ಮತ್ತು ಅಧಿಕಾರದ ನೊಗವನ್ನು ಬೇರೆ ಬೇರೆ ರೀತಿಯ ನಾಯಕರುಗಳು ಹೇಗೆ ಹಂಚಿಕೊಳ್ಳುತ್ತಾರೆ? ನಿಮ್ಮ ಸಭೆಯು ವೈವಿಧ್ಯಮಯವಾಗಿ ನಡೆಸಲ್ಪಡುತ್ತದೆಯೋ ಎಂಬುದಾಗಿ ಕೇಳಿದರೆ ನಿಮ್ಮ ಸಮೂಹದಲ್ಲಿನ ಜನರು ಏನೆಂದು ಹೇಳುವರು?

2. ನಿಮ್ಮ ನಾಯಕತ್ವದ ತಂಡದಲ್ಲಿಯಾರಾದರೂ ದರ್ಶನ ಕಾಣುವ ವರವನ್ನು ಹೊಂದಿದವರಿದ್ದಾರೋ, ಅಥವಾ ಸಮಾನವಾಗಿರುವುದರ ನಡುವೆ ಮೊದಲನೆಯವರೆಂಬುದಾಗಿ ಕರೆಯುವವರಿದ್ದಾರೋ?

3. ನಿಮ್ಮ ಸಭೆಯಲ್ಲಿ ನಾಯಕತ್ವ ತಂಡದಲ್ಲಿರುವವರು ಸೇವೆಯ ಕೆಲಸವನ್ನು ಮಾಡುವುದಕ್ಕೆ ದೇವ ಜನರಿಗೆ ಹೇಗೆ ಅನುಕೂಲ ಮಾಡಿಕೊಡುತ್ತಾರೆ? ಬೇರೆ ಮಾತಿನಲ್ಲಿ ಹೇಳುವುದಾದರೆ, ತಾವಾಗಿಯೇ ಮಾಡುವುದರ ಬದಲು ಬೇರೆಯವರ ಮೂಲಕ ಕಾರ್ಯವು ಆಗುವಂತೆ ಅವರು ಹೇಗೆ ಬಿಡುವರು?

## ಅಧ್ಯಾಯ 3: ಸಭಾ ನಾಯಕತ್ವದ ಮೂಲ ಮತ್ತು ಉದ್ದೇಶ

1. ಹೆಚ್ಚಾಗಿ ಒಬ್ಬ ವ್ಯಕ್ತಿಯ ನಾಯಕತ್ವವು ನೀವು ಭಾಗಿಯಾಗಿರುವ ಅಥವಾ ಮುನ್ನಡೆಸಿರುವ ಸಭೆಗಳಿಗೆ ಹೇಗೆ ಹಾನಿಕರವಾಗಿದೆ?

2. ನಿಮ್ಮ ಸಭೆಯಲ್ಲಿ(ಸಮೂಹ) ನಾಯಕತ್ವದ ಯಾವ ಕಾರ್ಯಗಳು ಪ್ರಧಾನವಾಗಿವೆ (ಎಫೆಸದವರಿಗೆ 4:11ನ್ನು ನೋಡಿರಿ)? ಈ ಕಾರ್ಯಗಳನ್ನು ಹೊಂದಿದ ನಾಯಕರುಗಳ ಬಲ/ಸಾಮರ್ಥ್ಯಗಳೇನು? ಬಲಹೀನತೆಗಳೇನು?

## ಅಧ್ಯಾಯ 4: ತನ್ನ ಸಭೆಗೆ ಯೇಸುವಿನ ವರ(ಕೊಡುಗೆ): ನಾಯಕತ್ವದ 5 ಕಾರ್ಯಗಳು

1. ಎಫೆಸದವರಿಗೆ 4:11ರ ಆಧಾರದ ಮೇಲೆ, ನಿಮ್ಮ ಸಭಾ ನಾಯಕತ್ವದ ತಂಡದ ಮೇಲೆ ಯಾವ ಕಾರ್ಯಗಳು ಕೊಡಲ್ಪಟ್ಟಿವೆ? ಯಾವ ಕಾರ್ಯಗಳು ಕಾಣೆಯಾಗಿವೆ?

2. ನಮ್ಮ ಜನರಿಗೆ ಕೊಡಲ್ಪಟ್ಟ ಕಾರ್ಯಗಳು ಸಭೆಗೆ ಯಾವ ಬಲವನ್ನು ಕೊಡುತ್ತವೆ? ಕಾಣೆಯಾಗಿರುವ ಕೆಲವು ಕಾರ್ಯಗಳು ಸಭೆಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ?

3. ಸ್ಥಳೀಯ ಸಮೂಹ ಅಥವಾ ಸಭೆಯಲ್ಲಿ ಎಲ್ಲಾ ಐದು ಕಾರ್ಯಗಳನ್ನು ಹೊಂದಿರುವುದರ ಲಾಭ ಮತ್ತು ಕುಂದುಕೊರತೆಗಳೇನು?

## ಅಧ್ಯಾಯ 5: ಕ್ರಿಸ್ತನ ದೇಹದ ಸ್ವಭಾವಕ್ಕೆ ಅನುರೂಪಗೊಳಿಸುವುದು

1. ನಿಮ್ಮ ಪ್ರಸ್ತುತ ನಾಯಕತ್ವ ತಂಡದಲ್ಲಿ ಎಷ್ಟು ಜನರಿಗೆ ತಮ್ಮ ಆತ್ಮೀಕ ವರಗಳ ಕುರಿತು ತಿಳಿದಿದೆ?

2. ನಿಮ್ಮ ನಾಯಕತ್ವ ತಂಡದ ಪ್ರತಿಯೊಬ್ಬ ಸದಸ್ಯರ ವಿವರಗಳನ್ನು ಮೌಲ್ಯಮಾಪನ ಮಾಡಿರಿ.

3. ನಿಮ್ಮ ತಂಡದ ಸದಸ್ಯರುಗಳು ತಮ್ಮ ವರಗಳಿಗೆ ಸೂಕ್ತವಾದ ಸಾಮರ್ಥ್ಯಗಳಲ್ಲಿ ಕಾರ್ಯನಿರ್ವಹಿಸುತ್ತವೆಯೋ? ಅಥವಾ ದೇವರು ಕೊಟ್ಟ ಸಾಮರ್ಥ್ಯದ ಕೊರತೆಗಾಗಿ  ಸ್ಥಾನಗಳನ್ನು ಹಿಡಿದಿಟ್ಟುಕೊಳ್ಳಲು  ಅವರು ಕೇಳುವರೋ?

## ಅಧ್ಯಾಯ 6: ದೇವರಾತ್ಮನಿಂದ ಕೊಡಲ್ಪಟ್ಟ ನಾಲ್ಕು ನಾಯಕತ್ವದ ವರಗಳು

1. ನಾಯಕತ್ವದೊಂದಿಗೆ ಸಂಬಂಧಿಸಿದ ನಾಲ್ಕು ವರಗಳಲ್ಲಿ, ನಿಮ್ಮ ಸಭಾ ನಾಯಕತ್ವದ ತಂಡಕ್ಕೆ ಯಾವುವನ್ನು ಕೊಡಲಾಗಿದೆ? ಯಾವ ವರಗಳು ಕಾಣೆ/ಮರೆಯಾಗಿವೆ?

2. ನಾಯಕತ್ವದ ಯಾವ ಹಂತದಲ್ಲಿ(ನಿಮ್ಮ ಸ್ವಂತ ಸಭೆಯಲ್ಲಿ, ಬೇರೆ ಸಭೆಗಳ ನಡುವೆ, ನಿಮ್ಮ ಪ್ರಾಂತ್ಯದುದ್ದಕ್ಕೂ) ಐದು ಕಾರ್ಯಗಳು ಮತ್ತು ನಾಲ್ಕು ವರಗಳು ಅವಶ್ಯಕವಾಗಿವೆ?

3. ಈ ಅಧ್ಯಾಯದಲ್ಲಿ ಚರ್ಚಿಸಲಾದ ಐದು ಕಾರ್ಯಗಳು ಮತ್ತು ನಾಲ್ಕು ವರಗಳಲ್ಲಿ ಕೆಲವನ್ನು ನಿಮ್ಮ ಸಭೆಯ ನಾಯಕತ್ವದಲ್ಲಿ ಗುರುತಿಸಲಾಗದು, ನಿಮ್ಮ ಸಭೆಗೆ ದೇವರು ಕೊಟ್ಟಂತಹ ಆ ನಾಯಕತ್ವದ ಬಗ್ಗೆ ಅದು ಏನನ್ನು ಹೇಳುತ್ತದೆ?

4. ನಿಮ್ಮ ಪಟ್ಟಣ ಅಥವಾ ಪ್ರಾಂತ್ಯದಲ್ಲಿನ ವಿಶಾಲವಾದ ಸಭೆಯಲ್ಲಿ ದೇವರು ಯಾವ ನಾಯಕತ್ವ ವರವನ್ನು ಕೊಟ್ಟಿರುವನೆಂಬುದಾಗಿ ನೀವು ಪರಿಗಣಿಸಿರುವಿರೋ?

## ಅಧ್ಯಾಯ 7: ಯೇಸುವಿನ ರೀತಿಯ ನಾಯಕತ್ವ

1. ಯೇಸುಕ್ರಿಸ್ತನ ಯಜಮಾನಿಕೆಗೆ ಒಪ್ಪಿಸಿ ಕೊಟ್ಟಿರುವ ಒಂದು ನಾಯಕತ್ವ ವ್ಯವಸ್ಥೆಯು, ವ್ಯವಹಾರ, ರಾಜಕೀಯ ಮತ್ತು ನಾವಿರುವ ಲೋಕದಲ್ಲಿ ಪ್ರಚಲಿತದಲ್ಲಿರುವ ಮೇಲಣಿಂದ-ಕೆಳಗಿನ ಮಾದರಿಗಿಂತ ವಿಭಿನ್ನವಾಗಿದೆ?

2. ನೀವು ಭಾಗಿಯಾಗಿರುವ ಸಭೆಯ ನಾಯಕತ್ವದ ಮಾದರಿಯು ಹೆಚ್ಚಾಗಿ ಒಂದು ಪಿರಮಿಡ್ ರೀತಿಯಲ್ಲಿದೆಯೋ ಅಥವಾ ಹೆಚ್ಚು ಸಪಾಟಾಗಿದೆಯೋ?

## ಅಧ್ಯಾಯ 8: ಪರಸ್ಪರಾವಲಂಬಿತ ನಾಯಕತ್ವ

1. ವೈವಿಧ್ಯತೆಯಲ್ಲಿ ಏಕತೆಯನ್ನು ಬೆಳೆಸುವುದಕ್ಕೆ ಇರುವ ಕೆಲವು ಸವಾಲುಗಳಾವುವು?

2. ನಾಯಕತ್ವದ ಪಾತ್ರವನ್ನು ಮತ್ತು ನಿಮ್ಮ ನಿರ್ದಿಷ್ಟವಾದ ಹಿನ್ನೆಲೆಯೊಳಗೆ ಮಾಡಲ್ಪಟ್ಟ ಆ ನಾಯಕತ್ವವನ್ನು ವಿವರಿಸಿರಿ ಮತ್ತು ಚರ್ಚಿಸಿರಿ.

## ಅಧ್ಯಾಯ 9: ಸಮಾನರ ನಡುವೆ ಮೊದಲನೆಯವರು

1. ದರ್ಶನವಿರುವ ಪುರುಷರ  ಅಥವಾ ನಾವು "ಸಮಾನರ ನಡುವೆ ಮೊದಲನೆಯವರೆಂಬುದಾಗಿ" ಕರೆಯುವವರ ಹನ್ನೆರಡು ಗುಣಲಕ್ಷಣಗಳೇನು? ನಿಮ್ಮ ಸಭಾ ನಾಯಕತ್ವದಲ್ಲಿ ಈ ಗುಣಲಕ್ಷಣಗಳನ್ನು ಹೊಂದಿರುವ ಒಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಜನರನ್ನು ನೀವು ಗುರುತಿಸಬಲ್ಲಿರಾ?

2. ನಿಮ್ಮ ನಾಯಕತ್ವದ ತಂಡವು ದರ್ಶನವುಳ್ಳ ಜನರೊಂದಿಗೆ ಒಂದು ಪ್ರಗತಿಯಲ್ಲಿರುವ ಸಂಬಂಧವನ್ನು ಹೊಂದಿದೆಯೋ? ಈ ಗುಣಲಕ್ಷಣಗಳನ್ನು ಹೊಂದಿರುವ ಜನರನ್ನು ತಂಡವು ಹೇಗೆ ಕಂಡುಕೊಂಡು, ಅವರೊಂದಿಗೆ ವ್ಯವರಿಸುವುದು?

## ಅಧ್ಯಾಯ 10: ವೈವಿಧ್ಯತೆಯಲ್ಲಿ ಐಕ್ಯತೆ

1. ಸೇವೆಯ ಫಲಿತಾಂಶಗಳಿಗಾಗಿನ ವಿಭಿನ್ನವಾದ ಅವರ ನಿರೀಕ್ಷೆಗಳ ಆಧಾರದ ಮೇಲೆ ಒಂದು ನಾಯಕತ್ವ ತಂಡದ ಸದಸ್ಯರಗಳ ನಡುವೆ ಯಾವ ರೀತಿಯ ಗೊಂದಲವಿರಬಹುದು* (ಕೆಲವರು ಬೇರೆಯವರಿಗಿಂತ ಬಲವಾದ ವ್ಯಕ್ತಿತ್ವವನ್ನು ಹೊಂದಿರುವವರು ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಸಹ ಪ್ರಾಮುಖ್ಯವಾಗಿದ್ದಾರೆ).

2. ಯಾವ ನಾಯಕನು ಬೇರೆಯವರಿಗಿಂತ ಹೆಚ್ಚಾಗಿ ತನ್ನ ಕಾರ್ಯಗಳನ್ನು ತೋರ್ಪಡಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ? ಇದು ಬೇಧವನ್ನುಂಟುಮಾಡುವದಾಗದಂತೆ ನೀವು ಹೇಗೆ ಮಿತಗೊಳಿಸಬಹುದು?

3. ನಿಮ್ಮ ನಿರ್ದಿಷ್ಟವಾದ ಹಿನ್ನಲೆ/ಸಂದರ್ಭದಲ್ಲಿ ನಾಯಕತ್ವದ ಯಾವ ಕಾರ್ಯಗಳು ಮತ್ತು ವರಗಳು ಬಹು ಆವಶ್ಯಕವಾದವುಗಳಾಗಿವೆ? ಸಾಮಾನ್ಯವಾಗಿ ನಿಮ್ಮ ಸಭೆಗೆ ಬೇಕಾಗಿರುವ ಈ ಕಾರ್ಯಗಳನ್ನು ಮತ್ತು ವರಗಳನ್ನು ನೀವು ತೆಗೆದುಕೊಳ್ಳಬಹುದಾದ ಕೆಲವು ಮಾರ್ಗಗಳಾವುವು?

## ಅಧ್ಯಾಯ 11: ಈ ಕಾರ್ಯಗಳನ್ನು ಮತ್ತು ವರಗಳನ್ನು ಮಿಶ್ರಣ ಮಾಡುವುದು(ಬೆರೆಸುವದು)

1. ನಿಮ್ಮ ಸಂದರ್ಭ ಅಥವಾ ಹಿನ್ನೆಲೆಯಲ್ಲಿ ಪವಿತ್ರಾತ್ಮನ ಮಾರ್ಗದರ್ಶನದಡಿಯಲ್ಲಿ ಅಪೊಸ್ತಲರಂತೆ ಸಂಘಟಿತರಾಗಿರುವುದು ಹೇಗೆ ತೋರುತ್ತದೆ ಚರ್ಚಿಸಿರಿ.

2. ತಿರುಗುವ  ತಂಡದಲ್ಲಿರುವ ಯಾವ ಕಾರ್ಯವು ಇಂದು ನಿಮ್ಮ ಸಭೆಯಲ್ಲಿ ಅತೀ ಅವಶ್ಯಕವಾಗಿದೆ?

3. ಅಪೊಸ್ತಲರ ತಂಡದ ಮುಖವನ್ನು ತಿರುಗಿಸುವುದು ಹೇಗೆ ನಿಯಮಿತವಾಗಿ ನಿರ್ಧರಿಸಲ್ಪಡಬಹುದು ಮತ್ತು ರಚಿಸಬಹುದು(ಏರ್ಪಡಿಸಬಹುದು)?

## ಅಧ್ಯಾಯ 12: ದೇವರ ಮಾರ್ಗದಲ್ಲಿ ನಾಯಕತ್ವವನ್ನು ತರಬೇತಿಗೊಳಿಸುವುದು

1. ನಾಯಕರುಗಳಿಗಾಗಿ ನಿಮ್ಮ ಸಭೆಯು ಸೆಮಿನರಿಗಳು ಮತ್ತು ಮಹಾವಿದ್ಯಾಲಯಗಳ ಮೇಲೆ ಅವಲಂಬಿತವಾಗಿದೆಯೋ?

2. ಬೇರೆ ನಾಯಕರುಗಳನ್ನು ಗುರುತಿಸುವುದಕ್ಕೆ ಮತ್ತು ತರಬೇತಿಗೊಳಿಸುವುದಕ್ಕೆ ನಿಮ್ಮ ಮುಖ್ಯ ನಾಯಕತ್ವವು ಶೇಕಡಾ ಎಷ್ಟು ಸಮಯವನ್ನು ಕೊಡುತ್ತದೆ?

3. ನಾಯಕರುಗಳನ್ನು ದ್ವಿಗುಣಗೊಳಿಸುವ ಸಲುವಾಗಿ ನಿಮ್ಮ ಸಭೆಯು ಕೊಡಬೇಕಾದ ಸಂವಾದನಾತ್ಮಕವಾದ ಮತ್ತು ಅಧಿಕೃತವಾದ ತರಬೇತಿ ಯಾವುದು?

## ಅಧ್ಯಾಯ 13: ಇತಿಹಾಸದಲ್ಲಿ ಒಂದು ಹೊಸ ಕ್ಷಣ

1. ಈ ಹೇಳಿಕೆಯನ್ನು ವಿಮರ್ಶಿಸಿರಿ: "ಲೋಕವು ಹಿಂದೆಂದೂ ಕಂಡಿರದಂತಹ ಮತ್ತು ಖಂಡಿತವಾಗಿಯೂ ನಾವು ಇಂದು ಅನುಭವಿಸದಿರುವಂತಹ ದಿನಗಳನ್ನು ನಾವು ಪ್ರವೇಶಿಸುತ್ತಿದ್ದೇವೆ!"

2. ಪ್ರತಿದಿನ ಆತನ ಸ್ವರವನ್ನು ಕೇಳುವುದಕ್ಕೆ ದೇವ ಜನರನ್ನು ಸಬಲೀಕರಿಸುವ ಅಥವಾ ಬಲಪಡಿಸುವ ಕಾರ್ಯವನ್ನು ನಿಮ್ಮ ಸಭೆಯ ನಾಯಕತ್ವ ತಂಡವು ಎಷ್ಟು ಉತ್ತಮವಾಗಿ ಮಾಡಿದೆ?

## ಅನುಬಂಧ C

# ನಿಮ್ಮ ಸಭೆಯಲ್ಲಿ ಸೇವಾ ಮನೋಭಾವನೆ ಹೊಂದಿದ ಸಮುದಾಯಗಳನ್ನು (ಸಣ್ಣ ಗುಂಪುಗಳು) ಕಟ್ಟುವುದು

ಸಭೆಯೊಳಗೆ ದೇವ ಜನರನ್ನು ಸಬಲೀಕರಿಸುವುದಕ್ಕೆ ಅಥವಾ ಬಲಪಡಿಸುವದಕ್ಕೆ ಸಂಘಟನಾತ್ಮಕವಾಗಿ ಸಹಕರಿಸಲು ಸೇವಾ ಮನೋಭಾವನೆಯ ಸಮುದಾಯಗಳು, ಅಥವಾ ಸಣ್ಣ ಗುಂಪುಗಳು, ಪರಿಣಾಮಕಾರೀ ಮಾದರಿಗಳಾಗಿವೆ. ಸಭೆಯಲ್ಲಿನ ಗುರುತು ಮತ್ತು ಸಬಲೀಕರಣದ ಮೊದಲ ಅಲೆಯಾಗುವುದಕ್ಕೆ ನಾಯಕತ್ವವು ಸೇವಾಮನೋಭಾವನೆಯ ಸಣ್ಣ ಸಮುದಾಯಗಳನ್ನು ಸಿದ್ಧಗೊಳಿಸುತ್ತಿರಬೇಕು. ಹೆಚ್ಚುವರಿಯಾಗಿ, ನಾಯಕತ್ವವು ಕೆಳಕಂಡ ಪ್ರಶ್ನೆಗಳ ಆಧಾರದ ಮೇಲೆ ನಿರ್ಧರಿಸಬೇಕು:

• ಸೇವಾ ಮನೋಭಾವನೆಯ ನಾಯಕರನ್ನು ತರಬೇತಿಗೊಳಿಸಲು ಮತ್ತು ಮಾರ್ಗದರ್ಶಿಸಲು ಯಾರು ಜವಾಬ್ದಾರರಾಗುತ್ತಾರೆ?

• ನಮ್ಮ ಸೇವಾ ಮನೋಭಾವನೆಯ ಗುಂಪಿನಲ್ಲಿನ ಜನರ ಮೂಲಕ ದೇವರು ತೆರೆಯುವ ಅವಕಾಶಗಳಿಗೆ ಸಹಾಯ ಮಾಡಲು(ನೆರವಾಗಲು) ನಮ್ಮ ಬಜೆಟ್ ನ ಶೇಕಡಾ ಎಷ್ಟು ಭಾಗ ಲಭ್ಯವಿರಬೇಕು?

• ಹೊಸ ಸೇವೆಗಳಿಗೆ ನೆರವಾಗುವ ಅವಕಾಶಗಳು ಉದ್ಭವಿಸುವಾಗ ನಮ್ಮ ನಾಯಕತ್ವದಿಂದ ಯಾರು ಸಹಾಯಮಾಡುವರು( ತರಬೇತಿ, ಪ್ರಾಯೋಗಿಕ ಸಂಪನ್ಮೂಲಗಳು, ಸಂಪರ್ಕ ಜಾಲ )?

ದೇವ ಜನರಲ್ಲಿ ಪ್ರತಿಯೊಬ್ಬ ಸೇವಾಮನೋಭಾವನೆಯ ನಾಯಕನು ಬೆಳೆಸಬೇಕಾದ 7 ಅಂತಿಯೋಕ್ಯ ಸಭೆಯ ಗುಣಲಕ್ಷಣಗಳ ಕುರಿತಾದ ಕೆಲ ಪ್ರಶ್ನೆಗಳು ಕೆಳಕಂಡಂತಿವೆ (ಈ ಪುಸ್ತಕದಲ್ಲಿ ನಾವು ಅಭ್ಯಸಿಸುವ ಅದೇ 7 ಗುಣಲಕ್ಷಣಗಳು). ಅಂತಿ ಯೋಕ್ಯ ರೀತಿಯ ಸಭೆಯ ತಿಳುವಳಿಕೆಯಲ್ಲಿ ಸೇವಾಮನೋಭಾವನೆಯ ಸಮೂಹದ

ನಾಯಕರುಗಳು ಬೆಳೆಯುವುದಕ್ಕೆ ಸಹಾಯಕವಾಗಲು ನಾಯಕರು/ನಾಯಕತ್ವವು ಈ ಪ್ರಶ್ನೆಗಳನ್ನುಪಯೋಗಿಸಬಹುದು, ಇದನ್ನು ಅವರು ತಮ್ಮ ಸೇವಾ ಮನೋಭಾವದ ಸಮುದಾಯದ ಕೂಟಗಳಲ್ಲಿ(ಭೇಟಿ) ದೇವಜನರಿಗೆ ವರ್ಗಾವಣೆ ಮಾಡಲು ಸಾಧ್ಯವಾಗುತ್ತೆ.

1. **ಗುರಿಚಾಲಿತರಾಗಿರುವುದು/ಗುರಿಯಿಂದ ನಡೆಸಲ್ಪಡುವದು**

ನಮ್ಮ ಸ್ಥಳಕ್ಕಾಗಿ ದೇವರು ಬಯಸುವುದೇನು ?ತಾನು ಬಯಸುವುದನ್ನು ದೇವರು ಮಾಡುವಾಗ ಅದು ಹೇಗೆ ತೋರುತ್ತದೆ?

• ನಿಮ್ಮ ಸೇವಾ ಮನೋಭಾವನೆಯ ಸಮುದಾಯದ ಹೊಣೆಗಾರಿಕೆಯ ವಲಯದಲ್ಲಿ ಎಷ್ಟು ಜನರಿದ್ದಾರೆ?

• ನಿಮ್ಮ ವಲಯದಲ್ಲಿ ನೀವು ಯಾವುದಕ್ಕಾಗಿ ಪ್ರಾರ್ಥಿಸುತ್ತಿರುವಿರಿ? ಸ್ಪಷ್ಟವಾದ ಅಗತ್ಯಗಳಾವುವು?

• ನಿಮ್ಮ ವಲಯದಲ್ಲಿ ನೀವು ಯಾವ ಮುಖ್ಯ ಸಂಬಂಧಗಳನ್ನು ಕಟ್ಟುತ್ತಿರುವಿರಿ (ವ್ಯಾಪಾರ, ರಾಜಕಾರಣ, ಸಾಮಾಜಿಕ ಸಂಸ್ಥೆಗಳು, ಬೇರೆ ಸಭೆಗಳು, ಇತ್ಯಾದಿ.)?

2. **ಜನರನ್ನು ಸಬಲೀಕರಿಸುವುದು(ಬಲಪಡಿಸುವುದು)**

ದೇವರು ಏನನ್ನೇ ಮಾಡಲು ಹೊರಟರೂ, ಆತನದನ್ನು ಪ್ರಾಥಮಿಕವಾಗಿ ಕ್ರಿಸ್ತನಿಗೆ ಸೇರಿದ ಎಲ್ಲಾ ಜನರು ಮೂಲಕ ಮಾಡುವವನಾಗಿದ್ದಾನೆ.

• ನಿಮ್ಮ ಸೇವಾ ಮನೋಭಾವನೆಯ ಸಮುದಾಯದಲ್ಲಿನ ಜನರ ಮೂಲಕ ದೇವರು ಮಾರ್ಗದರ್ಶಿಸುತ್ತಿರುವ ಒಂದು ಕಾಳಜಿಯ ನಿಮಿತ್ತ ನೀವು ಯಾವ ಚಟುವಟಿಕೆಗಳನ್ನು ಪ್ರಾರಂಭಿಸಿರುವಿರಿ?

• ಆ ಸಂಗತಿಗಳ ಸುತ್ತ ಚಟುವಟಿಕೆಗಳನ್ನು ಮಾಡುವುದು ಮತ್ತು ಸಮಯ, ಶಕ್ತಿ ಮತ್ತು ಸಂಪನ್ಮೂಲಗಳನ್ನು ಅವರಿಗೆ ಕೊಡುವುದರಿಂದ  ದೇವರು ನಿಮ್ಮ ಜನರಲ್ಲಿ ನೀವು ಹೇಗೆ ಬೆಂಬಲಿಸಿರುವಿರಿ?

• ಹೊಸ ನಾಯಕರುಗಳನ್ನು ನೀವು ಹೇಗೆ ಗುರುತಿಸುತ್ತಿರುವಿರಿ, ಅವರಿಗೆ ತರಬೇತಿ

•  ಕೊಡುತ್ತಿರುವಿರಿ ಮತ್ತು ಅವರಿಗೆ ಜವಾಬ್ದಾರಿಗಳನ್ನು ಕೊಡುತ್ತಿರುವಿರಿ?

## 3. **ಪರಿಣಾಮಕಾರಿತ್ವವನ್ನು ಅಳೆಯುವದು**

ಜನರು ದೇವರನ್ನು ಹುಡುಕಲು, ತಮ್ಮ ಸಾಕ್ಷಿಗಳನ್ನು ಹೇಳಲು, ದೇವರಾತ್ಮನ ವರಗಳನ್ನು ವೃದ್ದಿಪಡಿಸಲು, ದೇವರಾತ್ಮನ ಫಲಗಳಲ್ಲಿ ಹೆಚ್ಚಲು ಮತ್ತು ತಮ್ಮ ಜೀವಿತ ಮತ್ತು ಸೊತ್ತುಗಳನ್ನು ದೇವರ ಮಹಿಮೆಗಾಗಿ ಕೊಡಲು ನೆರವಾಗುವುದರಲ್ಲಿ ನಾವು ನಮ್ಮ ಪರಿಣಾಮಕಾರಿತ್ವವನ್ನು ಅಳೆಯಲೇಬೇಕು.

• ನಿಮ್ಮ ಸೇವಾಮನೋಭಾವನೆಯ ಸಮುದಾಯದ ಜನರಲ್ಲಿ ಐದು ಆರಂಭಿಕ(ಹೊಸ್ತಿಲು) ಮೌಲ್ಯಗಳನ್ನು ನೀವು ಹೇಗೆ ಗೆಲ್ಲಿಸುವಿರಿ? ಅವುಗಳನ್ನು ನೀವು ಹೇಗೆ ಬೋಧಿಸುವಿರಿ ಮತ್ತು ಅವುಗಳನ್ನು ಅಭ್ಯಸಿಸಲು ಜನರಿಗೆ ಸಹಕರಿಸುವಿರಿ?

• ನಿಮ್ಮ ಸೇವಾಮನೋಭಾವನೆಯ ಸಮುದಾಯದ ಜನರ ಬೆಳವಣಿಗೆ ಮತ್ತು ಪ್ರವೀಣತೆಯನ್ನು ನೀವು ಹೇಗೆ ಅಳೆಯುವಿರಿ?

• ಮುಂದಿನ ಅವಧಿಯಲ್ಲಿ ಐದು ಮೌಲ್ಯಗಳಲ್ಲಿ ಯಾವುದಾದರೊಂದಕ್ಕೆ ಪ್ರಾಧಾನ್ಯತೆ ಕೊಡಬೇಕಿದೆಯೋ? ಮುಂದಿನ ವರ್ಷದ ಕುರಿತೇನು?

## 4. **ಪರಸ್ಪರಾವಲಂಬಿತ ನಾಯಕತ್ವವನ್ನು ಬೆಳೆಸುವದು**

ದೇವರು ಏನನ್ನೇ ಮಾಡಲು ಹೊರಟರೂ, ಆತನದನ್ನು ತಮ್ಮ ವರಗಳಲ್ಲಿ ಜನರನ್ನು ಬಲಪಡಿಸುವದನ್ನು ಪ್ರಾಧಾನ್ಯವಾಗಿಟ್ಟುಕೊಂಡಿರುವ ನಾಯಕತ್ವದ(ನಾಯಕರ) ಮೂಲಕ ಮಾಡುವವನಾಗಿದ್ದಾನೆ.

• ನಿಮ್ಮ ಸಭೆಯಲ್ಲಿ ಯಾವ ಬಗೆಯ ನಾಯಕತ್ವದ ಕೊರತೆಯಿದೆ (ಎಫೆಸ. 4:11 ನ್ನು ನೋಡಿರಿ)?

• ಈ ವರ್ಷದಲ್ಲಿ ದೇವರು ನಿಮ್ಮ ನಾಯಕತ್ವದಿಂದ ಏನನ್ನು ಬಯಸುತ್ತಿರುವನೆಂಬುದಾಗಿ ನೀವು ನಂಬುವಿರಿ?

## 5. **ಪಾರ್ಶ್ವಕ್ಕೆ(ಪಕ್ಕಕ್ಕೆ) ಮುಖಮಾಡಿರುವುದು**

ದೇವರು ಏನನ್ನೇ ಮಾಡಲು ಹೊರಟರೂ ಸಹ, ಪ್ರಾಥಮಿಕವಾಗಿ ಆತನದನ್ನು ಒಂದು ವಿಕೇಂದ್ರೀಕೃತ ರಚನೆ(ವಿನ್ಯಾಸ)ಯ ಮೂಲಕ ಮಾಡುತ್ತಾನೆ - ಆದರದನ್ನು ಕೇವಲ ಒಬ್ಬ ನಾಯಕ ಅಥವಾ ಒಂದು ಸಭೆಯ ಮೂಲಕ ಮಾಡದೆ, ವಿಶಾಲವಾದ ಸಭೆಯಲ್ಲಿನ ಎಲ್ಲ ಜನರ ಮೂಲಕ ಮಾಡುತ್ತಾನೆ.

• ನಿಮ್ಮ ಸೇವಾಮನೋಭಾವನೆಯ ಸಮುದಾಯದ ಹೊಣೆಗಾರಿಕೆಯ ವಲಯವನ್ನು ಭರ್ತಿಮಾಡಲು ಎಷ್ಟು ಸೇವಾಮನೋಭಾವನೆಯ ಸಮುದಾಯಗಳು ಬೇಕಿವೆ?

• ಈ ವರ್ಷ ನೀವು ಎಷ್ಟು ಹೊಸ ಸೇವಾಮನೋಭಾವನೆಯ ಸಮುದಾಯಗಳು ಜನ್ಮತಾಳುವುದನ್ನು ಕಾಣಲು ಬಯಸುವಿರಿ?

• ನಿಮ್ಮ ಸೇವಾಮನೋಭಾವನೆಯ ಸಮುದಾಯವು ಪರಿಗಣಿಸಬೇಕಾದ ಇತರೆ ವಲಯಗಳಾವುವು -ಪಟ್ಟಣ, ಪ್ರಾಂತ್ಯ ರಾಜ್ಯ?

## 6. **ಬೇರೆ ಸಭೆಗಳೊಂದಿಗೆ ವ್ಯವಹರಿಸುವುದು(ಸಂಬಂಧ ಹೊಂದುವುದು)**

ದೇವರು ಏನನ್ನೇ ಮಾಡಲು ಹೊರಟರೂ, ಆತನದನ್ನು ಒಂದೇ ಸಭೆಯಂತಿರುವ ನಮ್ಮ ಪಟ್ಟಣ ಮತ್ತು ಲೋಕದಲ್ಲಿನ ಕ್ರಿಸ್ತನಿಗೆ ಸೇರಿದ ಎಲ್ಲಾ ಜನರ ಮೂಲಕ ಮಾಡುವವನಾಗಿದ್ದಾನೆ.

• ನಿಮ್ಮ ಸೇವಾಮನೋಭಾವನೆಯ ಸಮುದಾಯದ ವಲಯದಲ್ಲಿ ಎಷ್ಟು ಬೇರೆ ಕ್ರೈಸ್ತ ಗುಂಪುಗಳಿವೆ?

• ಅವುಗಳಲ್ಲಿ ಯಾರೊಂದಿಗಾದರೂ ನೀವು ಒಂದು ಸಂಬಂಧವನ್ನು ಬೆಳೆಸಿರುವಿರೋ?

• ಈ ವರ್ಷದಲ್ಲಿ ಪಾಲುದಾರಿಕೆಯನ್ನು ಕಟ್ಟುವುದಕ್ಕಾಗಿ ನೀವು ಮಾಡಬಹುದಾದ ಗುರಿಯೇನು?

## 7. **ದೂರದರ್ಶಿಸುವದು ಅಥವಾ ಜಾಗತಿಕವಾಗಿ ಉದ್ದೇಶಪೂರ್ವಕವಾಗಿರುವುದು(ಉದ್ದೇಶ ಹೊಂದುವದು)**

ಯಾವುದೇ ಸ್ಥಳೀಯ ಸಭೆಯ ಹೊಣೆಗಾರಿಕೆಯ ವಲಯದಿಂದ ದೂರದಲ್ಲಿ ದೇವರು ಏನನ್ನೇ ಮಾಡಲು ಹೊರಟರೂ(ನಮ್ಮ ವಿಭಿನ್ನ ಸಂಸ್ಕೃತಿಯ ವಲಯ), ಆತನದನ್ನು ಪವಿತ್ರಾತ್ಮನೊಂದಿಗಿನ ಜಂಟಿ ಧೈರ್ಯ ಮತ್ತು ಆ ಕ್ಷೇತ್ರದಲ್ಲಿನ ಸ್ಥಳೀಯ ಜನರ ಮೂಲಕ ಮಾಡುವವನಾಗಿದ್ದಾನೆ.

• ನಿಮ್ಮ ಸೇವಾಮನೋಭಾವನೆಯ ಸಮುದಾಯವು ದೇಶದ ಅಥವಾ ಜಗತ್ತಿನ ಬೇರೆ ಭಾಗಗಳಲ್ಲಿನ ಕ್ರೈಸ್ತರೊಂದಿಗೆ ಸಂಬಂಧಾತ್ಮಕವಾಗಿ ಸಂಪರ್ಕದಲ್ಲಿದೆಯೋ?

• ಆ ಸಂಬಂಧಗಳ ಮೂಲಕ ದೇವರ ಸೇವಾಕಾರ್ಯಗಳನ್ನು ವಿಸ್ತರಿಸಲು ನೀವೇನನ್ನು ಮಾಡಬಹುದು?

• ಲೋಕದಲ್ಲಿ ತಾನು ಸಂಪರ್ಕ ಹೊಂದಿದ ಸ್ಥಳಗಳಾಗಿ ಸೇವಾಮನೋಭಾವನೆಯ ಸಮುದಾಯವು ಹೇಗೆ ಪ್ರಾರ್ಥಿಸಬಲ್ಲದು, ಅವುಗಳಿಗೆ ಅದು ಹೇಗೆ ಹಣಕಾಸನ್ನು ಅಥವಾ ತಂಡಗಳನ್ನಿ ಕಳುಹಿಸಿಕೊಡಬಲ್ಲದು?

## ಅನುಬಂಧ D

# ಸಂಪೂರ್ಣ ಸಭಾ ಸ್ಥಾಪನೆಯನ್ನು ಬೋಧಿಸುವುದಕ್ಕಾಗಿ ಮೂರು ರೂಪು(ಹೊರ)ರೇಖೆಗಳು

ಕೆಳಕಂಡ ಮೂರು ರೂಪ(ಹೊರ) ರೇಖೆಗಳು ಸಂಪೂರ್ಣ ಸಭಾ ಸ್ಥಾಪನೆಯ ಸುಧಾರಣಾತ್ಮಕ ಸಂದೇಶದ ಒಂದು ವಿಸ್ತಾರವಾದ ಅವಲೋಕನವನ್ನು ಕೊಡುವುದಕ್ಕಾಗಿ ರೂಪಿಸಲ್ಪಟ್ಟಿವೆ. ಅವು ಪ್ರಯಾಣ(ಯಾತ್ರೆ)ಯ ನಿರ್ಧಿಷ್ಟವಾದ ಅಂಶಗಳ ಸಂಕ್ಷಿಪ್ತವಾದ ಆವೃತ್ತಿಗಳಾಗಿವೆ: ದೇವರು ತನ್ನ ಜನರನ್ನು ಹೇಗೆ ಉಪಯೋಗಿಸಲು ಬಯಸುತ್ತಾನೆ, ಸಭೆಗಾಗಿನ ದೇವರ ಉದ್ದೇಶ ಮತ್ತು ನಾಯಕತ್ವಕ್ಕಾಗಿನ ದೇವರ ಉದ್ದೇಶವೇನಾಗಿದೆ ಎಂಬುದನ್ನು ಕಲ್ಪಿಸಿಕೊಳ್ಳುವುದು. ಈ ರೂಪು(ಹೊರ)ರೇಖೆಗಳು ಸಂಪೂರ್ಣ ಸಭಾ ಸ್ಥಾಪನೆಯ ತತ್ವಗಳನ್ನು ಅದರ ನಾಯಕತ್ವದ ತಂಡ ಮತ್ತು ಸೇವೆಯ ದರ್ಶನದಲ್ಲಿ ಕಾರ್ಯಗತಗೊಳಿಸಲು ಬಯಸುವ ಯಾವುದೇ ಸಭೆಗೆ ಸೂಕ್ತವಾಗಿವೆ.

ಪ್ರತಿ ರೂಪು(ಹೊರ)ರೇಖೆಯು ಐದಕ್ಕಿಂತ ಹೆಚ್ಚು ಗಂಟೆಗಳ ನಿರೂಪಣೆಯನ್ನೊಳಗೊಂಡಿದೆ ಮತ್ತು ಮೂರು ಪ್ರತ್ಯೇಕ ಭಾಗಿಯಾಗುವಿಕೆಗಳಲ್ಲಿ ಬಿಡುಗಡೆಗೊಳಿಸುವ ಉದ್ದೇಶ ಹೊಂದಿದ್ದು ಪ್ರತಿ ಭಾಗಿಯಾಗುವಿಕೆ ಸಹ ಸರಿಸುಮಾರು ತೊಂಬತ್ತು ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ವಿಷಯಗಳು ಕಾರ್ಯಗತಗೊಳ್ಳುವುದಕ್ಕಾಗಿ ಸಮಯ ಕೊಡಲು ಈ ಮೂರು ಭಾಗವಹಿಸುವಿಕೆಗಳು ಪ್ರತ್ಯೇಕ ದಿನಗಳಲ್ಲಿ ಪೂರ್ಣಗೊಳ್ಳಬೇಕಿದೆ. ದಿನವೊಂದರಲ್ಲಿ ಒಂದಕ್ಕಿಂತ ಹೆಚ್ಚು ರೂಪು(ಹೊರ)ರೇಖೆಗಳನ್ನು ಮಾಡುವುದು ಪರಿನಣಾಮಕಾರಿಯಿಲ್ಲದಾಗಿದೆಯೆಂದು ಸಾಬೀತಾಗಬೇಕಿದೆ.

ಈ ರೂಪು(ಹೊರ)ರೇಖೆಗಳನ್ನು ಈಗಷ್ಟೇ ಸಂಪೂರ್ಣ ಸಭಾ ಸ್ಥಾಪನೆಯ ತತ್ವ(ಬೋಧನೆ)ಗಳೊಂದಿಗೆ ಪರಿಚಿತವಾಗುತ್ತಿರುವ ಅಥವಾ ಮೊದಲ ಬಾರಿಗೆ ಕೇಳಿಸಿಕೊಳ್ಳುತ್ತಿರುವವರಲ್ಲಿ

ಸಂಪೂರ್ಣ ಸಭಾ ಸ್ಥಾಪನೆಯ ಸಂದೇಶದ (ಮನಸ್ಸು)ಹೃದಯವನ್ನು ಬಿತ್ತಲು ಉಪಯೋಗಿಸಬೇಕು.

ಬೆಲೆಯನ್ನು ಪರಿಗಣಿಸಲು ಕೇಳುಗರಿಗೆ ಸೂಕ್ತವಾದ ಸಮಯದ ನಂತರ ಮನಸ್ಸುಳ್ಳವರು

ಹೆಚ್ಚು ಔಪಚಾರಿಕ ಪ್ರಯಾಣ(ಯಾತ್ರೆ):ಸಂಪೂರ್ಣ ಸಭಾ ಸ್ಥಾಪನೆಯ ಕಡೆಗೆ ಸಾಗಬಹುದು.

## ರೂಪು(ಹೊರ)ರೇಖೆ 1: ಸಂಪೂರ್ಣ ಸಭಾ ಸ್ಥಾಪನೆಗಾಗಿ ದರ್ಶನಗಳನ್ನು ಕಟ್ಟುವುದು

ಒಂದು ಸಭೆಯು ಗುರಿಚಾಲಿತ(ಗುರಿಯಿಂದ ನಡೆಸಲ್ಪಡಲು) ದರ್ಶನವು ಅವಶ್ಯಕವಾಗಿದೆ. ದೇವರು ನಮ್ಮನ್ನು ಮತ್ತು ನಮ್ಮ ಸಭೆಗಳನ್ನು ಹೇಗೆ ಉಪಯೋಗಿಸಲು ಬಯಸುತ್ತಾನೆಂಬುದನ್ನು ಕಲ್ಪಿಸಿಕೊಳ್ಳಲು, ನಾವು ಎರಡು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ: ಈ ಸ್ಥಳದಲ್ಲಿ ದೇವರು ಏನನ್ನು ಮಾಡಲು ಬಯಸುತ್ತಾನೆ? ಮತ್ತು ಈ ಸ್ಥಳದಲ್ಲಿ ತಾನು ಬಯಸಿದ್ದನ್ನು ದೇವರು ಮಾಡಿದರೆ ನಮ್ಮ ಜೀವಿತಾವಧಿಯಲ್ಲಿ ಅದು ಹೇಗೆ ತೋರುತ್ತದೆ?

### ಭಾಗ 1: ದೇವರ ಸೇವಾಕಾರ್ಯ ಮತ್ತು ಅದರ ಪರಿಣಾಮಗಳು

ಜಗತ್ತಿನಾದ್ಯಂತ ಇದು ಸಭಾ ಜೀವಿತದಲ್ಲಿ ಒಂದು ರೋಮಾಂಚಕ ಸಮಯವಾಗಿದೆ.

- ಸಭಾ ಚರಿತ್ರೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನರು ಇಂದು ತಮ್ಮನ್ನು ಯೇಸುಕ್ರಿಸ್ತನ ಹಿಂಬಾಲಕರೆಂಬುದಾಗಿ ಕರೆದುಕೊಳ್ಳುತ್ತಾರೆ ಮತ್ತು ಅವರಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಭಾಗ ಪಾಶ್ಚಾತ್ಯೇತರರಾಗಿದ್ದಾರೆ.
- ಭಾರತದಂತಹ ದೇಶಗಳಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಭೆಯ ಅಭೂತಪೂರ್ವ ಬೆಳವಣಿಗೆಯ ಮೇಲೆ ದೇವರ ಹಸ್ತವನ್ನು ಸಂಪೂರ್ಣ ಸಭಾ ಸ್ಥಾಪನೆಯು ಕಂಡಿದೆ.

ಭಾರತದಲ್ಲಿನ ಸಭೆಯ ಇತಿಹಾಸ ಮಾತ್ರವಲ್ಲದೆ ನಮ್ಮ ಮುಂದಿರುವ ಸವಾಲಿನ ಕುರಿತ ಕೆಲ ವಿವರಗಳು ಕೆಳಕಂಡಂತಿವೆ:

- 1985: 125,000 ಸಭೆಗಳು; 30,000 ಕೆಲಸಗಾರರು; 900 ಮಿಲಿಯನ್ ಜನರು, 900,000 ಸಭೆಗಳು ಬೇಕಿವೆ (ಪ್ರತಿ 1000 ಜನರಿಗೆ ಒಂದರಂತೆ).
- 2003: 345,000 ಸಭೆಗಳು; 125,000 ಕೆಲಸಗಾರರು; 1 ಬಿಲಿಯನ್ ಜನರು; 1 ಮಿಲಿಯನ್ ಸಭೆಗಳು ಬೇಕಿವೆ.
- 2012: 700,000 ಸಭೆಗಳು; 1.2 ಬಿಲಿಯನ್ ಜನರು; 1.2 ಬಿಲಿಯನ್ ಸಭೆಗಳು ಬೇಕಿವೆ.
- 2030: 1.6 ಮಿಲಿಯನ್ ಜನರ ಯೋಜನೆ, 1.6 ಮಿಲಿಯನ್ ಸಭೆಗಳು ಬೇಕಿವೆ.

ಮೇಲ್ಕಂಡ ಗಮನದಲ್ಲಿಟ್ಟುಕೊಂಡು ಕೆಳಕಂಡ ಕಲ್ಪಿಸಿಕೊಡುವ ಪ್ರಶ್ನೆಗಳನ್ನು ಪರಿಗಣಿಸಿ:

- ನಿಮ್ಮ ಸಭೆ, ಪಟ್ಟಣ, ಪ್ರಾಂತ್ಯ ಮತ್ತು ಜಗತ್ತಿಗಾಗಿ ದೇವರು ಏನನ್ನು ಬಯಸುತ್ತಾನೆ?
- ನಿಮ್ಮ ಜೀವಿತಾವಧಿಯಲ್ಲಿ ಈ ಸ್ಥಳಗಳಲ್ಲಿ ತಾನು ಬಯಸಿದ್ದನ್ನು ದೇವರು ಮಾಡಿದರೆ ಅದು ಹೇಗೆ ತೋರುತ್ತದೆ?

ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗು ಸಹ ಸುವಾರ್ತೆಯನ್ನು ನೋಡಲು, ಕೇಳಲು ಮತ್ತು ಮುಟ್ಟಲು ಒಂದು ಪುನರಾವರ್ತಿತ/ಮರು ಅವಕಾಶವನ್ನು ಹೊಂದಬೇಕೆಂದು ದೇವರು ಬಯಸುತ್ತಾನೆ (ಮತ್ತಾ. 18:12-14, 1 ತಿಮೊಥೆ. 2:3-6, 2 ಪೇತ್ರ 3:9 ನ್ನು ನೋಡಿ).

ಬೇರೆಯವರನ್ನು ದೇವರೊಂದಿಗೆ ಸಂಧಾನ/ಸಮಾಧಾನಗೊಳಿಸಲು ದೇವ ಜನರು ಉಪಯೋಗಿಸಲ್ಪಡುವುದು, ಇದು ಹೇಗೆ ತೋರುತ್ತದೆ? ( 2 ಕೊರಿಂಥ. 5:16-20 ನ್ನು ನೋಡಿರಿ).

ಸಮಾಧಾನಪಡಿಸುವುದು(ಸಂಧಾನ) ದೇವರ ಸೇವಾಗುರಿಯಾಗಿದೆ. ಯಾವುದಕ್ಕೆ ಸಮಾಧಾನಪಡಿಸುವುದು? ಯಾವುದಕ್ಕಾಗಿ ಆತನು ನಮ್ಮನ್ನು ಸೃಷ್ಟಿಸಿದ್ದಾನೋ ಅದಕ್ಕೆ ಸಮಾಧಾನ ಪಡಿಸಲು. ಆದಿಕಾಂಡ 1 ರಲ್ಲಿ: ಲೋಕದಲ್ಲಿ

ಆತನೊಂದಿಗೆ ಸಂಬಂಧ ಹೊಂದಲು ಮತ್ತು ಆತನನ್ನು ಪ್ರತಿನಿಧಿಸಲು (ಒಬ್ಬ ಪ್ರತಿನಿಧಿಯು ನಿಯೋಜಿತ ಅಧಿಕಾರದ ಮೇಲೆ ಮಾತನಾಡುತ್ತಾನೆ ಮತ್ತು ಕಾರ್ಯ ನಿರ್ವಹಿಸುತ್ತಾನೆ ).

## ಭಾಗ 2: ದೇಶಗಳನ್ನು ಬದಲಿಸಲು ದೇವರು ಉಪಯೋಗಿಸುವಂತ ಸಭೆ

ದೇಶಗಳನ್ನು ಬದಲಿಸಲು ದೇವರು ಯಾವ ರೀತಿಯ ಸಭೆಯನ್ನು ಉಪಯೋಗಿಸುತ್ತಾನೆ? 4 ಸಂಕಲ್ಪಗಳನ್ನು ಇಟ್ಟುಕೊಂಡಿರುವ ಒಂದು ಸಭೆ: ದೇವರು ಏನನ್ನೇ ಮಾಡಲು ಬಯಸಿದರೂ ಸಹ ಆತನ ಇದನ್ನು ಈ ಮೂಲಕ ಮಾಡುತ್ತಾನೆ:

1. ಕ್ರಿಸ್ತನಿಗೆ ಸೇರಿದ ಎಲ್ಲಾ ಜನರು(ಕ್ರೈಸ್ತರು)

• ಸಭೆಯಲ್ಲಿನ ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗು (ಹೊಸ ಒಡಂಬಡಿಕೆಯ ಸಭೆ ಮತ್ತು ಹಳೆ ಒಡಂಬಡಿಕೆಯ ದೇವಾಲಯ - ನಾವು ಹೋಗುವಲ್ಲೆಲ್ಲಾ ದೇವರು ಹೋಗುತ್ತಾನೆ).

• ಪಟ್ಟಣದಲ್ಲಿನ ಪ್ರತಿಯೊಂದು ಸಭೆ (ಕ್ರಿಸ್ತನ ದೇಹವು ವಿಂಗಡಿಸಲ್ಪಟ್ಟಿಲ್ಲ - 1ಸ್ಥಳದಲ್ಲಿ ದೇವರ ಇಡೀ ಸೇವಾಗುರಿಯನ್ನು ಸಾಧಿಸಲು ಕ್ರಿಸ್ತನ ಇಡೀ ದೇಹದ ಅಗತ್ಯವಿದೆ).

2. ವಿಕೇಂದ್ರೀಕೃತ ರಚನೆ ಅಥವಾ ವಿನ್ಯಾಸಗಳು

• ಜನರು, ನಾವು ಸಭೆ ಎಂಬುದಾಗಿ ಕರೆಯುವ 4 ಗೋಡೆಗಳ ಹೊರಗೆ ದೇವರ ಪ್ರಸನ್ನತೆಯನ್ನು ಕೊಂಡೊಯ್ಯುವರು, ಅಲ್ಲಿಯೇ ಅವರು ತಮ್ಮ ಸಮಯದ ಶೇಕಡಾ 90 ರಷ್ಟು ಭಾಗವನ್ನು ಕಳೆಯುವರು. ಆ ಸಮಯದಲ್ಲಿ ಅವರು ಏನನ್ನು ಮಾಡುತ್ತಿರುವರು?

• ಹೊಸ ಒಡಂಬಡಿಕೆಯ ಆದೇಶ(ಆಜ್ಞೆ) ಮತ್ತು ಹಳೆ ಒಡಂಬಡಿಕೆಯ ಮಾದರಿಯಂತೆ ಜೀವಿಸುವುದು- ನಾವು ಹೋಗಬೇಕು ಮತ್ತು ಹೇಳಬೇಕು, ಜನರು ಬಂದು ನೋಡುವುದಲ್ಲ

• ಎಲ್ಲಿಗೂ ಹೋಗದೆ ಸುವಾರ್ತೆಯನ್ನು ನೋಡಲು, ಕೇಳಲು ಮತ್ತು ಅದಕ್ಕೆ ಪ್ರತಿಕ್ರಿಯಿಸಲು ಜನರಿಗೆ ಮರು ಅವಕಾಶವನ್ನು ಕೊಡುವುದು.

3. ತಮ್ಮ ಸ್ವಂತ ವರಗಳನ್ನು ಪ್ರಯೋಗಿಸುವುದಕ್ಕಿಂತ ಹೆಚ್ಚು ಪ್ರಾಮುಖ್ಯವಾಗಿ ಜನರನ್ನು ಸಬಲೀಕರಿಸುವ/ಬಲಪಡಿಸುವುದನ್ನು ತನ್ನ ತಮ್ಮ ಮೊದಲ ಆದ್ಯತೆಯಾಗಿಕೊಂಡ ನಾಯಕರು/ನಾಯಕತ್ವ (ಎಫೆಸ. 4:11-12)

• ಸಭೆಯು ಕ್ರೋಢೀಕರಣದ ವಸ್ತು(ಗುರಿ)ಯಾಗಿದೆ ಹೊರತು ಸೇವೆಯ ವಸ್ತು(ಗುರಿ)ವಲ್ಲ, ಲೋಕವು ಸೇವೆಯ ವಸ್ತು(ಗುರಿ)ವಾಗಿದೆ.

• ಸಭೆಯ ಕಾರ್ಯಕ್ರಮವನ್ನು ನಡೆಸುವುದರಿಂದ ನಾವಿಲ್ಲದೇ ಆತನ ಸೇವಾ ಗುರಿಯನ್ನು ಕೊಂಡೊಯ್ಯಲು ದೇವಜನರಿಗೆ ಅನುಕೂಲ ಮಾಡಿಕೊಡುವುದಕ್ಕೆ  ನಾವು ನಮ್ಮ ಮಾದರಿಯನ್ನು ಬದಲಿಸಬೇಕು.

4. ಪವಿತ್ರಾತ್ಮ ನಂಬಿಕೆ ಮತ್ತು ಸ್ಥಳೀಯ ನಾಯಕರುಗಳೊಂದಿಗಿನ ಜಂಟಿ ಧೈರ್ಯದಲ್ಲಿ ದೂರದರ್ಶಿಸುವುದರ ಮೂಲಕ ಸಭೆಗಳು ಜಾಗತಿಕವಾಗಿ ಉದ್ದೇಶ ಪೂರ್ವಕವಾಗಿವೆ.

• ನಮ್ಮ ಸ್ಥಳೀಯ ಹೊಣೆಗಾರಿಕೆಯ ವಲಯಗಳ ಜೊತೆಗೆ ನಾವು ನಮ್ಮಿಂದ ದೂರವಿರುವ ಸ್ಥಳಗಳನ್ನು ಸಂಧಿಸಬೇಕು.

• ಸ್ಥಳೀಯ ನಾಯಕರ ಜತೆಯಲ್ಲಿ ಕೆಲಸ ಮಾಡುತ್ತಾ, ಸಂಪನ್ಮೂಲಗಳನ್ನು ಹಂಚಿಕೊಂಡು ಅವರು ತಮ್ಮ ಸ್ವಂತ ಹೊಣೆಗಾರಿಕೆಯ ವಲಯಗಳನ್ನು ಸಂಧಿಸುವಾಗ ಅವರೊಂದಿಗೆ ಪಾಲುದಾರರಾಗುವುದರೊಂದಿಗೆ ನಾವಿದನ್ನು ಮಾಡಬಹುದು.

## ಭಾಗ 3: ನಾವು ಮಾಡುವ ಶಿಷ್ಯರಲ್ಲಿನ ಯಶಸ್ಸನ್ನು ಮರುವ್ಯಾಖ್ಯಾನಗೊಳಿಸುವುದು

ಲೋಕದಲ್ಲಿ ಆತನ ಸೇವೆಯನ್ನು ಕೊಂಡೊಯ್ಯುವುದಕ್ಕೆ ದೇವಜನರನ್ನು ನಾವು ಯಶಸ್ವಿಯಾಗಿ ಸಬಲೀಕರಿಸುವಾಗ ಅಥವಾ ಬಲಪಡಿಸುವಾಗ ನಾವದನ್ನು  ಹೇಗೆ ತಿಳಿದುಕೊಳ್ಳುವುದು?

• ಯಶಸ್ಸನ್ನು ನಾವು ಹೇಗೆ ವ್ಯಾಖ್ಯಾನಗೊಳಿಸುತ್ತೇವೆ? ತೀರಾ ಸಾಮಾನ್ಯವಾಗಿ ಇದು ಹೆಚ್ಚು ಜನರು, ಹೆಚ್ಚು ಹಣ ಹೆಚ್ಚು ಸಂತೋಷವುಳ್ಳ ಜನರು ಎಂಬುದಾಗಿ ಅರ್ಥೈಸುತ್ತದೆ.

• ಯಶಸ್ಸನ್ನು ನಾವು ಹೇಗೆ ವ್ಯಾಖ್ಯಾನ ಗೊಳಿಸಬೇಕು? ದೇವ ಜನರು ಐದು ಬದಲಾಯಿಸಲಾಗದ ಮೌಲ್ಯಗಳಲ್ಲಿ ಬೆಳೆಯುತ್ತಿರುವುದು ಮತ್ತು ಯೇಸುಕ್ರಿಸ್ತನ ಹಿಂಬಾಲಕರೆಂಬುದಾಗಿ ತಮ್ಮನ್ನು ಕರೆದುಕೊಳ್ಳುವ ಜನರ ಗುಣ ಲಕ್ಷಣಗಳನ್ನು ಬೆಳೆಸಿಕೊಳ್ಳುತ್ತಿರುವುದನ್ನು ಖಚಿತ ಪಡಿಸಿಕೊಳ್ಳುವುದು:

ಆಗಿರುವುದು (ವ್ಯಕ್ತಿಗತವಾಗಿ ದೇವಜನರು ಪ್ರವೀಣರಾಗುವುದು):

1. ದೇವರೊಂದಿಗಿನ ತಮ್ಮ ಅನ್ಯೋನ್ಯತೆಯಲ್ಲಿ ಬೆಳೆಯುವುದು (ಮತ್ತಾಯ 22:36-40)

2. ಪವಿತ್ರಾತ್ಮನ ಫಲಗಳಲ್ಲಿ ಪ್ರವೀಣರಾಗುವುದು (ಯೋಹಾನ 15; ಗಲಾತ್ಯ 5:16-23).

3. ತಮ್ಮ ಕೃಪಾ ಸಾಕ್ಷಿಗಳನ್ನು ಹೇಳುವುದು (ಮಾರ್ಕ 5:1-20).

4. ತಮ್ಮ ಆತ್ಮೀಕ ವರಗಳನ್ನು ಅಭ್ಯಸಿಸುವುದು (1 ಕೊರಿಂಥ 12)

5. ತಮ್ಮ ಜೀವಿತಗಳ ಮನೆವಾರ್ತೆ (2 ಕೊರಿಂಥ. 5:15, ಗಲಾತ್ಯ 2:19-20; 1 ತಿಮೊಥೆ 6:17-19).

ಮಾಡುವುದು (ದೇವ ಜನರನ್ನು ಪ್ರವೀಣತೆಗೆ ತರುವುದರ ಸಾಮೂಹಿಕ ಫಲಿತಾಂಶಗಳು):

ಸಭೆಯ ಹೊಣೆಗಾರಿಕೆಯ ವಲಯವನ್ನು ವ್ಯಾಖ್ಯಾನಿಸುವುದು ಮತ್ತು ತಲುಪುವುದು.

ದೇವರು ನಮ್ಮನ್ನು ಇಡುವ ಸ್ಥಳದಲ್ಲಿನ ಯಶಸ್ಸನ್ನು ನಾವು ಮರುವ್ಯಾಖ್ಯಾನಗೊಳಿಸಬೇಕು:

• ನಾವು ಒಂದೇ ಸೇವಾಗುರಿ ಹೊಂದಿದ ಒಂದು ಸಭೆಯಾಗಿರಬೇಕು (ಫಲಿತಾಂಶವು ಸುವಾರ್ತೆಯ ಸಂಪೂರ್ಣತೆಯಾಗಿದೆ - ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವಿಗೆ ಸುವಾರ್ತೆಯ ಪ್ರಾತಿನಿಧ್ಯ/ನಿರೂಪಣೆ ಮತ್ತು ಸಾರುವಿಕೆ) .

• ಪ್ರಯಾಣವನ್ನು ಸೇರಲು ನಾವು ಬೇರೆ ನಾಯಕರುಗಳನ್ನು ಆಹ್ವಾನಿಸಬೇಕು.

• ಸಭೆ ಮತ್ತು ನಾಯಕತ್ವದ ತಿಳುವಳಿಕೆಯ ಸುಧಾರಣೆಗಾಗಿ ದೊಡ್ಡ ಸಮೂಹಕ್ಕೆ ನಾವೊಂದು ಕರೆಯನ್ನು ಕೊಡಬೇಕು.

## ರೂಪುರೇಖೆ(ಹೊರರೇಖೆ) 2: ಸಭೆಗಾಗಿನ ದೇವರ ಉದ್ದೇಶ

### ಅವಧಿ 1: ಸಂಪೂರ್ಣ ಸಭಾ ಸ್ಥಾಪನೆಯ ಮೌಲ್ಯಗಳ ವಿಮರ್ಶೆ

ನಮ್ಮ ದೇಶದಲ್ಲಿನ ಸಭೆಯ ಇತಿಹಾಸವನ್ನು ಸಂಶೋಧಿಸಿರಿ ಮತ್ತು ವಿಮರ್ಶಿಸಿರಿ.

ದೇವರು ಆಶಿಸುವ ಫಲಿತಾಂಶಗಳು:

- ನಮ್ಮ ಸ್ಥಳಕ್ಕಾಗಿ ದೇವರು ಏನನ್ನು ಬಯಸುತ್ತಾನೆ?
- ನಮ್ಮ ಸ್ಥಳದಲ್ಲಿ ತಾನು ಬಯಸುವುದನ್ನು ದೇವ್ರು ಮಾಡಿದರೆ ಅದು ಹೇಗೆ ತೋರುತ್ತದೆ?

ಸಂಪೂರ್ಣ ಸಭಾ ಸ್ಥಾಪನೆಯ 3 ಮೌಲ್ಯಗಳು: ಬೇರೆಯವರು ಏನೇ ಮಾಡಲು ಹೊರಟರೂ ಆತನು ಇವುಗಳ ಮೂಲಕ ಮಾಡುವವನಾಗಿದ್ದಾನೆ:

- ಕ್ರಿಸ್ತನಿಗೆ  ಸೇರಿದ ಎಲ್ಲಾ ಜನರು
- ವಿಕೇಂದ್ರಿಕೃತ ರಚನೆ(ವಿನ್ಯಾಸ)
- ಜನರನ್ನು ಸಬಲೀಕರಿಸುವುದನ್ನು(ಬಲಪಡಿಸುವುದನ್ನು) ತಮ್ಮ ಮೊದಲ ಆದ್ಯತೆಯನ್ನಾಗಿಸಿಕೊಂಡ  ನಾಯಕತ್ವ
- ದೂರದರ್ಶಿಸುವುದರ ಮೂಲಕ ಜಾಗತಿಕವಾಗಿ ಉದ್ದೇಶಪೂರ್ವಕವಾಗಿರುವ ಸಭೆಗಳು

## ಅವಧಿ 2: ಸಭೆ ಯಾಕೆ?

ಎಫೆಸದವರಿಗೆ 2:11-18: ದೇವರು ಏನನ್ನು ಮಾಡುತ್ತಿದ್ದನು?

• ಈ ಹಿಂದೆ ನಾವು ಹೀಗಿದ್ದೆವು (2:12-15):

• ಕ್ರಿಸ್ತನನ್ನು ಸೇರದವರಾಗಿದ್ದೆವು - (ವಾಗ್ದಾತ್ತ ಮೆಸ್ಸೀಯ)

• ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರಾಗಿದ್ದೆವು- (ದೇವರ ರಾಜ್ಯ)

• ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರಾಗಿದ್ದೆವು-(ಲಿಖಿತ ವಾಕ್ಯ)

• ನಿರೀಕ್ಷೆಯಿಲ್ಲದವರು-(ಭವಿಷ್ಯವಿಲ್ಲದವರು)

• ಲೋಕದಲ್ಲಿ ದೇವರನ್ನರಿಯದವರು-(ದೇವರಿಂದ ದೂರವಾಗಿದ್ದೆವು)

• ಆದರೆ ಈಗ ನಾವು (2:13):

• ದೇವರಿಗೆ ಸೇರಿದ ಒಬ್ಬ ಹೊಸ ಮನುಷ್ಯ: "ಈಗಲಾದರೂ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ತರಾದಿರಿ".

ಸಭೆಯು ಆತನದು- ಅದು ಆತನಿಗೆ ಸೇರಿದ್ದಾಗಿದೆ!  "ಆತನು ಸಮಾಧಾನ ಮಾಡುವವನಾಗಿ ಉಭಯರನ್ನು ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ ....ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವುದಕ್ಕೆ ಮಾರ್ಗವಾಯಿತು" (2:15-18).

ಎಫೆಸದವರಿಗೆ 2:19-21: ದೇವರು ಅದನ್ನು ಹೇಗೆ ಮಾಡುತ್ತಿದ್ದನು?

• ದೇವರ ಕೈಕೆಲಸವನ್ನು ವಿವರಿಸುವ 4 ರೂಪಾಲಂಕಾರಗಳು:

• ದೇಶ: "ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವ ಜನರೊಂದಿಗೆ ಒಂದೇ ಸಂಸ್ಥಾನದವರೂ.. ಆಗಿದ್ದೀರಿ" (2:19).

• ಮನೆ(ಕುಟುಂಬ): "ದೇವರ ಮನೆಯವರೂ ಆಗಿದ್ದೀರಿ" (2:19).

• ಕಟ್ಟಡ: "ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು" (2:21)

• ದೇವಾಲಯ: "ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ" (2:21).

• ಆತನ ಆತ್ಮವನ್ನು ಮಾರ್ಗದಲ್ಲಿಡುವುದು:

• ಇಲ್ಲಿ ವ್ಯಕ್ತಿ "ಆತನಲ್ಲಿ ನೀವು ಸಹ" (2:22) ಮತ್ತು ಸಾಮೂಹಿಕ ಅಂಶಗಳೆರಡರಿಂದಲೂ"ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳೂ" ದೇವರು ಪರಸ್ಪರ ಜೋಡಿಸಿದ್ದು ವೃದ್ದಿಯಾಗುತ್ತಿದೆ: "ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (2:22) ಮತ್ತು "ಒಂದಕ್ಕೊಂದು ಹೊಂದಿಕೆಯಾಗಿ ವೃದ್ಧಿಯಾಗುತ್ತಾ"(2:21). ಬೇರೆ ಮಾತಿನಲ್ಲಿ ಹೇಳುವುದಾದರೆ, ನಾವು ಕ್ರಿಸ್ತನಲ್ಲಿ ಇರುವುದಕ್ಕಾಗಿ (ಕ್ರಿಸ್ತನಲ್ಲಿ ವೈಯಕ್ತಿಕ ಬೆಳವಣಿಗೆ) ಮತ್ತು ಮಾಡುವುದಕ್ಕಾಗಿ (ಹೊಣೆಗಾರಿಕೆಯ ವಲಯವನ್ನು ಸಂಧಿಸಲು/ತಲುಪಲು ಸಾಮೂಹಿಕ ಕಾರ್ಯ) ಸೃಷ್ಟಿಸಲ್ಪಟ್ಟಿದ್ದೇವೆ.

ಎಫೆಸದವರಿಗೆ 3:10-11: ದೇವರು ಯಾಕೆ ಇದನ್ನು ಮಾಡುತ್ತಿದ್ದನು?

1. ಇದನ್ನು ರೀತಿಯಲ್ಲಿಯೇ ಯೋಚನೆ ಮಾಡಲಾಗಿತ್ತು: "ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು"(3:9); ಇದು ಆತನ ಉದ್ದೇಶವಾಗಿತ್ತು (3:10).

2. ನಮ್ಮ ದಿನದಲ್ಲಿ ಸುವಾರ್ತೆಯನ್ನು ಹಂಚುವುದಕ್ಕಾಗಿ ಆತನೇ ಒಂದು ಸಾಧನವನ್ನು ಸೃಷ್ಟಿಸುತ್ತಿದ್ದನು: "ಈಗ ಕ್ರೈಸ್ತ ಸಭೆಯ ಮೂಲಕ" (3:10).

3. ಆತನ ಲೆಕ್ಕವಿಲ್ಲದಷ್ಟು ಭಾವನೆಗಳನ್ನು ಅಪೇಕ್ಷಿಸಿದನು: "ನಾನಾ ವಿಧವಾದ ಜ್ಞಾನವು ಈಗ ಗೊತ್ತಾಗಬೇಕೆಂಬುದನ್ನು" (3:10).

4. ತನ್ನ ಕೃಪೆಯನ್ನು ಪರಲೋಕದಲ್ಲಿರುವವರಿಗೆ ತೋರಿಸಲು: "ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ" (3:10).

5. ಕ್ರಿಸ್ತನಲ್ಲಿ ಶಾಶ್ವತವಾದ ಉದ್ದೇಶವನ್ನು ನೆರವೇರಿಸಲು: "ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಸಂಕಲ್ಪದ ಮೇರೆಗೆ"(3:11).

ಮುಕ್ತಾಯ: ಈ ಲೋಕದಲ್ಲಿ ದೇವರು ಏನನ್ನೇ ಮಾಡಲು ಹೊರಟರು ಆ ತನ್ನದನ್ನು ಕ್ರಿಸ್ತನಿಗೆ ಸೇರಿದ ಎಲ್ಲಾ ಜನರ ಮೂಲಕ ಮಾಡುವವನಾಗಿದ್ದಾನೆ.

## ಅವಧಿ 3: ಯಶಸ್ಸು ಮತ್ತು ಹೊಣೆಗಾರಿಕೆ ವಲಯವನ್ನು ಅಳೆಯಲು 5 ವಿಧಗಳು

ಸಭೆಯಲ್ಲಿನ ಯಶಸ್ಸನ್ನು ವಚನದ ಜೀವಿತಗಳಲ್ಲಿ ಹೇಗೆ  ನಿರ್ಧರಿಸಬಹುದು:

1. ಅವರು ತಮ್ಮ ಯಾಜಕತ್ವವನ್ನು ಅಭ್ಯಸಿಸಲು ಮತ್ತು ಪರಲೋಕದಲ್ಲಿರುವ ತಂದೆಯೊಂದಿಗೆ ಅನ್ಯೋನ್ಯತೆಯಲ್ಲಿ ವೃದ್ಧಿಯಾಗಲು ಬಲ ಹೊಂದಿದ್ದಾರೋ?

2. ಅವರು ದೇವರಾತ್ಮನು ತಮಗೆ ಕೊಡುವ ಎಲ್ಲ ಸಂಬಂಧಗಳಲ್ಲಿ ತಮ್ಮ ಸಾಕ್ಷಿಯನ್ನು ಹೇಳುವುದಕ್ಕೆ ಬಲ ಹೊಂದಿದ್ದಾರೋ?

3. ಆತ್ಮನು ತಮಗೆ ಕೊಟ್ಟ ವರವನ್ನು ಅವರು ತಿಳಿದಿದ್ದಾರೋ ಮತ್ತು ದಿನದ ಇಪ್ಪತ್ನಾಲ್ಕು ಗಂಟೆ ಮತ್ತು ವಾರದ 7 ದಿನಗಳು ತಮ್ಮ ವರಗಳನ್ನು ಉಪಯೋಗಿಸುವುದಕ್ಕಾಗಿ ಅವರು ಬಲ ಹೊಂದಿದ್ದಾರೋ?

4. ತಮ್ಮ ಜೀವಿತಗಳಲ್ಲಿ ದೇವರಾತ್ಮನ ಫಲಗಳು ಸಾಕ್ಷಿಯಾಗುವಷ್ಟರ ಮತ್ತು ವೃದ್ಧಿಯಾಗುವಷ್ಟರ ಮಟ್ಟಿಗೆ ಅವರು ಆತ್ಮೀಕವಾಗಿ ಬೆಳೆಯುತ್ತಿರುವರೋ?

5. ದೇವರ ರಾಜ್ಯಕ್ಕಾಗಿ ಅವರು ತಮ್ಮ ಜೀವಿತಗಳನ್ನು ಮತ್ತು ಸೊತ್ತುಗಳನ್ನು ತೊಡಗಿಸುತ್ತಿರುವವರೋ?

ದೇವರು ತಮ್ಮನ್ನು ಇರಿಸಿರುವ ಹೊಣೆಗಾರಿಕೆಯ ವಲಯದಲ್ಲಿ ದೇವಜನರು ಸಾಕಷ್ಟು ಪರಿಣಾಮವನ್ನುಂಟುಮಾಡುತ್ತಿರುವರೋ?

• ನಿಮ್ಮ ಹೊಣೆಗಾರಿಕೆಯ ವಲಯವನ್ನು ಚಿತ್ರಿಸಿರಿ ಮತ್ತು ವಿವರಿಸಿರಿ:

• ಜನಸಂಖ್ಯೆ

• ಸಭೆಗಳ ಸಂಖ್ಯೆ

• ಜನಸಂಖ್ಯಾ ಅಂಕಿ ಅಂಶದ ವ್ಯತ್ಯಾಸ

• ನಿಮ್ಮ ಕ್ಷೇತ್ರದಲ್ಲಿ ಪ್ರತಿ ಸಾವಿರ ಜನರಿಗೆ ಒಂದು ಸಭೆಯಂತೆ ಎಷ್ಟು ಸಭೆಗಳು ಕಟ್ಟಲ್ಪಡುವುದನ್ನು ನೀವು ಕಾಣಬೇಕಿದೆ? ಮುಂದಿನ ಹತ್ತು ವರ್ಷಕ್ಕೆ ಎಷ್ಟು ಜನರು ದೇವರನ್ನು ನಂಬಬಹುದು?

## ರೂಪು(ಹೊರ)ರೇಖೆ 3: ನಾಯಕತ್ವಕ್ಕಾಗಿ ದೇವರ ಉದ್ದೇಶ

### ಅವಧಿ 1: ಸಂಪೂರ್ಣ ಸಭಾ ಸ್ಥಾಪನೆಯ ಮೌಲ್ಯಗಳನ್ನು ವಿಮರ್ಶಿಸಿರಿ ಮತ್ತು ನಾಯಕತ್ವಕ್ಕೆ ಪೀಠಿಕೆ

ಕೆಳಕಂಡವುಗಳ ಕುರಿತು ಗುಂಪಿನ ಸದಸ್ಯರುಗಳು ಹಂಚಿಕೊಳ್ಳುವುದನ್ನು ಕೇಳಿಸಿಕೊಳ್ಳಲು ಒಂದು ಗಂಟೆ ಮೀಸಲಿಡಿರಿ:

• ನವೀಕರಣ: ಡ್ವೈಟ್ ಸ್ಮಿತ್ ರವರ ಸಭಾ ಜೀವಿತದಲ್ಲಿನ ದೈವಿಕ(ದೇವರ) ವಿನ್ಯಾಸದ ಮೇಲೆ ಒಂದು ಸಮೀಕ್ಷೆಯ ಮೂಲಕ ಕಾರ್ಯಮಾಡುತ್ತಿರುವವರು ಮತ್ತು ಇದರ ತತ್ವಗಳನ್ನು ಅಳವಡಿಸಿಕೊಳ್ಳುತ್ತಿರುವವರು ಯಾರು?

• ಎಷ್ಟು ಅಧ್ಯಾಯಗಳನ್ನು ನೋಡಿದಿರಿ?

• ದೇವರು ನಿಮಗೆ ಯಾವ ಪ್ರಾಮುಖ್ಯವಾದ ತತ್ವ(ಬೋಧನೆ)ಗಳನ್ನು ತೋರಿಸಿದನು?

• ನೀವು ಕಾಣುವ ಅಡ್ಡಿ ಯಾವುದು? ನಿಮಗಿರುವ ಪ್ರಶ್ನೆ ಯಾವುದು?

ಸಂಪೂರ್ಣ ಸಭಾ ಸ್ಥಾಪನೆಯ ಮೌಲ್ಯಗಳ ಜ್ಞಾಪಕ:

• ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವನ್ನು ತಲುಪಲು ಇರುವ ಒಂದು ಗುರಿ

- ಸಂಪೂರ್ಣ ಸಭಾ ಸ್ಥಾಪನೆಯ ತತ್ವಗಳು:
- ಈ ಲೋಕದಲ್ಲಿ ದೇವರು ಏನನ್ನೇ ಮಾಡಲು ಹೊರಟರೂ, ಆತನದನ್ನು ಕ್ರಿಸ್ತನಿಗೆ ಸೇರಿದ ಎಲ್ಲ ಜನರ ಮೂಲಕ ಮಾಡುವವನಾಗಿದ್ದಾನೆ.
- ದೇವರು ಈ ಲೋಕದಲ್ಲಿ ಏನನ್ನೇ ಮಾಡಲು ಹೊರಟರೂ ಅತ್ತ ಮತನ್ನು 1 ವಿಕೇಂದ್ರೀಕೃತ ರಚನೆ ಅಥವಾ ವಿನ್ಯಾಸದ ಮೂಲಕ ಮಾಡುತ್ತಾನೆ
- ಈ ಲೋಕದಲ್ಲೇ ದೇವರು ಏನನ್ನೇ ಮಾಡಲು ಹೊರಟರೂ, ಆತನದನ್ನು ದೇವಜನರನ್ನು ಬಲಪಡಿಸುವ ಅಥವಾ ಸಬಲೀಕರಿಸುವದನ್ನು ತನ್ನ ತಮ್ಮ ಮೊದಲ ಆದ್ಯತೆಯಾಗಿಸಿಕೊಂಡು ಅದಕ್ಕಾಗಿ ತಮ್ಮ ವರಗಳನ್ನುಪಯೋಗಿಸುವ ನಾಯಕತ್ವದ(ನಾಯಕರ) ಮೂಲಕ ಮಾಡುತ್ತಾನೆ .

- ಈ ಲೋಕದಲ್ಲಿ ದೇವರು ಏನನ್ನೇ ಮಾಡಲು ಹೊರಟರೂ, ಆತನದನ್ನು ದೂರದರ್ಶಿಸುವುದರ ಮೂಲಕ ಜಾಗತಿಕವಾಗಿ ಉದ್ದೇಶ/ಪೂರ್ವಕತೆ ಹೊಂದಿದ ಸಭೆಗಳ ಮೂಲಕ ಮಾಡುವವನಾಗಿದ್ದಾನೆ.

ನಾಯಕತ್ವದ ಯಶಸ್ಸನ್ನು ಅಳೆಯುವುದಕ್ಕೆ ದೇವ ಜನರಲ್ಲಿರುವ ಐದು ಮೌಲ್ಯಗಳು:

• ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಬೆಳೆಯುವುದು

• ತಮ್ಮ ಸಾಕ್ಷಿಗಳನ್ನು ಹೇಳುವುದು

• ತಮ್ಮ ಆತ್ಮೀಯ ವರಗಳನ್ನು ಕಂಡುಹಿಡಿಯುವುದು

• ದೇವರ ಮಹಿಮೆಗಾಗಿ ತಮ್ಮ ಸಂಪನ್ಮೂಲಗಳನ್ನು ತೊಡಗಿಸುವುದು

• ನಮ್ಮ ಹೊಣೆಗಾರಿಕೆ ವಲಯವನ್ನು ತಲುಪಲು ಅಥವಾ ಸಂಧಿಸಲು ಕರೆಯಲ್ಪಟ್ಟದ್ದೇವೆ

ನಾಯಕತ್ವದ ದೈವಶಾಸ್ತ್ರದ ಅವಲೋಕನ:

ಇಂದು ನಾವು ನಾಯಕತ್ವದಲ್ಲಿ ಅಭ್ಯಸಿಸುವುದರಲ್ಲಿನ ಹೆಚ್ಚಿನದು, ತನ್ನ ದೇಹಕ್ಕಾಗಿ ದೇವರು ವಿನ್ಯಾಸ ಮಾಡಿದ ಸತ್ಯವೇದದ ವ್ಯಾಖ್ಯಾನಕ್ಕಿಂತ, ಸಂಪ್ರದಾಯದ ಪರಿಣಾಮ/ಫಲಿತಾಂಶವಾಗಿದೆ. ಆದರೂ, ಪ್ರಾಮುಖ್ಯತೆಯು ನಾವು ಹೊಸ ಒಡಂಬಡಿಕೆಯ ರಚನೆ(ವಿನ್ಯಾಸ)ಯನ್ನು ಅಥವಾ ಶಿರೋನಾಮೆಗಳನ್ನು ಅಳವಡಿಸಿಕೊಳ್ಳುವುದಲ್ಲ, ಬದಲಾಗಿ ಅದು ತನ್ನ ನಾಯಕತ್ವಕ್ಕಾಗಿ ದೇವರು ಬಯಸುವ ಹೃದಯವನ್ನು(ಮನಸ್ಸು) ನಾವು ಅಳವಡಿಸಿಕೊಳ್ಳುವುದಾಗಿದೆ.

ನಾಲ್ಕು ಸತ್ಯವೇದ ವಾಕ್ಯಭಾಗಗಳು ಸತ್ಯವೇಧಾರಿತ ನಾಯಕತ್ವವನ್ನು ವಿವರಿಸುತ್ತವೆ:

• ಎಫೆಸದವರಿಗೆ 4:12: ನಾಯಕತ್ವದ ಉದ್ದೇಶ

• ಯೇಸುವಿನ ವರಗಳು (ಐದು ಕಾರ್ಯಗಳು; ಎಫೆಸ. 4:11 ನ್ನು ನೋಡಿರಿ).

• ಪವಿತ್ರಾತ್ಮನ ವರಗಳು (ನಾಲ್ಕು ಆತ್ಮೀಕ ವರಗಳು; ರೋಮಾ. 12:6-7, 12:8, 1 ಕೊರಿಂಥ. 12:28; ಇಬ್ರಿಯ. 13:7,17).

• 1 ಕೊರಿಂಥದವರಿಗೆ 12:7-27; ನಾಯಕತ್ವದ ಲಕ್ಷಣ

• ಹೊಸ ಒಡಂಬಡಿಕೆಯಲ್ಲಿ ಸಭೆಯ ಕುರಿತ ಮೊದಲ ರೂಪಕಾಲಂಕಾರವು ಒಂದು ದೇಹವೆಂಬುದಾಗಿದೆ (ಇತರೆಗಳು ಹಿಂಡು, ಕಟ್ಟಡ, ಮದಲಗಿತ್ತಿ).

• ನಾಯಕತ್ವದ ಲಕ್ಷಣವು ಸಭೆಯ ಲಕ್ಷಣದಂತೆಯೇ ಇದೆ (ಬೇರೆ ಪದಗಳಲ್ಲಿ, ನಾಯಕತ್ವದಲ್ಲಿರುವವರು ಸಭೆಯ ಮೊದಲ ಸದಸ್ಯರುಗಳಾಗಿದ್ದಾರೆ).

• 1 ಕೊರಿಂಥದವರಿಗೆ 12:4-6: ನಾಯಕತ್ವದ ಮಾದರಿ

• ತ್ರೈಯೇಕತ್ವವು ಈ ದೇಹದಲ್ಲಿ ಏನು ಆಗಬೇಕು ಎಂಬುದರ ಮಾದರಿಯಾಗಿದೆ.

• ಮತ್ತಾಯ 20:20-28: ನಾಯಕತ್ವದ ಮನೋಭಾವ

• ಲೋಕದಲ್ಲಿರುವ ನಾಯಕತ್ವವು ಮೇಲಣಿಂದ ಕೆಳಗಿರುವುದಾಗಿದೆ, ಆದರೆ "ನಿಮ್ಮಲ್ಲಿ ಹಾಗಿರಬಾರದು".

## ಅವಧಿ 2: ನಾಯಕತ್ವದ ಉದ್ದೇಶ: ಎಫೆಸದವರೆಗೆ 4:11-12

ನಾಯಕತ್ವದ ಉದ್ದೇಶವು ಎಫೆದವರಿಗೆ 4:11 ರಲ್ಲಿ ತನ್ನ ಸಭೆಗೆ ಯೇಸುವಿನಿಂದ ಕೊಡಲ್ಪಟ್ಟ ಐದು ಕಾರ್ಯಗಳನ್ನು ಕೈಗೊಳ್ಳುವುದಾಗಿದೆ. ಅನೇಕರು ನಾಯಕತ್ವದ ಈ 5 ಅಂಶಗಳನ್ನು ವರಗಳು ಅಥವಾ ಅಧಿಕೃತ ಸ್ಥಾನಗಳೆಂಬುದಾಗಿ ವ್ಯಾಖ್ಯಾನಿಸಿದ್ದಾರೆ, ಆದರೆ  ಅವುಗಳು ಪಾತ್ರಗಳು ಅಥವಾ ಕಾರ್ಯಗಳಾಗಿವೆ ಎಂಬುದು ಹೆಚ್ಚು ನಿಖರವಾದ ವ್ಯಾಖ್ಯಾನವಾಗಿದೆ.

ದೇವರು ಐಕ್ಯತೆಯಲ್ಲಿ ವೈವಿಧ್ಯತೆಯ ಉದ್ದೇಶ ಹೊಂದಿದ್ದಾನೆ.

• ಸಭೆಯ ಐತಿಹಾಸಿಕ ಮಾದರಿಯು ಐದು ಕಾರ್ಯಗಳನ್ನು ವಿರೂಪಗೊಳಿಸಿದೆ:

• ಕ್ಯಾಥೋಲಿಕ್ - "ಕಾರ್ಯಾಲಯಗಳು"

• ಪೆಂಟೆಕೊಸ್ಟಲ್ - "ವರಗಳು"

• ಪ್ರತಿ ಪಾತ್ರ ಅಥವಾ ಅದರ ಕೊರತೆಯು ಸಭೆಯ ಜೀವನ ಮತ್ತು ಸೇವೆಯ ಮೇಲೆ ಪರಿಣಾಮ ಬೀರುತ್ತದೆ.

• ಐದು ಕಾರ್ಯಗಳು:

• ಅಪೊಸ್ತಲ: ಸಭೆಯನ್ನು ವಿಸ್ತರಿಸುವನು - ನಾವು ಸಾಗುತ್ತಿರುವಂತೆ ಮಾಡುವನು

• ಪ್ರವಾದಿ: ಸಭೆಯನ್ನು ತಿದ್ದುವನು - ನಮ್ಮನ್ನು ಶುದ್ಧವಾಗಿಡುವನು

• ಸುವಾರ್ತಿಕ: ಸಭೆಯನ್ನು ವಿಸ್ತರಿಸುವನು - ನಾವು ಸುವಾರ್ತೆಯನ್ನು ಹಂಚುತ್ತಿರುವಂತೆ ಮಾಡುವನು.

• ಸಭಾಪಾಲಕ: ಸಭೆಗೆ ಕರುಣೆಯನ್ನು ತೋರುವನು - ನಮ್ಮನ್ನು ಕಾಳಜಿವಹಿಸುವನು

• ಉಪದೇಶಿ: ಸಭೆಗೆ ಸತ್ಯವನ್ನು ಕೊಡುವನು - ನಾವು ಸತ್ಯದಲ್ಲಿ ಬೇರೂರುವಂತೆ ಮಾಡುವನು

ಸಂಘರ್ಷ(ಜಗಳ): ಅಪೊಸ್ತಲನಾದ ಸಭಾಪಾಲಕನಿಗಿಂತ, ಹಗಲಿನಿಂದ ರಾತ್ರಿಯಷ್ಟು ವಿಭಿನ್ನನಾಗಿರುತ್ತಾನೆ.

• ಸಭಾಪಾಲಕ - ಜನರ ಮೇಲೆ ಗಮನವಿಡುವನು

• ಅಪೊಸ್ತಲ - ಗುರಿಯ ಮೇಲೆ ಗಮನವಿಡುವನು

ವಚನ 12 ರಲ್ಲಿ ನಮಗೆ ಹೇಳುತ್ತಿರುವುದು ವಚನ 11 ರಲ್ಲಿ ಕೊಡಲಾದ 5 ಕಾರ್ಯಗಳಿಗಿಂತ ಹೆಚ್ಚು ಪ್ರಾಮುಖ್ಯವಾದದ್ದಾಗಿದೆ: ಪ್ರತಿಯೊಬ್ಬ ನಾಯಕನೂ ಸಹ 5 ಸಂಗತಿಗಳಿಗಾಗಿ ದೇವ ಜನರನ್ನು ಬಲಪಡಿಸುವುದು ತನ್ನ ಪಾತ್ರವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು:

• ತಂದೆಯಾದ ದೇವರೊಂದಿಗೆ ಅನ್ಯೋನ್ಯತೆ

• ಅವರ ಸಾಕ್ಷಿಗಳನ್ನು ತಿಳಿದುಕೊಳ್ಳುವುದು ಮತ್ತು ಹಂಚಿಕೊಳ್ಳುವುದು

• ದೇವರು ಕೊಟ್ಟ ವರಗಳನ್ನು ತಿಳಿದುಕೊಂಡು ಅವನ್ನು ತಮ್ಮ ಹಾದಿಯಲ್ಲಿ ದೇವರು ತರುವ ಯಾವುದೇ ಅಥವಾ ಎಲ್ಲ ಸಂಬಂಧಗಳಲ್ಲಿ ಉಪಯೋಗಿಸುವುದು.

• ದೇವರಾತ್ಮನ ಫಲಗಳಲ್ಲಿ ವೃದ್ಧಿಯಾಗುವುದು

• ದೇವರ ರಾಜ್ಯಕ್ಕಾಗಿ ಮತ್ತು ಆತನ ಮಹಿಮೆಗಾಗಿ ತಮ್ಮ ಜೀವಿತ ಮತ್ತು ಸೊತ್ತುಗಳನ್ನು ವಿನಿಯೋಗಿಸುವುದು

ಕೇಳಬೇಕಾದ ಪ್ರಶ್ನೆಗಳು:

• ಯಾವ ನಾಯಕನೂ ಎಲ್ಲಾ ವರಗಳನ್ನು ಹೊಂದಿದ್ದಾನೆ?

• ಯಾವ ವರವು ಹೆಚ್ಚು ಪ್ರಾಮುಖ್ಯವಾದದ್ದಾಗಿದೆ?

• ಯಾವ ವರವು ನಿಮಗೆ ಬೇಕಾಗಿಲ್ಲ?

• ಸಭಾಪಾಲಕರುಗಳಿಂದ ಅಥವಾ ಬೋಧಕರುಗಳಿಂದ ನಿಯಂತ್ರಿಸಲ್ಪಟ್ಟು, ಬೇರೆ ಕಾರ್ಯಗಳನ್ನು ಮತ್ತು ವರಗಳನ್ನು ಹೊಂದಿರುವ ನಾಯಕರೊಂದಿಗೆ ಯಾವುದೇ ಸಂಬಂಧವಿಲ್ಲದ ಸಭೆಗಳಿಗೆ ಏನಾಗುತ್ತದೆ?

ನಾಯಕತ್ವಕ್ಕಾಗಿ ಪವಿತ್ರಾತ್ಮನ ನಾಲ್ಕು ವರಗಳ ಜೊತೆಯಲ್ಲಿ (ಕೆಳಗೆ ನೋಡಿರಿ) ಎಫೆಸದವರಿಗೆ 4:11 ಐದು ಕಾರ್ಯಗಳು, ಪರಿಣಾಮಕಾರೀ ನಾಯಕತ್ವಕ್ಕಾಗಿ ಸಹಕರಿಸಿ!

• ಅಪೊಸ್ತಲ

• ಪ್ರವಾದಿ

• ಸುವಾರ್ತಿಕ

• ಸಭಾಪಾಲಕ

• ಉಪದೇಶಿ

• ಆಡಳಿತ - ವಿವರಗಳ ನಿರ್ವಹಣೆ (ರೋಮಾ.12:6-7)

• ನಿರ್ವಹಣೆ - ಜನರ ನಿರ್ವಹಣೆ (ರೋಮಾ. 12:8).

• ಸಂಸ್ಥೆ - ರಚನೆ(ವಿನ್ಯಾಸ)ಯ ನಿರ್ವಹಣೆ (1 ಕೊರಿಂಥ. 12:28).

• ಮಾರ್ಗದರ್ಶನ/ದರ್ಶನ - ಭವಿಷ್ಯದ ನಿರ್ವಹಣೆ (ಇಬ್ರಿಯ 13:7,17).

ನಾಯಕತ್ವದ ಕುರಿತ ಈ ದೈವಶಾಸ್ತ್ರದ ಪ್ರಾಯೋಗಿಕ ಪರಿಣಾಮಗಳು:

• ನಾಯಕತ್ವವು ಬಹುಸಂಖ್ಯೆಯದ್ದಾಗಿದೆ (ಒಂದಕ್ಕಿಂತ ಹೆಚ್ಚು)

• ನಾಯಕತ್ವವು ತನಗೆ ಕೊಡಲ್ಪಟ್ಟ ಹಳ್ಳಿ, ಪಟ್ಟಣ, ನಗರ , ರಾಜ್ಯ ಮತ್ತು ದೇಶ ಮಾತ್ರವಲ್ಲದೆ ಜನಸಂಖ್ಯಾ ವಿಭಾಗಗಳಿಗೆ ಸಾಂದರ್ಭಿಕವಾಗಿ ಸೂಕ್ತವಾಗುವಂತೆ ಅದರ ವೈವಿದ್ಯತೆಯಲ್ಲಿ ಮಿಶ್ರಣವಾಗುವ ವಿಭಿನ್ನವಾದ ವರವನ್ನು ಹೊಂದಿದೆ.

## ಅವಧಿ 3: ನಾಯಕತ್ವದ ಲಕ್ಷಣ (ಸ್ವಭಾವ) ಮತ್ತು ಮಾದರಿ: 1 ಕೊರಿಂಥದವರಿಗೆ 12:7-27 ಮತ್ತು 4-6

ನಾಯಕತ್ವದ ಲಕ್ಷಣ(ಸ್ವಾಭಾವ)ವನ್ನು 1 ಕೊರಿಂಥದವರಿಗೆ 12:7-27 ರಲ್ಲಿ ಕಾಣಬಹುದು: ನಾವು ದೇಹದ(ಸಭೆಯ) ಮೊದಲ ಸದಸ್ಯರೂ ಮತ್ತು ದೇಹದೊಳಗಣ ಎರಡನೆ ನಾಯಕರೂ ಆಗಿದ್ದೇವೆ.

ದೇಹದ ಸ್ವಭಾವದ ಐದು ಗುಣಲಕ್ಷಣಗಳು:

1. ವರಗಳು ಎಲ್ಲಾ ಕ್ರೈಸ್ತರಿಗೂ ಇರುವವುಗಳಾಗಿವೆ (ಮಕ್ಕಳಿಗೆ ಸಹ )
2. ವರಗಳು ಎಲ್ಲರ ಹಿತಕ್ಕಾಗಿ ಕೊಡಲ್ಪಟ್ಟಿವೆ
3. ವರಗಳು ವೈವಿಧ್ಯತೆಯಲ್ಲಿನ ಐಕ್ಯತೆಯ ಪ್ರಾಮುಖ್ಯತೆಯನ್ನು ತೋರಿಸುತ್ತವೆ
4. ವರಗಳು ಆತ್ಮನಿಂದ ನಿರ್ಧರಿಸಲ್ಪಡುತ್ತವೆ
5. ದೇಹದಲ್ಲಿ ಈ ವರಗಳು ವಹಿಸುವ ಪಾತ್ರವು ದೇವರಿಂದ ನಿರ್ಧರಿಸಲ್ಪಡುತ್ತದೆ

ನಾಯಕತ್ವದ ಮಾದರಿಯು 1ಕೊರಿಂಥದವರಿಗೆ 12:4-6 ರಲ್ಲಿ ಕಂಡುಬರುತ್ತದೆ. ಇಲ್ಲಿ ನಮ್ಮ ವೈವಿಧ್ಯತೆಯಲ್ಲಿನ ಐಕ್ಯತೆಗಾಗಿ  ತ್ರೈಯೇಕತ್ವದ ಮಾದರಿಯಿದೆ.

• ತ್ರೈಯೇಕತ್ವವು ದೇಹದೊಳಗಣ ವರಗಳು, ಪಾತ್ರಗಳು, ಮತ್ತು ಭೌಗೋಳಿಕ  ನಿಯೋಜನೆಯನ್ನು ವಿವರಿಸುವಲ್ಲಿ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಐಕ್ಯತೆಯಲ್ಲಿ ಕಾರ್ಯ ಮಾಡುತ್ತದೆ

• ಕಾರ್ಯಗಳ ಮತ್ತು ವರಗಳ ಸಂಯೋಜನೆ:

• ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ಆದರೆ ದೇವರಾತ್ಮನು ಒಬ್ಬನೇ

• ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು, ಆದರೆ  ಕರ್ತನು ಒಬ್ಬನೇ

• ಪರಿಣಾಮದಲ್ಲಿ ಬೇರೆ ಬೇರೆ ವಿಧಗಳುಂಟು ಆದರೆ ತಂದೆಯು ಒಬ್ಬನೇ.

ಒಬ್ಬ ವ್ಯಕ್ತಿಯಾಗಿ ನಿಮಗೆ ನಾಲ್ಕು ಭಾಗಗಳು:

| | |
|---|---|
| **ಆತ್ಮೀಕ ವರ**<br><br>**ದೇವರಾತ್ಮನು** | **ಸೇವೆಗಳು**<br><br>**ದೇವರಾದ ಮಗನು** |
| **ವ್ಯಕ್ತಿತ್ವ**<br>**ಸಾಮರ್ಥ್ಯಗಳು**<br>**ಅನುಭವಗಳು**<br>**ತರಬೇತಿ**<br><br>**ದೇವರಾತ್ಮನು** | **ಪರಿಣಾಮಗಳು**<br><br>**ತಂದೆಯಾದ ದೇವರು** |

## ಅವಧಿ 4: ನಾಯಕತ್ವದ ಮನೋಭಾವ

ನಾಯಕತ್ವದ ಮನೋಭಾವವು ಮುಕ್ತಾಯ 20:20-28 ರಲ್ಲಿ ಯೇಸುವು ತನ್ನಲ್ಲಿನ ಸೇವಕನ ಹೃದಯ(ಮನಸ್ಸು)ವನ್ನು ತೋರಿಸುವಲ್ಲಿ ಕಂಡುಬರುತ್ತದೆ.

• ಯೇಸುವಿನಿಂದ ನಾಯಕತ್ವದ ದೇವಶಾಸ್ತ್ರ:

• ಯೇಸುವು ಇಸ್ರಾಯೇಲ್ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಬಂದನೆಂಬುದಾಗಿ ಶಿಷ್ಯರುಗಳು ನಂಬಿದ್ದರು.

• ಯೇಸುವು ಅವರಿಗೆ ಲೋಕದವರ ಕಡೆಗೆ ನೋಡಬೇಕೆಂಬುದಾಗಿ ಹೇಳಿದನು - ಅವರು ಮೇಲಣಿಂದ ಕೆಳಗೆ ಆಳುತ್ತಾರೆ, ಆದರೆ "ನಿಮ್ಮಲ್ಲಿ ಹಾಗಿರಬಾರದು!" (ಮತ್ತಾಯ 20:26).

• ನಾವು ನಾಯಕರಾಗಬೇಕಾದರೆ, ನಾವುಗಳು:

• ಒಬ್ಬ ಸೇವಕನಾಗಬೇಕು

• ಒಬ್ಬ ಆಳಾಗಬೇಕು

• ಸಾಯಲು ಸಿದ್ದರಾಗಬೇಕು - ನಮ್ಮ ಪ್ರಾಣಗಳನ್ನು ಕೊಡುವದಕ್ಕೆ ಸಿದ್ಧರಾಗಿರಬೇಕು

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

**ಅಂತರರಾಷ್ಟ್ರೀಯ ಸಂಪೂರ್ಣ ಸಭಾ ಸ್ಥಾಪನೆಯ ಕುರಿತ ಹೆಚ್ಚಿನ ಮಾಹಿತಿಗಾಗಿ, ನಮ್ಮ ವೆಬ್ ಸೈಟ್ SCPGLOBAL.ORG. ನ್ನು ಸಂಪರ್ಕಿಸಿರಿ.**

ಡ್ವೈಟ್ ಸ್ಮಿತ್ ರವರ ಪುಸ್ತಕಗಳು

ದೈವಿಕ ವಿನ್ಯಾಸ: ಆದಿಯಲ್ಲಿ

ನವೀಕರಣ: ಸಭಾ ಜೀವಿತದಲ್ಲಿನ ದೈವಿಕ ವಿನ್ಯಾಸದ ಮೇಲೆ ಒಂದು ಸಮೀಕ್ಷೆ

ತುದಿ/ಕೊನೆಯಲ್ಲಿ ಏಕಾಂಗಿಯಾಗಿರುವುದು: ಸಭಾಪಾಲಕನ ಕುರಿತ ನಮ್ಮ ವಿಚಾರವು ನಿಜವಾಗಲೂ ಸತ್ಯವೇಧಾರಿತವಾಗಿದೆಯೋ?